


ಕರ್ನಾಟಕ ಸರ್ಕಾರ

ಬೊಳ್ಪು

ಲೋಕೇಶ್ ಕುಂಚಡ್ಕ

ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ

ಬೊಳ್ಪು

ಬೊಳ್ಪು

ಅರೆಭಾಷೆ ಕಥಾ ಸಂಕಲನ

ಲೋಕೇಶ್ ಕುಂಚಡ್ಕ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

'**BOLPU**' a collection of story in Arebhase language written by Kunchadka Lokesh, Kuchadaka, Aletty Village, Sullia Taluk, Dakshina Kannada District. Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2016**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : viii + 50

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಡಾ. ಪೂವಪ್ಪ ಕಣಿಯೂರು
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀ ಮೋಹನ ಸೋನ
ಶ್ರೀಮತಿ ಸಂಗೀತ ರವಿರಾಜ್


ಪ್ರಕಾಶಕರು : **ರಿಜಿಸ್ಟ್ರಾರ್**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272-223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಈ ಪುಸ್ತಕನ ಅರ್ಪಣೆ ನನ್ನ ತಾತಾಂಗೆ



ದಿ| ಚನಿಯಪ್ಪ ಗೌಡ ಕುಂಚಡ್ಕ

ಅಧ್ಯಕ್ಷರ ಮಾತ್

ಅರೆಬಾಸೆಲಿ ಬರೆಯವು ಒಳೊಂತೇಳ್ವ ವಿಚಾರ ಕೇಳ್ರೆ ಖುಷಿ ಆದೆ. ಸರಕಾರ ರಚನೆ ಮಾಡ್ದ ಅರೆಭಾಷೆ ಅಕಾಡೆಮಿಗೆ ಕೂಡ ಸಾರ್ಥಕತೆ ಇದ್ದದೆ. ಶುರುಗೆ 4 ಪುಸ್ತಕನ ಪ್ರಕಟನೆ ಮಾಡ್ದ ಗೌರವ ಅಕಾಡೆಮಿಗೆ ಸಲ್ಲಿದೆ, ಮತ್ತೆ 6 ಪುಸ್ತಕನ ಪ್ರಕಟಣೆ ಮಾಡ್ತಾವೊಳೊ.

ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ತುಲೆ. ಲೇಖಕರ್ ಅವರ ಸೃಜನ ಶೀಲತೆನ ಈ ಲೇಖನಲಿ ತೋರ್‍ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಒರೆಗೆ ಹಚ್ಚಿಯೊಳೊ.

ಈ ನಿಟ್ಟ್‌ಲಿ ಕುಂಚಡ್ಕ ಲೋಕೇಶ್‌ನವು 'ಬೊಳ್ಪು'ಂತೇಳುವ ಕಥಾಸಂಕಲನ ರಚಿಸಿಯೊಳೊ ಅರೆಭಾಸೆಲಿ ಹೊತ್ತಾರೆ ಕನ್ನಡಲಿ ಬೆಳಿಗ್ಗೆ ಹಂಗೆ ದಕ್ಷಿಣ ಕನ್ನಡದ ಅರೆಭಾಸೆವು ಬೊಳ್ಪುಂತೆಳುವ ಶಬ್ದ ಪ್ರಯೋಗ ಮಾಡುವೆ, ಬೊಳ್ಪು ಬರಿ ಬೆಳಕು ಅಲ್ಲ ಜೀವನದ ಕತ್ತಲೆನ ಕಳೆವ ಬೆಳಕುಂತೇಳ್ದು ಲೇಖಕನ ಅನಿಸಿಕೆ.

ಈ ಕೃತಿಲಿ ಬರ್ದ 7 ಉಪಕಥೆಗ ಬೇರೆಬೇರೆ ಆಗಿದ್ದು "ಸೋಂಮ್ಮನ ಕಾರ್‌ಬಾರ್" ಬ್ರಿಟೀಷರ ಕಾಲಲಿ ಸುಂಕ ವಸೂಲ್‌ಗಾರನಾಗಿ ಮತ್ತೆ ಸ್ವಾತಂತ್ರ್ಯ ನಂತರ ಅನುಭವಿಸುವ ಯಾತನೆ ಬಗ್ಗೆ ಹಂಗೆ "ಕಾಡುನ ಸಹವಾಸಲಿ" ಬಹಿಸ್ಕಾರಕ್ಕೆ ಒಳಪಟ್ಟ್ ಊರು ಬಿಟ್ಟ್ ಕಾಡ್ ಸೇರ್ದ ಮಾಣಿ ಮರ್ದು ಕುಟುಂಬ ಮತ್ತೆ ಸರಕಾರದ ಗಿರಿಜನರ ಪುನರ್ವಸತಿ ಕಾರ್ಯಕ್ರಮಲಿ ಊರಿಗೆ ಬಂದ್ ಮತ್ತೆ ಗಿರಿಜನ ಸಮೂಹ ಸೇರ್ದ ಮಾಣಿಮರ್ದು ಕುಟುಂಬನ ಗಿರಿಜನರೆ ಹೊರಗೆ ಹಾಕಿದ ಕಥೆನ ಮಾರ್ಮಿಕವಾಗಿ ಬರ್‍ದೊಳೊ.

ಯುವ ಬರಹಗಾರರಾದ ಲೋಕೇಶ್ ಕುಂಚಡ್ಕ ನವ್ಕ, ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

ಬೊಳ್ಪು

ನನ್ನ ಮಾತ್

ಭಾಷೆನ ಉಳುಸುವ ಕೆಲ್ಸ ಹೇಂಗೆ ಮಾಡೊಕೂ ತೇಳಿರೆ ಏನಾರು ಬರಿಯೊಕು, ಇಲ್ಲೆತೇಳಿರೆ ಅನುವಾದ ಮಾಡೋಕು, ಬರಿ ಅನುವಾದ ತೇಳಿರೆ ಬೇರೆ ಭಾಷೆಂದ ನೇರವಾಗಿ ತಾದು ರೂಪಾನುವಾದ, ಇಲ್ಲೆತೇಳಿರೆ ಭಾವಾನುವಾದ ಮಾಡೊಕು ಅಷ್ಟೆ. ಆದರೆ "ಅರೆಭಾಷೆ" ತೇಳುವ ಭಾಷೆ ಆಳಿವುನ ಅಂಚಿಗೆ ಸಾಗುತಿರುದ್ದು ಬೇಜಾರದ ಸಂಗತಿ ಅರೆಭಾಷೆ ತೇಳ್ದು ಕೇಲವುಕ್ಕೆ ಮಾತ್ರ ಸೀಮಿತ ಆಗುತ್ತಾವುಟ್ಟು ಯಾಕೆ? ಹಿಂಗೆ ತೇಳ್ದು ಅರ್ಥ ಆದುಲೆ; ಇನ್ನು ಯೋಚಿಸೊಕು, ಚಿಂತನೆ ನಡುಸೊಕ್ಕು ತೇಳುವ ಕಳಕಳಿ ನನ್ನದು, ಮಾತ್ರ ಅಲ್ಲ ಅರೆಭಾಷೆನ ಬಗ್ಗೆ ಇರುವ ಕೀಳರಿಮೆನ ಹೊಗುಸೊಕ್ಕು, ಭಾಷೆನ ಬಗ್ಗೆ ಇನ್ನಷ್ಟು ಕಾರ್ಯಕ್ರಮಂಗ ನಡಿಯೊಕು,ಅದರ ಅಗತ್ಯ ಉಟ್ಟು. ಈ ಪುಸ್ತಕನ ಹೆಸುರು ಕೇಳಿರೆ ಯಾರಿಗೂ ಸರಿಯಾಗಿ ಅರ್ಥ ಆಕಿಲೆ ಯಾಕೆ ತೇಳಿರೆ **'ಬೊಳ್ಪು'**. ಬರಿ..... ಬೊಳ್ಪು ತೇಳಿರೆ ಯಾರಿಗೂ ಗೊತ್ತಾಕಿಲೆ. ಅದು ಬರಿ ಬೆಳಕು ಅಲ್ಲ ಜೀವನದ ಬೆಳಕು. ಅದರ ಬಿಚ್ಚಿ ಇಸೋಕು ತೇಳಿ ಎಲ್ಲೊವು ಹೇಳುತ್ತಿದ್ದೊ, ಅದ್ಕೆ ಈ ಒಂದು ಪುಟ್ಟ ಪ್ರಯತ್ನನ ಮಾಡಿಯಳೆ ಅಷ್ಟೇ.

ಇದರಲ್ಲಿ ಬರುವ ಪಾತ್ರಂಗ ಕೇವಲ ಕಾಲ್ಪನೀಕವಾಗಿರುವ ಪಾತ್ರಂಗ, ಮತ್ತೆ ಕೆಲವು ಕಡೆ ನನ್ನ ಜೀವನ ಅನುಭವಗಳ ಹಂಚಿಕಂಡಳೆ, ಯಾಕೆ ತೇಳಿರೆ ಜೀವನ ತೇಳಿರೆ ಏನು ತೇಳಿ ಕೆಲೊವುಕ್ಕೆ ಗೊತ್ತುಲೆ. ಇದರಲ್ಲಿ **"ಯಾರ ಮನಸ್ಸುನ ನೊಯಿಸೊಕು, ಮತ್ತೆ ಯಾರನ್ನೂ ಉದ್ದೇಶಪೂರ್ವಕವಾಗಿ ಟೀಕೆ ಮಾಡೋಕು ತೇಳ್ದು ಅಲ್ಲ"**. ಸಮಾಜಲಿ **ಇರುವ ಕೊಳೆಗ ತೊಳ್ದು ಹೋಗಲಿ ತೇಳ್ದು** ನನ್ನ ಉದ್ದೇಶ. ಹಾಂಗೆನೆ ರಾಜಕಾರಣಿಗ ಮಾಡುವ ಕಾರ್ಬರ್‌ಗ ಜನಕ್ಕೆ ಅರ್ಥ ಮಾಡುವಂಗೆ ವಿವರಸ್ಸೋಕು ತೇಳುವ **"ನನ್ನ ಮನದ ಇಚ್ಚೆನ ವ್ಯಕ್ತ ಪಡ್‌ಸ್ಸಿಯಳೆ ಅಷ್ಟೇ"**. ನಮ್ಮ ಹೈದಂಗ ಇಂದು ಎತ್ತ ಸಾಗ್ತಾ ಒಳೋ ತೇಳ್ದು, ಹಂಗೆನೆ ನಾವು ಸಂಪ್ರದಾಯನ ಹೆಂಗೆ ಬಿಚ್ಚಿ ಹೊರಗೆ ಬಂದವೆ ತೇಳುವ ಚಿತ್ರಣ ಕೊಡುವ ಸಣ್ಣ ಕೆಲ್ಸ ಮಾಡಿಯಾಳೆ.

ಒಂದೊಂದು ಕಥೆನ ಹೆಸರು ಕೇಳಿರೇ ವಿಚಿತ್ರ ಅನ್ಸುದು, ಯಾಕೆ ತೇಳಿರೆ?. ಒಂದೊಂದು ಕಥೆಗಳಿಗೆ ಭಿನ್ನ-ಭಿನ್ನ ಹೆಸರುಗಳ ಕೊಟ್ಟಳೆ. ಗಂಡು ಸಮಾಜಲಿ ಹೆಂಗೆ ಹೆಣ್ಣುನ ನಡುಸ್ಸಿ ಕಂಡದೇ... ತೇಳ್ದು ಹಂಗೆ ಗಂಡು ಹೆಣ್ಣುನ ಅರ್ಥ ಮಾಡಿಕಣದೇ, ಹೆಣ್ಣು ಗಂಡುನ ಅರ್ಥ ಮಾಡಿಕಣದೇ ಒಳದು ಒಂದು ದುರಂತ ಅಲ!.

ಹಿಂಗೆನೇ ಪಂಡು ಒಂದ್ ಕಾಲ ಇತ್ತು! ಅದರಲ್ಲಿ ಕಷ್ಟಗ ಮತ್ತೆ ಬಡತನ ತೇಳ್ದು ಜನಕ್ಕೆ, ಸ್ವಲ್ಪ ಅರ್ಥ ಆಗಲಿ. ಹಿಂಗೆನೆ ಇಂದ್ ಮಕ್ಕಳಿಗಾಗಿ ಏನೆಲ್ಲಾ ತ್ಯಾಗಕ್ಕೆ ಸಿದ್ಧ! ಆಗಿರುವ,

ನಾವು ಮಕ್ಕಳಿಗೆ ಅದು ಕೊಟ್ಟರೆ ಹಾಳಾದವೇ, ಇದು ಕೊಟ್ಟರೆ... ಹಾಳಾದವೇ ತೇಳುವ ಮನಸ್ಥಿತಿನ ಬುಟ್ಟು ಹೊರಗೆ ಬರಲಿ. ಹಿಂಗೆನೆ ತಬ್ಬುಲಿ ಮಕ್ಕಳ ನೋಡುವ ರೀತಿ ಬದಲಾಕು; ಮಾತ್ರ ಅಲ್ಲ ಅವುಕ್ಕು ಒಂದು ಸ್ವಾತಂತ್ರ್ಯ ಉಟ್ಟು ತೇಳ್ದು ಗಮನಿಸೋಕಾದು. ಇಂದ್ ಅಂತಹ ಮಕ್ಕಳಿಗೆ ಅಡಿ, ಇಲ್ಲೆ ಆಕಾಶ ಇಲ್ಲದಾಂಗೆ ಮಾಡುದ್ದು ಬೇಡ.(ಈ ಕತೆನ ಓದ್‌ಕನ, ಯಾವುದೆ ರೀತಿನ ಪೂರ್ವಾಗ್ರಹ ಪೀಡಿತರಾಗದೆ, ಓದ್‌ಕನ ಯಾವುದೆ ವಿಷಯ,ಜಾತಿ,ಧರ್ಮ, ಆಮಿಷಗಳಿಗೆ ನಿಮ್ಮ ನೇರ ದೃಷ್ಟಿಲಿ ಇರುಲ್ಲಿ, ತಪ್ಪು ತೇಳಿ ಅಸ್ಸಿರು ಸರಿಮಾಡಿಕಂಡು ಓದಿ.)

ಹಿಂಗೇನೆ ಇಡಿ ಸಮಾಜಲಿ ಹಿಂದೆ ಉಟ್ಟು ತೇಳಿ ಅರ್ಥ ಅಲ್ಲ, ಅದರಲ್ಲಿನೂ ಕೆಲವೊ ಮನೆಗಳಲ್ಲಿ ಈ ತರ ನಡಿತಾ ಇರ್ದು ತೇಳಿ ನಂಗೆ ಅನುಸ್ಸಿತು. ಅದುಕ್ಕೆ ಈ ಕಥೆಗಳ ನಾ, ಬರ್ದೆ...... **ನೀವು ಓದಿಕೆ ಮರಿಬೋಡಿ.**

ಹಂಗೆನೆ ಪ್ರೋತ್ಸಾಹ ಕೊಟ್ಟೋವು ಕೂಡ ಓಲೊ. ಅದರಲ್ಲಿ ಕೂಡ ಮುಖ್ಯ ಹೆಸರ್ಗ ಹಿಂದೆ ಉಟ್ಟು. ಡಾ.ಪೂವಪ್ಪ ಕಣಿಯೂರು, ಡಾ.ಶಿಶಿಲ, ಸಬಿಹಾ ಮೇಡಂ, ಚಿನ್ನಪ್ಪ ಸರ್, ಸೊಮಣ್ಣ ಸರ್, ಶಿವರಾಮ ಸರ್, ಧನಂಜಯ್ ಸರ್, ಅಭಯ್ ಸರ್, ತಿದ್ದಿದ ನಮ್ಮ ಬಾವ ಯುಶವಂತ ಕುಡೆಕಲ್ಲು ಮತ್ತೆ ಅಪ್ಪ ಆನಂದ, ಅಮ್ಮ ಭಾಗಿರತಿ, ತಮ್ಮ ರೋಹಿತ್, ದೊಡ್ಡಪ್ಪ, ದೊಡ್ಡಮ್ಮ, ಅಕ್ಕ, ತಂಗೆ, ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾಂವ, ಗೆಳೆಯರು, ಗೆಳತಿಯರು ಹಿಂಗೆ ಎಲ್ಲೊವು ಪ್ರೋತ್ಸಾಹ ಕೊಟ್ಟೊಲೊ. ಹಿಂಗೆನೆ ಅಕ್ಷರ ಜೊಡಣೆ ಮಾಡ್‌ದ್ದ ಯಸ್.ಯಂ.ಎಂಟರ್ ಪ್ರೈಸಸ್ ಕೊಣಾಜೆ ಇದರ ಸಿಬ್ಬಂಧಿವರ್ಗ ಮತ್ತು ಮಾಲಕರಿಗೆ, ಮತ್ತೆ ಅರೆಭಾಷೆ ಅಕಾಡೆಮಿನ ಎಲ್ಲಾ ಸದಸ್ಯರಿಗೆ, ಮುದ್ರುಸಿದ ಮಡಿಕೇರಿಯ ಶ್ರೀ ಕೃಷ್ಣ ಪ್ರಿಂಟರ್ಸ್‌ನವುಕೆ, ಹಿಂಗೆನೇ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ನನ್ನ ಎಲ್ಲಾ ಗೆಳೆಯ, ಗೆಳತಿಯರಿಗೆ ಮತ್ತು ತಮಗೆಲ್ಲರಿಗೂ ನಾನು ಅಭಾರಿ.

ದನ್ಯವಾದಂಗ.

ತಮ್ಮ ವಿಶ್ವಾಸಿ,

ದಿನಾಂಕ:10\2\2015

ಸ್ಥಳ : ಕುಂಚಡ್ಕ

ಲೋಕೇಶ್ ಕುಂಚಡ್ಕ.

ಒಳ ಪುಟಲಿ

ಬೊಳ್ಪು

ಸೋಂಮ್ಪನ ಕಾರ್‌ಬಾರ್


ಸೋಂಮ್ಪ ಗೌಡಂಗೆ ಮಾನಸಿಕ ತೇಳಿ ಗುತ್ತಿಗಾರಿನ ಜನ ಮಾತಾಡ್‌ತ್ತಿದ್ದೊ. ಇಡೀ ಗುತ್ತಿಗಾರುಲಿ ಹಿಂದೆ ತಲೆ ಸೆರಿ ಇಲ್ಲದಂಗೆ ಯಾರು ಆತಿತ್ತುಲ್ಲೆ. ಅದರಲ್ಲಿ ಪಸ್ಟ್‌ಗೆ ತಲೆಸೆರಿ ಇಲ್ಲದಂಗೆ ಅದವರಲ್ಲಿ ಸೋಂಮ್ಪ ಒಬ್ಬ.

ಗುತ್ತಿಗಾರುಲಿ ತಲೆಸೆರಿ ಇಲ್ಲದ್ದಂಗೆ ಆದರಲ್ಲಿ ಸೋಂಮ್ಪ ಅನಕ್ಷರಸ್ಥ ಏನು ಅಲ್ಲ. ಏಕೆ ತೇಳಿರೆ ತಲೆಸೆರಿ ಇಲ್ಲದ್ದಂಗೆ ಆಗಿ ಅವ್ವ ಒಂದು ದಿನ ಇರುತ್ತಿತ್‌ಲ್ಲೆ!. ಜೀವಮಾನ ಇಡೀ ತಲೆಸೆರಿ ಇಲ್ಲದ್ದಂಗೆ ಇರುತ್ತಿದ್ದೊ. ಜನ, ಇವನ ನೋಡಿ ಅಯ್ಯೋ! ಪಾಪ!, ತೇಳಿ ಕನಿಕರ ತೋರ್‌ಸ್ತಿದ್ದೊ! ಅವನ ಸಮಾಜ ತಿರಸ್ಕೃತ ಸ್ಥಿತಿಲಿ ನೋಡ್‌ತ್ತಿತ್. ಹಿಂಗೆ ತಲೆಸೆರಿ ಇಲ್ಲದ್ದಂಗೆ ಆದೊವುಕೇ ಒಂದು ಕಥೆ ಇದ್ದದೆ.

ಸೋಂಮ್ಪ ಗೌಡ ಗುತ್ತಿಗಾರು ಊರಿಗೆ ಒಬ್ಬ ಪ್ರಸಿದ್ಧ ವ್ಯಕ್ತಿ. ಅವ್ವ ಸರಕಾರಿ ಉದ್ಯೋಗಿ, ಬಿಳಿಯರ ಆಳ್ವಿಕೆ ಸಂದರ್ಭದಲ್ಲಿ ನೌಕರಿಗೆ ಸೇರಿತ್. ಬಿಳಿಯರ ನೀತಿ-ನಿಯಮ, ಆಚಾರ-ವಿಚಾರ, ಶಿಸ್ತುನ ಹೊಗಳುತ್ತಿತ್ತು ಅವ್ವಂಗೆ ಹಳೆ ಕಥೆಗ ಆಗಾಗ ನೆಂಪ್ಪು ಆಗ್‌ತ್ತಿತ್. ಗುತ್ತಿಗಾರುಲಿ ಇಬ್ಬರು ಇದ್ದೊ. ಅದರಲ್ಲಿ ಚಾಮ ಒಬ್ಬ. ಸೋಂಮ್ಪ ಗೌಡ ಇನ್ನೊಬ್ಬ. ಇಬ್ಬೊರು ಹಳೆ ನೆಂಪುಗಳ ನೆಂಪಿಸುತ್ತಿದ್ದೊ. ಒಬ್ಬನೊಟ್ಟಿಗೆ ಕೇಳಿರೆ ಸಾಕ್ಷಿಗೆ ಮತ್ತೊಬ್ಬನ ಹೆಸ್ರ್‌ನ ಹೇಳ್‌ತ್ತಿತ್.

ಬಿಳಿಯರ ಆಡಳಿತ ಕಾಲಲಿ ಸೋಮ್ಪಂಗೆ ಸುಂಕ ವಸೂಲಿ ಮಾಡುವ ಕೆಲಸ ವಹಿಸಿದ್ದೊ. ಕೆಲ್ಸ ವಹಿಸಿಕಂಡ ಮೇಲೆ ಅವ್ವಂಗೆ ಕೊಂಬ್ ಬಂದಿತ್. ಎಲ್ಲೊವು ಆವ್ವಂಗೆ ಮರ್ಯಾದೆ ಕೊಡುತ್ತಿದ್ದೊ. ಅವು ಬೆಳ್‌ದ್ದ್, ಸಾಮಾನ್ ಗುತ್ತಿಗಾರುಗೆ ತಂದ್ದೊವ್

ತೆರಿಗೆನೊಟ್ಟಿಗೆ ಚೂರ್-ಚೂರ್ ಕೊಡುತ್ತಿದ್ದೊ. ಆಗಾಗ ದೇಶಲಿ ಕ್ರಾಂತಿ ಆರಂಭ ಆತ್ತಿತ್. ಸ್ವಾತಂತ್ರ್ಯ ಸಂಗ್ರಾಮದ ಬಿಸಿ ಆರಿಕೆ ಮುಂದೆ, ಮತ್ತೊಂದು ಬಿಸಿ ಏರ್‌ತ್. ಆಗಲೇ ಸೋಂಮ್ಪುಂಗೆ ಮೊದುವೆ ಆದ್. ಕುಂಞಕ್ಕ ತೇಳುವ ಪಂಜದ ಕಡೆಂದ ತಂದ ಹೆಣ್ಣ್‌ನ ಮೊದುವೆ ಆತ್. ಇಬ್ರೊರು ಒಟ್ಟಿಗೆ ಕುದ್ದುಕಂಡು, ಗೇಟು ಹಕ್ಕಲೆ ಎಷ್ಟೋ ಹೊತ್ತ್ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಮಾತಾಡುತ್ತ್‌ದ್ದೊ. ಬಿಳಿಯರ ವಿರುದ್ಧ ಹೋರಾಡುತ್ತಿದ್ದ 'ಗಾಂಧಿ' ಒಬ್ಬನ ಹೆಸ್ರ್ ಜೋರಾಗಿ ಕೇಳ್‌ತಿತ್. ಸೋಂಮ್ಪುಂಗೆ ಮತ್ತೆ ಅವ್ವನ ಹೆಣ್ಣ್‌ಗೆ, ಯಾಕೆ ಈ ಹೋರಾಟ ಅಂತ ಗೊತ್ತಿತ್ತ್‌ಲ್ಲೆ. ಒಟ್ಟ್‌ಲಿ ಬಿಳಿಯರು ಈ ದೇಶನ ಬುಟ್ಟು ಹೋಕ್ ತೇಳ್‌ದ್ದ್ ಅದರ ಉದ್ದೇಶ. ಸೋಂಮ್ಪು ದೇಶ ಭಕ್ತ ಏನ್ ಅಲ್ಲ. ಬಿಳಿಯರ ನಡುಲಿ ಕರಿಯರು ಹುಚ್ಚರಂಗೆ ತಿರುಗಾಡ್ತುವ್. ಬಿಳಿಯರ್ಗೆ ಏಕೆ?, ನಮ್ಮ ಜನರೊಟ್ಟಿಗೆ, ಸಮಾಧಾನ್ನಂದ ಯಾಕೆ ಇರಿಕೆ ಬೊತ್ತು? ತೇಳಿ ಮಾತಾಡುತ್ತಿದ್ದೊ. ಅಂತೂ "ಗಾಂಧಿವಾದಲೀ ಸತ್ಯವುಟ್ಟುತೇಳಿ ಅನ್ನಿಸಿತ್ ". ಆಗ ಸತ್ಯಾಗ್ರಹ, ಸುಂಕ ನಿರಾಕರಣೆ, ತಂತಿ ಕತ್ತರಿಸೀದ್ ಮುಂತಾದ ತೊಂದರೆ ಜೋರ್ ಇರುತ್ತಿತ್. ಸೋಮ್ಪುಂಗೆ ಸುಮ್ಮನೆ ಇರಿಕೆ ಅತಿತ್ತ್‌ಲ್ಲೆ. ಅಂವ್ವ ಒಂದು ಕಡೆ ನಿಂತು ಕೆಲ್ಸ ಮಾಡ್ವಾಕಾಯಿತ್. ಸುಂಕ ಕೊಡದೆ ಜನ ಓಡಾಡುತ್ತಿದ್ದೊ. ಅವರ ನೋಡಿಕೊಂಡು ಇರಿಕೆ ಅತಿತ್ತ್‌ಲ್ಲೆ. ಆಗ ಸೋಂಮ್ಪು ಗಾಂಧೀನ ಮನೆ ಹಾಳಾಗಿ........ ಹೋಗಲಿತೇಳಿ ಹಿಡಿ ಶಾಪ ಹಾಕುತ್ತಿತ್. ಬೆಳ್ಳಾರೆ ಸರ್ಕ್ಯುಟ್ ಹೌಸ್‌ನ್ನ ಕೆಲ್ಸ ದಕ್ಕಿಸಿಕೊಂಡೊತ್. ಸುಂಕದ ಕಟ್ಟೆದ್ದ ಪಾರ್ದ್ವಾತ್. ಬಿಳಿಯ ಅಧಿಕಾರಿಗಳಿಗೆ ಚಿಕಿತ್ಸೆ ಕೊಡುವ ಕೆಲ್ಸ ತಕಡ್ಡೊತ್ ಸೋಂಮ್ಪು. ಅವು ಕ್ರೂರಿಗಳಾಂಗ್ಡೆ ಇದ್ದರೂ ನಮ್ಮನ್ನು ಮನುಷ್ಯರ್ಡಾಂಗೆ ಕಾಣತ್ತಿದ್ದೊ.



ಸತ್ಯಾಗ್ರಹ ಬಿಸಿ ಏರಿಕೆ ಸುರು ಆತ್. ಯಾರು, ಯಾರೋ ಮನ್ಡೆಂದ, ದೊಡ್ಡವರ ಮಕ್ಕ, ಮನೆ ಬುಟ್ಟು ಓಡಿ ಹೋಗಿ ಗಾಂಧಿ ಜೊತೆ ಹೋರಾಡಿಕೆ ಸೇರಿಯೊಳೊ ತೇಳಿ ಸುದ್ದಿ ಬಾತ್ ಲಾಠಿಚಾರ್ಜು, ಗೋಲಿಬಾರು, ಸತ್ಯಾಗ್ರಹ ಯಾಗೋಳ್ ನಡೆತಿತ್ತ್, ಸೋಮ್ಪಂಗೆ ಸರಿಯಾದ ನಿರ್ಧಾರ ಇರುತಿತ್ತ್‌ಲ್ಲೆ. ಫೋನ್ ವಯರ್ ತುಂಡು ಮಾಡ್‌ದೊ ತೇಳಿಕ್ಹಾನ, ಗಾಂಧೀನ ಬಗ್ಗೆ ಸಿಟ್ಟು ಬಾತ್ತಿತು. ಗುಂಡು ಹೊಡ್ಡೊ ತೇಳಿಕ್ಹಾನ ಬಿಳಿಯರ ಮೇಲೆ ಸಿಟ್ಟು.

ಸ್ವಾತಂತ್ರ್ಯದ ಬಿಸಿ ಏರಿ ಹಳ್ಳಿ ತಾಲೂಕುಗಳಿಗೂ ಹಬ್ಬಿತ್ತ್. ಸೋಂಮ್ಪು ಬಿಳಿಯರ ಕೆಲಸ, ಕಾರ್ಯ ಮಾಡಿಕೆ ಹಿಂದೇಟ್ ಹಾಕಿಕೆ ಸುರು ಮಾಡ್ತ್. ಅಧಿಕಾರಿಗ ಬಂಗಲೆಗೆ ಬಾಕನ ಒಟ್ಟಿಗೆ ಬೇರೆಯವರ ಕರ್‍ಕೊಂಡು ಬಾತಿತ್ತ್‌ದ್ದೊ. ಅವು ಸೋಂಮ್ಪುನ ಓರೆ ಕಣ್ಣಲಿ ನೋಡುತ್ತಿದ್ದೊ. ಕುಂಞಕ್ಕಂಗೆ ಸೋಂಮ್ಪುನ ಬೇಸರ ನೋಡಿಕೆ ಆಗದೆ ತಾಲೂಕು ಕಛೇರಿಗೆ ವರ್ಗಾವಣೆ ಮಾಡ್‌ಸ್ಸಿಕೆ ಹೇಳ್ತ್. ಆಗ ಸೋಮ್ಪು ತಾಲೂಕು ಆಫಿಸ್‌ನ ಕೇಲ್ಸಕ್ಕೆ ಭಾವ ಹೊತ್ತಿಗೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತ್ತ್. ಬಿಳಿಯರ ಮೋರೆ, ಒಂದೊಂದಾಗಿ ಮಾಯಾ ಆತ್, ಜನರ ಕೈಗೆ ಆಡಳಿತ ಸಿಕ್ಕಿತ್ತ್. ಅಷ್ಟೊತ್ತಿಗೆ ಹಲವಾರು ಇಲಾಖೆಗೆ ತಲೆ ಎತ್ತಿದೊ ಗುತ್ತಿಗಾರಿಲಿ.

ಸೋಂಮ್ಪು ಯಾವ ಇಲಾಖೆಗೆ ಸೇರ್‌ದವತೇಳ್‌ದ್ ಯಾರಿಗೂ ಗೊತ್ತ್‌ಲ್ಲೆ!. ಎಲ್ಲೆಲ್ಲೊ ಇದ್ದವ್ಹ ಲಾಸ್ಟ್‌ಗೆ ಪೇಟೆಲಿ ಕಾಡು ಗುಡ್ಸುವ ಕೆಲ್ಸತೇಳಿ ಎಲ್ಲೊವು ಒಪ್ಪಿದೊ. ಆವ್ಹಂಗೆ ಯೂನಿಫಾರ್ಮ್ ಸಿಕ್ಕಕರೆ ಎಷ್ಟೋ ವರ್ಷ ಕಳ್‌ತ್ತ್. ಸೋಂಮ್ಪುಂಗೆ ತಲೆಸರಿ ಇಲ್ಲದ್ಹಂಗೆ ಆವ ಸೂಚನೆಗೆ ಕಾಣುತ್ತಿತ್ತ್‌ಲೆ. ಎಷ್ಟೋ ಸೇರ್‍ತ್ತಿ ಅವ್ಹಂಗೆ ಚಿಂತೆ, ಸರಿಯಾಗಿ ನಿದ್ದೆ ಇರುತ್ತಿತ್ತ್‌ಲೆ.

ಸೋಂಮ್ಪುನ ನೌಕರಿಯ ಕಡೆ ದಿನ್ಹಂಗ, ಹಕ್ಕಲೆ ಬಾಕನ ಅಂವ್ಹಂಗೆ ಮಂಗಳೂರು ಬಂದರ್‌ಲಿ ಸುಂಕ ವಸೂಲು ಮಾಡುವ ಕೆಲ್ಸ ವಹಿಸಿದ್ದೊ.

ಸ್ವಾತಂತ್ರ್ಯ ಬಂದ್ ಹತ್ತು ವರ್ಷ ಆಕನ ಗಾಂಧೀನ ನೆಂಪು ಮಾತ್ರ ಇತ್ತ್. ಸೋಂಮ್ಪು ಸುಂಕ ವಸೂಲಿ ಮಾಡುವ ಕೆಲ್ಸಕ್ಕೆ ಹಾಜೀರ್ ಆದ ದಿನಂದ್ದೊಲೆ ಹೊರಗೆ ಕಳ್‌ಸ್ತ್ತಿದ್ದೊ ಸಾಮಾನ್. ಆದರ್‍ಹಂದ ಇವರ 'ರಪ್ತು' ತೇಳಿ ಸುಂಕೊಲಿ ರಿಯಾಯಿತಿ ಕೊಡೊಕು ತೇಳಿ ಅರ್ಜಿ ಹಾಕಿದೊ, ಬಂದರು ಅಧಿಕಾರಿಗಳ ಮತ್ತೆ ಪುರಸಭೆಯವರ ನಡೂಲಿ ವಿವಾದ ಹುಟ್ಟಿತ್ತ್.

ಆ ನಡೂಲಿ ಊರೊಳಗೆ ವ್ಯಾಪಾರ ಮಾಡುತ್ತಿದ್ದವ್ಹ್ ಬ್ಯಾರಿಗ, ಅವು ತಂದ ಸಾಮಾನುಗೆ ಎರಡು ಕಡೆಲಿ ಸುಂಕ ಕೊಡಿಕಿತ್ತ್. ಅದರ ಕೊಡ್‌ದ್ದ್‌ಲೆ ತೇಳಿ ವಿರೋದಿಸಿದೊ. ಸೋಂಮ್ಪು ತಬ್ಬಿಬ್ಬು ಆತ್. "ಗಾಂಧಿ ಸತ್ತರೂ ಚಳುವಳಿ ನಿಂತೊತ್ತ್‌ಲೆ". ಸೋಂಮ್ಪು ಅದರ ನಡುಲಿ ಇಬ್ಬೊರಿಗೆ ರಶೀದಿ ಬರ್‌ದ್ದಿತ್ತ್. ಆ ಬ್ಯಾರಿಗ, ನಾವು ಸುಂಕ ಕೊಡ್ಡುಲೆತೇಳಿ ಸಿಟ್ಟಿಗೆದ್ದು ಪುರಸಭೆ ಅಧ್ಯಕ್ಷ, ಸೋಂಮ್ಪುಂಗೆ ಪ್ರಶ್ನೆ ಹಾಕಿ ನೀ ವಸೂಲಿ ಮಾಡದೆ ಯಾಕೆ

ರಶೀದಿ ಬರ್ದ್?. ನಿನ್ನ ಸಂಬಳಲಿ ಅದರ ಕೊಡೊಕು ತೇಳಿ ಸೋಂಮ್ಪುನ ಸಂಬಳನ, ಅವ್ವ ಬರ್ದ ರಶೀದಿ ದುಡ್ಡುನ ವಸೂಲಿ ಮಾಡ್‌ದೊ, ರಶೀದಿ ತಕೊಂಡು ಸುಂಕ ಕಟ್ಟುದುಕೆ ಶಾಪ ಹಾಕಿತು.

ಸೋಂಮ್ಪುನ ಹೆಣ್ಣ್ ಕುಂಞಕ್ಕ ಸೋಮ್ಪುನ ನೌಕರಿನ ಕಡೆ ದಿನಕ್ಕೆ ರೋಗದ್ದ ಬಾಡಿ ಹೋಗಿತ್ತು. ಸೋಂಮ್ಪುಂಗೆ ಮಕ್ಕ ಆತ್‌ಲೆ. ಅದೇ ವಿಷಯಂದ್ದು ಕುಂಞಕ್ಕ ಕುಗ್ಗಿ ಹೋಗಿತ್. ದೇವರು ಕೊಟ್ಟೋತ್ತ್‌ಲೆ ಅದಕ್ಕಿಂತ ಮುಂದೆ, ಮಕ್ಕಳ ಮಾಡಿಕೆ ಪುರುಸೊತ್ತ್ ಇತ್ತ್‌ಲೆತೇಳಿ, ಹಕ್ಕಲೆ ಪಕ್ಕಲೆವು ಹೇಳುತ್ತಿದ್ದೊ. ಸೋಂಮ್ಪುನ ತಲೆಗೆ ಯಾರೋ ಒಬ್ಬ ಒಂದಲ್ಲಾ, ಇನ್ನೊಂದು ಸುದ್ಧಿ ಹಾಕಿದೊ. ಕುಂಞಕ್ಕಂಗೆ ಅಗದೋವು ಯಾರೋ ಮಾಟ ಮಾಡ್‌ಸ್ಸಿಯೊಳೊ. ತೇಳಿ ಪೊಟ್ಟ್ ಮಂತ್ರವಾದಿಗಳ ಹಕ್ಕಳೆ ಕುಂಞಕ್ಕನ ಕರ್‌ಕೊಂಡ್ ಹೋಗಿ ಪರಿಹಾರ ಮಾಡಿಸ್ಸಿಸ್ತ್. ಬೇರೆ ಬೇರೆ ಜನರ ಹಕ್ಕಲೆ ಹೋಗಿ, ಅವರ ಜೋಬು ತುಂಬ್‌ಸ್ಸಿತ್.

ಜೋಬ್ ತುಂಬುಸಿಕೊಂಡವು, ಬೇರೆ-ಬೇರೆ ಮೊದ್ದುನ ಕೊಟ್ಟೊ, ಕಷಾಯಗಳ ಕೊಟ್ಟೊ, ಕೆಲವೊಂದು ಮೊದ್ದುನ ಹೆಣ್ಣ್‌ಗೆ ಕುಡ್ಯಕೆ ಕೊಟ್ಟೊ. ಕುಂಞಕ್ಕನ ಮೋರೆ, ದಿನ ಹೋದಂಗೆ ಬಾಡಿಕೊಂಡು ಹೊತ್. ಅದರಲ್ಲೆ ಸುಖ ಕಂಡೊತ್ತ್‌ಲೆ. ಸೋಂಮ್ಪು ಕುಂಞಕ್ಕನ ರೋಗ ಪತ್ತೆ ಮಾಡುನ ವೈದ್ಯರ ಹಕ್ಕಲೆ ಕರ್‌ಕೊಂಡ್ ಹೊತ್. ಸೋಂಮ್ಪು ಕುಂಞಕ್ಕನ ಭಯಂಕರ ಪ್ರೀತಿಸುತ್ತಿತ್. ಅವ್ವಂಗೆ ರೋಗ ಬಂದೊಂದು ಗೊತ್ತಿಲೆ. ಸೋಮ್ಪು ವೈದ್ಯರ ಊರಿಗೆ ಕುಂಞಕ್ಕನ ಕರಕೊಂಡು ಹೋಕನ ಅವು 'ಸುಗರ್, ಬಿ.ಪಿ'ತೇಳಿ ಹೇಳ್ದೊ ಡಾಕ್ಟ್‌ಟ್‌ರ್.

ಇದು ದೊಡ್ಡೊವುಕೆ ಭಾವ ರೋಗ, ನೀವು ಶ್ರೀಮಂತರ್, ಆಗಿರೋಕುತೇಳಿ ನಾಕ್ ಮಾತ್ರೆ ಬರುದ್, ಜೋರು ಮಾಡಿ ನೀರು ಮೊದ್ದು ತಕಣೋಕು ತೇಳಿ ಹೇಳ್‌ದ್ದೊ.

ಸೋಂಮ್ಪು ರೋಗದ್ದಾಗಿ ದುಡ್ಡು ಬರದೆ ಇರುವ ಸಂದರ್ಭಲಿ, ದುಡ್ಡು ಹೋಗಿ ಭಿಕ್ಷೆ ಬೇಡುವ ಸ್ಥಿತಿ ಬಾತಲ್ಲತೇಳಿ ಅಂದುಕೊಡೊತ್ತು. ಪುತ್ತೂರು ಪುರಸಭೆ ಅವಧಿ ಮುಗ್‌ದ್, ಪುರಸಭೆ ವಿಸರ್ಜನೆಯಾಗಿತ್ತು. ಮತ್ತೆ ಹೊಸ ಚುನಾವಣೆ ನಡೆಕಿತ್. ಪುರಸಭೆ ಉಸ್ತುವಾರಿನ ಡಿ.ಸಿ ವಹಿಸಿದ್ದೊ. ಸೋಂಮ್ಪು ಬರ್‌ದಾ, ಮೂರು ರಶೀದಿಗೆ ದುಡ್ಡು ಕಟ್ಟಿತ್ತ್‌ಲೆತೇಳಿ. ನೀ ಕೂಡ್‌ಳೆ ಕಟ್ಟೋಕು ತೇಳಿದ್ದೊ.

ಸೋಂಮ್ಪುನ ದೂರು ಯಾರು ಕೇಳುತ್ತ್‌ಲೆ. ಆ ದುಡ್ಡು ವಸೂಲು ಮಾಡುವ ದುಡ್ಡು ತೇಳಿ ಬರ್‌ದ್ದೊ. ಆಗ ಸೋಂಮ್ಪು ದುರುಪಯೋಗ ಪಡಿಸ್ಸಿತ್ತ್‌ತೇಳಿ ಹೇಳಿದ್ದೊ. ಸೋಂಮ್ಪು ಆ ದುಡ್ಡುನ ಕೂಡ್‌ಲ್ಲೆ ಕಟ್ಟೊಕು ತೇಳಿ ಕಟ್ಟಪ್ಪಣೆ ಬಾತ್.

ಸೋಂಮ್ಪುನ ಜೀವನಲಿ ಸುನ್ನ ಸರ್‌ತ್ತಿ ಆದ, ಅವಮಾನಲಿ ಬೇಸರ ಹೊಂದಿತ್ತು. ನಾ ಮನುಷ್ಯ ಅಲ್ಲತೇಳಿ, ಬಿಳಿಯರ ಆಳ್ವಿಕ್ಕೆಲಿ ಕೆಲ್ಸ ಮಾಡ್‌ದ್ದಂವ. ಯಾವ ಯಾವ

ಅಧಿಕಾರಿಗಳ ಕೈಕೆಳಗೆ ಕೆಲ್ಸ ಮಾಡಿದ್ದೆ, ಅಂತ ಪಟ್ಟಿ ಕೊಟ್ಟೊ. ಆಗ ಇದ್ದ ಬೀಳಿಯರ ಆಚಾರ–ವಿಚಾರ, ನೀತಿ–ಶಿಸ್ತುಗಳ ಹೋಗಳ್‌ತ್ತಿದ್ದ. ಚಾಮನ್ನ ಕೇಳಿ, ಈ ತೊಂಡ ಹೇಳ್ದ ಸುಳ್ಳೊ- ನಿಜನೊತೇಳಿ, ಬೇಕರೆ ಕೇಳಿ . ಅಧಿಕಾರಿಗೆ, ಈ ಮುದುಕನ ಕತೆ ಬೇಕಿತ್ತ್‌ಲ್ಲೆ. ಅರ್ಜಿಗಳಿಗೆ ಸಹಿ ಹಾಕಿಕೆ ಅಧಿಕಾರಿನ ಅಂಗಾಂಗ ಮತ್ತೆ ಹೊಟ್ಟೆ ಸುತ್ತುವರಿದಿತ್ತು.

ಆ ಅಧಿಕಾರಿ ಸೋಂಮ್ಪನ ತಿಂಗಳ ಸಂಬಳ ಹಿಡಿದ್‌ಕೊಂಡ್ಡಿದ್ದೊ ಸೋಂಮ್ಪನ ಹಕ್ಕಲೆ ದುಡ್ಡು ಇತ್ತ್‌ಲೆ, ಕಾಡಿ ಬೇಡಿ ಚೂರು ದುಡ್ಡು ಮಾಡಿ ಹೆಣ್ಣ್‌ಗೆ ಗಂಜಿಗೆ ವ್ಯವಸ್ಥೆ ಸಿದ್ಧ ಮಾಡಿತ್ತು. ಪೆನ್ಶನ್ ಕೊಟ್ಟವೆನಾತೇಳಿ ಕೇಳಿ ನೋಡು ಎಂದು ಯಾರೋ ಹೇಳಿದ್ದೊ. ಸೋಂಮ್ಪ ಅಧಿಕಾರಿಗಳ ಹಕ್ಕಲೆ ಪುನಃ, ಓಡಿತ್ತ್. ಅಧಿಕಾರಿ ಅರ್ಜಿ ತಂಕ್ಕೊಂಡ್ ಎಂತ ಹೇಳದೆ, ಸುಮ್ಮನೆ ಕುದ್ದೊ. ಪುರಸಭೆ ಚುನಾವಣೆ ಹಕ್ಕಲೆ ಬಾಕನ ಪ್ರಚಾರಕ್ಕಾಗಿ ಓಟ್‌ಗೆ ನಿಂತೊವು ಓಡಾಡಿಕೊಂಡಿದ್ದ, ಒಬ್ಬ ದಳ್ಥಂದ ಸ್ಪರ್ಧಿಸಿದವ್ಹ ಚಂಗ. ನಿಂಗೆ ಯಾಕೆ ಪೆನ್ಶನ್ ಇಲ್ಲೆ ನೋಡೊಣ ಬಾ. ಅವ್ಹಂಗೆ ಸಮಾಜ ಸೇವೆಗೆ ಅವಕಾಶ ಕೊಟ್ಟೊ. ಚಂಗ ಅಧಿಕಾರಿನ ಹಕ್ಕಲೆ ಸೋಂಮ್ಪನ ಕರ್ಕಂಡ್ ಹೋಗಿ ನಿಂಗೆ ದುಡ್ಡು ಬಂದದೇ ತೇಳಿಕನ ಖುಷಿಯಾತು. ಹೆಣ್ಣ್‌ಗೆ ಬಂದ ರೋಗ ಗುಣಪಡ್‌ಸಿಕೆ ದುಡ್ಡು ಬಂದದೆ ಎಂದುಕೊಂಡು ಒಳ್ಳೆಯ ಮೊದ್ದು ಕೊಟ್ಟು ಹೆಣ್ಣುನ ಖಾಯಿಲೆ ಗುಣ ಮಾಡೊಕು.

ಸೋಂಮ್ಪ ಪೆನ್ಶನ್ ಬಾದುತೇಳಿ ಯಾರ್ ಯಾರೋ ಒಟ್ಟಿಗೆ ಕೈಸಾಲ ಮಾಡಿಕೊಂಡ್ ದಿನಾ ಆಫೀಸು ಕಾಯೋಕೆ ಹೋತು. ಹೆಣ್ಣ್‌ನ ಸ್ಥಿತಿ ನಿಧಾನಲೀ ಹಾಳಾಕೆ ಸುರು ಆತು. ಸೋಂಮ್ಪನೊಟ್ಟಿಗೆ 'ಉಚ್ಚೆಲಿ ಸಕ್ಕರೆ ಹೋದೆ' ತೇಳಿಕಾನ ಸೋಂಮ್ಪಗೆ ಏನು ಗೊತ್ತಾತ್ತ್‌ಲೆ!. ಹೆಣ್ಣು ಹಾಸಿಗೆ ಹಿಡಿವ ಸ್ಥಿತಿ ಬಾತ್. ಕುಂಞಕ್ಕ ಚಪ್ಪುಡಿ ಕೇಲ್ಸ ಸೌದೆ ಕಡಿಯಕನ ಏನೊ ತಾಂಗಿದ್ದಾಂಗೆ ಆತ್. ಅದರ ಬಾಚೀ ಹೋರೆಕಟ್ಟ್‌ವ ಕೆಲ್ಸ ಮಾಡಿಕಾನ ಎಡ್‌ಗಿ ಹೆಬ್ಬೆರಳ್‌ಗೆ ಗಾಯ ಮಾಡಿಕೊಂಡಿತ್ತ್. ಸೋಂಮ್ಪ ಮನೆಗೆ ಬಂದಾಕನಾ ಯಾವುದೊ ಸೊಪ್ಪುನ್ನಾ ಅರ್‌ದ್ದ್ ಕಟ್ಟಿ ಏಂಟಿಕೊಂಡು ನಡೇತಿತ್ತ್. ಹೆಣ್ಣ್‌ನ ಗಾಯದ ಬಗ್ಗೆ ಕೇಳದೆ, ಆ ದಿನ ಸೋಂಮ್ಪ ಸಂತೋಷಲಿ ಇತ್ತ್. ತಾಲೂಕು ಆಫೀಸ್‌ನ ಕ್ಲರ್ಕ್ ಒಬ್ಬ ಮೇಲೆನ, ಕಾಗದಕ್ಕೆ ಉತ್ತರ ಬಂದೂಟುತೇಳಿ ಸೋಂಮ್ಪಗೆ ಸುಮಾರು 20,000 ರೂಪಾಯಿ ಪೆನ್ಶನ್ ಸಿಕ್ಕಿದೆತೇಳಿ ಹೇಳ್ತ್.

ಸೋಂಮ್ಪಗೆ ನೀ ಯಾವ ಇಲಾಖೆಲಿ ಕೆಲಸ ಮಾಡ್‌ಯಳಾತೇಳಿ ಅಲ್ಲಿಂದ ಸರಿಯಾದ ರೇಕಾರ್ಡ್‌ಗಳ ತಕೊಂಡು ಬಾತೇಳಿ ಹೇಳ್‌ದ್ದೊ. ಆ ಕೆಲ್ಸದ ಕಷ್ಟನ ಅರಿಯದೆ ಸೋಮ್ಪ 20,000 ರೂಪಾಯಿನ ನೆನೆಸಿಕೊಂಡು ಖುಷಿ ಪಟ್ಟಿತ್ತ್.

ಹೆಣ್ಣ್‌ನೊಟ್ಟಿಗೆ ನಡ್ದದ್ದೆಲ್ಲಾ ಹೇಳ್ತ್. ಡಾಕ್ಟರ್ ಹೇಳ್ದ್ ಅದೆಂಥೊ ಇಂಜೆಕ್ಷನ್ ಕೊಟ್ಟರೇ ನಿನ್ನ ಖಾಯಿಲೆ ಒಂದು ಕ್ಷಣಲೀ ವಾಸಿಯಾದ್ದೇಂತ. ನೋಡೊನಾ ನನ್ನ ಹಣೆಬರಹಲಿ ಏನುಟ್ಟ್‌ತೇಳಿ. ಹೆಣ್ಣ್‌ನು 20,000 ರೂಪಾಯಿನ ನೆನ್ಸಿಕಂಡ್ ಖುಷಿಪಟ್ಟೊತ್ತ್.

ಕೊಟ್ಟರೇ ನಿನ್ನ ಖಾಯಿಲೆ ಒಂದು ಕ್ಷಣಲೀ ವಾಸಿಯಾದ್ಧೇಂತ. ನೋಡೊನಾ ನನ್ನ ಹಣೆಬರಹಲಿ ಏನುಟ್ಟ್‌ತೇಳಿ. ಹೆಣ್ಣ್‌ನು 20,000 ರೂಪಾಯಿನ ನೆನ್ನಿಕಂಡ್ ಖುಷಿಪಟ್ಟೊತ್.

ಸರ್.........., ಒಂದು ಸರ್ಟಿಪಿಕೇಟ್......... ಮಾಡಿ ಕೊಡಿ. ನನ್ನ ದುಡ್ಡು ಸರಕಾರದಲ್ಲಿ ಉಟ್ಟು, ಗಂಜಿ ಇಲ್ಲೆ, ಹೆಣ್ಣ್‌ಗೆ ಖಾಯಿಲೆ. ಅಂವ್ವ ಕಷ್ಟಗಳೆಲ್ಲ ಹೇಳಿಕೊಂಡ್‌ತ್. ಹಿಂದೆ ಕೆಲಸ ಮಾಡ್ದ್ ಇಲಾಖೆಗಳಿಗೆಲ್ಲಾ ಹೋತ್. ಒಂದೊಂದು ಸರ್ಟಿಪಿಕೇಟ್‌ಗೆ, ಸೋಂಮ್ಮನ ಫೈಲು ರೆಡಿ ಆತ್. ಹೋದಲೆಲ್ಲಾ ಹಿಂದೆ ಇದ್ದ ನೆಂಪುಲಿ ಬಿಳಿಯರ ಆಡಳಿತ ಹೊಗಳ್‌ತ್. ಇದನ್ನೆ ಕೇಳ್ದೊವು, ಎಲ್ಲಾ ನಿಟ್ಟುಸಿರು ಬುಟ್ಟೊ.

ಪುರಸಭೆಗೆ ನಿಂತ ಅಭ್ಯರ್ಥಿ ಚಂಗ ಸೋಂಮ್ಮಂಗೆ ದುಡ್ಡು ಬಾದು ತಡ ಆದರೆ ನಿನ್ನ ಖರ್ಚಿನ ನಾನೇ ......ಹಾಕಿ ಬೆಂಗಳೂರ್‌ಗೆ ಪೊಯಿ. ಅಲ್ಲಿಗೆ ಹೋದರೆ ಹೆಣ್ಣ್‌ಗೆ... ಗಂಜಿ ಮಾಡಿ ಕೊಡೋವು ಯಾರು? ಒಂದು ಸಮಸ್ಯೆನೆ ಆಗಿತ್ತು. ಏಕೆ? ತೇಳಿರೆ ಕುಂಞಕ್ಕನ ಕಾಲ್ ಬೆರಳ್‌ನ ಗಾಯ. ಈಗ, ಅದು ಎದ್ದು ಓಡಾಡುವ್ಹಾಂಗೆ ಇಲ್ಲೆ. ಸರ್ಕಾರಿ ಆಸ್ಪತ್ರೆಗೆ ಕರ್‌ಕೊಂಡು ಹೋಗಿ ಪರೀಕ್ಷೆ ನಡೆಸಿಕಾಕನ ಕಾಲು ಬೆರಳ್‌ಗೆ ಹುಳ ಆವುಟ್ಟು ಅದರ ಕತ್ತ್‌ರುಸೋಕ್‌ತೇಳಿ ಹೇಳ್‌ದೊ. ಸೋಂಮ್ಮ ಹೇದ್ರಿಕೊಂಡ್‌ತ್. ಅವರ ಮನೆ ಹಾಳಾಗೊಲಿ ಬೆರಳ್‌ಗೆ ಆದ ಗಾಯಕ್ಕೆ ಇವು ಮಣಿಗಂಟಿಂದ ಕತ್ತ್‌ರುಸೋಕ್‌ತೇಳಿ ಹೇಳುವೆ, ತಲೆಬೇನೆ ಆದರೆ ಕುತ್ತಿಗೆಂದ್ಹ ಕತ್ತ್‌ರುಸೋಕ್ ತೇಳ್‌ದು........... ಬಾಕಿ. ಮನೆ ಮೊದ್ದು ಮಾಡವರ ಹಕ್ಕಲೆ ಕರಕೊಂಡು ಹೊತ್. ಮೊದ್ದು ಮಾಡಿಕೆ ಅದೆನಾತೇಳಿ ನೋಡ್‌ತ್.

ಸೋಂಮ್ಮನ ಪೈಲು ಮುಗಿಯುವ ಹಂತಕ್ಕೆ ಬಾತ್. ಇದರ ನೋಡಿ ತಾಲೂಕು ಆಫೀಸ್‌ನ ಕ್ಲರ್ಕ್‌ಗ ಈ ತೊಂಡನ ತಲೆಗೆ ದನ ಮೆಟ್ಟಿಟುತೇಳಿ ಮಾತಾಡುತ್ತಿದ್ದೊ.

ಸೋಂಮ್ಮ ಸುಬ್ರಮಣ್ಯದ ಸಮೀಪ ಇರುವ ಊರುನ ಧನಿಕ ಕಾಳ ಗೌಡನ ಹಕ್ಕಲೇ ಹೋಗಿ ನಂಗೆ ಸರಕಾರದ್ದ ದುಡ್ಡು ಬಂದದ್ದೇ, ಅದರ ಆಧಾರದಲ್ಲಿ ನಂಗೆ ಚೂರು ದುಡ್ಡು ಕೊಡೊಕ್ ಹೆಣ್ಣ್‌ಗೆ ಹುಷಾರಿಲ್ಲೆ ಎಂದು ಕೇಳಿಕೊಂಡಿತ್. ಸರಕಾರದ ದುಡ್ಡು ಕಾಯರಮರದ ದರ್ಗ್ ನಿಂಗೆ,! 5,000 ರೂಪಾಯಿನೂ ಕೊಡೀಕಿಲೆ. ಚಾಮಿ..... ನಂಗೆ! ಬೀದೀಲಿ ಭಿಕ್ಷೆ ಬೇಡಿಕೆ ಬಾದುಲೆ?. 5,000 ರೂಪಾಯಿ ಕೊಡಿ. ನಾ ಏನು ಮಾಡಲೀ?, ಸಿಟ್ಟುಲಿ ಹೀಂಗೆ ಗ್ರಹಿಸಿಕೊಂಡು ಮನಸ್ಸು ಇದ್ದರೆ ಕೊಡಿತೇಳಿ, ಹಿಂದಿರುಗಿತು... ಕಾಲು ಬೇನೆಂದ್ದ ಹೆಣ್ಣ್‌ನ ಕಾಲು ಪೂರ್ತಿ ಬಾಪಿ ಆನೆನ ಕಾಲ್‌ನಂಗೆ ಆಗಿತ್ತು, ಕುಂಞಕ್ಕಂಗೆ ನಡೆಯೊಕೆ ಆದುಲೆ. ಸೋಂಮ್ಮ ಪೈಲು ಮೇಲೆ ಕಳ್‌ಸಿದ್ದು ಮಾರನೇ ದಿನ ಹೋಕಾನ ಅಧಿಕಾರಿಗೆ ಬೈದು ಪೈಲ್ ನಿನ್ನ ಮನೆಗೆ ಕಳ್‌ಸ್ಸಿತ್ತ್‌ಲೆ ಬೆಂಗಳೂರುಗೆ ಕಳ್‌ಸ್ಸಿದ್ದ್, ಅದು ಹೋಗಿ ಬರೋಕು......

ಸೋಂಮ್ಮ ಆದ್ ಆಗಲಿ ಬೆಂಗಳೂರುಗೆ ಹೋಗಿ ಬರೊಮೊ, ನೀ ಒಂದು

ನಯಾಪೈಸೆ ಖರ್ಚ್ ಮಾಡ್ಡ್‌ಬೇಡ, ನಾನೇ ಹಾಕಿನೇ. ನಿನ್ನ ಊರ್‌ನ ಓಟ್ ನಂಗೆ ಬೀಳ್‌ವ್ಹಂಗೆ ಮಾಡೊಕು. ಸೋಂಮ್ಮ ಊರು ಬುಟ್ಟರೆ ಕುಂಞಿಕ್ಕಂಗೆ ಗಂಜಿ ಮಾಡಿ ಕೊಡೋವು ಯಾರೂ ಇಲ್ಲೆ.......

ಸ್ವಾತಂತ್ರ್ಯ ದಿನಾಚರಣೆ ಇದ್ದರ್‌ಂದ ಪೈಲ್ ಮುಂದೆ ಹೋದು ನಿಧಾನ ಆತ್. ಸೋಂಮ್ಮನ ಬೆನ್ನು ತಟ್ಟಿತು ಚಂಗ ಅವನೊಟ್ಟಿಗೆ ಸೋಂಮ್ಮ ತಿರ್‌ಗ್ಗಿ ಬಾಕನ ಮನೆಯೊಳಗೆ ಕತ್ತಲೆ ಅತಿತ್. ಅವನ ಹೆಣ್ಣು ಬೊಬ್ಬೆ ಹೊಡೆತಿತ್. ಮರ್‌ಡ್ಡುತ್ತಿತ್. ನಾ ಮೊದ್ದು ಕುಡ್ದ್ ಸತ್ತನೆ ತೇಳಿ ಹೇಳುತಿತ್. ಈ ಮಾತುನ ಕೇಳಿಕನ ಸೋಂಮ್ಮ ಕಂಗಾಲು. ನನ್ನ ಪೈಲು ಪಾಸಾಗಿ ದುಡ್ಡು ಬಂದದೆ ಎಷ್ಟು ದುಡ್ಡು ಖರ್ಚಾದರೂ ತೊಂದರೆ ಇಲ್ಲೆ. ಬೆಂಗಳೂರುಗೆ ಕರ್‌ಕೊಂಡು ಹೋಗಿ ಮೊದ್ದು ಮಾಡ್‌ಸ್ಸಿನೆತೇಳಿ ಸಮಧಾನ ಮಾಡುತ್.

ಎರಡನೇ ದಿನ ಕುಂಞಿಕ್ಕನ, ಸೋಂಮ್ಮ ಮತ್ತು ಚಂಗ ಇಬ್ಬೊರು ಆಸ್ಪತ್ರೆಗೆ ಕರ್‌ಕೊಂಡ್ ಹೋದೊ. ಡಾಕ್ಟರ್ ಕುಂಞಿಕ್ಕನ ಕಾಲುನ ನೋಡಿ ಈಗಲೇ ಮಂಗಳೂರಿಗೆ ಕರ್‌ಕೊಂಡು ಹೋಕು. ಅದರ ಕಾಲೂನ ಮಣಿಗಂಟಿನ ಹಕ್ಕಲ್ಲೆಂದ ಕತ್ತರಿಸಿ ತೆಗೆಯೋಕು ಇಲ್ಲದಿದ್ದರೆ ಬೊದ್‌ಕ್ಕಿಲ್ಲೆ ತೇಳ್ದೊ.

ಮನೆಲ್ಲಿ ಸೋಂಮ್ಮನ ಹೆಣ್ಣ್ ಬೇನೆ ತಡೆಕೆ ಆಗದೆ.

ಮೊದ್ದು ಬೇಡ..........!

ಏಂತದ್ದು............. ಬೇಡ !.

ಎಂಡೋಸಲ್ಫಾನ್...........!! !!

ಕೊಡಿತೇಳಿ ಹೇಳುತ್ತಿತ್.

ಸೋಂಮ್ಮನ ಹಕ್ಕಲೆ ಒಂದು ರೂಪಾಯಿ ಇತ್ತ್‌ಲೆ.

ಸೋಂಮ್ಮಂಗೆ ದೊರೆಗಳ ಕಾಲ ಎಷ್ಟು ಖುಷಿಯಿತ್ತು ತೇಳಿರೆ, ಮನೆ ಇದ್ದಲ್ಲಿ ಜಾಗೆ ಮಂಜೂರು ಮಾಡುತ್ತಿದ್ದೊ. ಎಷ್ಟು ಖುಷಿ ಇತ್ತು. ಖುಷಿಲಿ ತೆರಿಗೆ ಕೊಡುತ್ತಿದ್ದೊ, ಹೇಳುತ್ ಅಕನ ಬಿಳಿಯರ ದಿನಗಳ ನೆಂಪು ಆತು. ನಮ್ಮವರ ಆಡಳಿತಾಂದ !, ಅವರ ಆಡಳಿತಾಲೀ ಖುಷಿ ಇತ್. ಹೆಣ್ಣ್‌ನ ಬದುಕ್ಕ್‌ಸುವ ಕನಸ್ಸು ಕರ್‌ಗ್ಗಿ ಹೊತ್.

ಹಂಞ್ಞಾ ದಿನ ಕಳ್ದ ಮೇಲೆ ತಾಲೂಕು ಕಛೇರಿಂದ ಹೇಳಿ ಕಳ್‌ಸಿದ್ದೊ. ಸೋಂಮ್ಮ ಹೋಕಾನ ಅವನ ಮೋರೆ ದುಃಖಲಿ ಸಿಕ್ಕಿದ ಹಾಂಗೆ ಇತ್ತು. ನಿನ್ನದೊಂದು ಸ್ವಾತಂತ್ರ್ಯ ದಿನಾಚರಣೆ ಏನಾದರೂ ಕಾಣಿಕೆ ಕೊಡುವನಾತೇಳಿ? ಕೇಳ್ದೊ ಸೋಮ್ಮನ ಮೋರೇಲಿ ನಗೆ ಬಂದ್. ನಂಗೆ ಬಾವ ದುಡ್ಡುನ ಎಲ್ಲಾ ಬರ್‌ಕಣಿತೇಳಿ ಹೇಳ್.

ಹೆಣ್ಣ್‌ನ ಹಿಂದಕ್ಕೆ ಕರ್‌ಕೊಂಡು ಬಂದು, ಅದರ ಬೇನೆನ್ಹಾದಾಂಗಿ ಬಾಯಿಲಿ ನೊರೆ ಬಾತಿತ್. ಸೋಂಮ್ಮ ಆಡು ಕಡಿಯುವ ಕೇಪುನ ಹಕ್ಕಲೆ ಹೋಗಿ ಕೇಳತ್ ತನ್ನ ಹೆಣ್ಣ್‌ನ ಕಾಲ್‌ನ ಮಣಿಗಂಟ್ಟುನ ಹಕ್ಕಲೆಂದ ಕಡ್ಡ್ ಕೊಡ್‌ವನ ಅಂತ ಹೇಳ್. ಕಡ್ಡ್

ಇಸಿದ ನಾಲ್ಕ್ ಆಡ್‌ನ ಕಣ್ಣ್ ಆಕಾಶದ ಕಡೆಗೆ ರಣನಾಂಗೆ ಭಯಂಕರ ದೃಷ್ಟಿ ಬೀರುತ್ತಿತ್ತು.

ಎತ್ತೊದು..? ಹೆಣ್ಣ್ ಮಣಿಗಟ್ಟು ಕಡ್ಸಿ ಗೈಪು ಮಾಡ್ಯಾತೇಳಿ ..? ನೆಗಾಡ್‌ತ್ತು ,ಕೇಪುನೊಟ್ಟಿಗೆ ನಾಲ್ಕು ಜನ ಸೇರಿ ಅಹ್ಹಾ.... ಅಹ್ಹಾ.... ಅಹ್ಹಾ ..ಅಹ್ಹಾ ನೆಗಾಡ್ದೊ. ಹಸಿ ಮಾಸ ತಿಂದ್ ಬೆಳ್‌ದ ನಾಯಿ, ಹಂದಿ ಎಲ್ಬುನ ಕಟ–ಕಟ ತೇಳಿ ಅಗೆತಿತ್ತು. ನೇಲ್‌ಸ್ಸಿ ಹಾಕಿದ ಆಡ್‌ನ ಮಾಸದ ಕೆಂಪುನ ನೀರ್ ಇಳಿಯೊತಿತ್. ಹಲ್‌ಸಿನ ಕಾಯಿ ತೋಳೆನ ಬುಡ್‌ಸ್ಸಿ ಇಟ್ಟಾಂಗ್ಹೆ ಇತ್. ಒಂದು ಗೂಡೆ ನೆಳ ಬೆರ್ಸುತ್ತಿತ್.

ಸೋಂಮ್ಪಂಗೆ ಕನಸ್ಸ್ ಕಂಡೊತು. ನಾ ಯಾಗೊಳೊ ತೀರಿ ಹೋಗಿದ್ದರೆ ಕೊಲೆ ಪ್ರಪಂಚಲಿ ತಿರ್‍ಗಕಯ್ಯಿತ್!, ಹೆಣ್ಣ್ ತೀರಿ ಹೋಕನ ಅವ್ವ ನೆಗಾಡ್ತಿತ್. ಗುತ್ತಿಗಾರುನ ಜನ ಆವ್ವಂಗೆ ತಲೆ ಸರಿ ಇಲ್ಲೆಂತೇಳಿ ನಿರ್ದರಿಸಿದ್ದ, ಏಕೆಂತೇಳ್ರೆ ಅವನ ಸಮಸ್ಯೆ ಬೇರೆ ಪ್ರಪಂಚಕ್ಕೆ ಸೇರುದ್ದಾಂಗೆ ಇತ್.

ಸ್ವಾತಂತ್ರ್ಯ ದಿನಾಚರಣೆ ದಿನ ಸೋಂಮ್ಪಗೆ ತಲೆ ಸರಿ ಇಲ್ಲದಾಂಗೆ ಆದಮೇಲೆ ಸ್ವಾತಂತ್ರ್ಯ ದಿನ. ಭಾರತನ ಹೊಗಳಿ ಭಾಷಣ ಮಾಡಿಕನ, ಸೋಂಮ್ಪ ಬಿಳಿಯರ ಆಡಳಿತ ಹೊಗಳ್‌ತಿತ್. ಅವನ ನೋಡಿ ಎಲ್ಲೊವ್ ನೆಗಾಡ್‌ತ್ತಿದ್ದೊ. ಅಂದರೂ ಸೋಂಮ್ಪ ತಲೆಕೆಡ್‌ಸ್ಸಿ ಕಂಡೊತ್ತ್‌ಲೆ. ಒಂದು ದಿನ ಮಾತ್ರ ಅವನ ಪಾಲುಗೆ ನುಂಗಿಕೆ ಆಗದ ತುತ್ತು ಆತ್. ಆ ದಿನ ಅವನ ಹೆಣ್ಣ್ ತೀರಿಹೋಗಿತ್ತು. ಅಂದರೂ ಸಹ ಸೋಂಮ್ಪ ಧೈರ್ಯಲಿ ತಲೆ ಎತ್ತುವ್ವಾಂಗೆ ಇತ್ತ್‌ಲೆ. ಅವನೊಟ್ಟಿಗೆ ಇರುವ ಮತ್ತೆ ಬಾಕೆ ಇರುವ ದುಡ್ಡುನ ಆಸೆಂದ 'ಅಕ್ಕಿಗೆ ಗುಗ್ಗುರು ಸೇರುವಾಂಗೆ' ಅವನೊಟ್ಟಿಗೆ ಬಾಕೆ ಸುರು ಮಾಡ್‌ದ್ದೊ. ಪಾಪ ಅವ್ವಂಗೆ ಯಾವ ಅರಿವು ಕೂಡ ಇತ್ತುಲೆ ಮುಗ್ಧ ವ್ಯಕ್ತಿಯಾದ ಸೋಂಮ್ಪ ಅವರೊಟ್ಟಿಗೆ ಕಛೇರಿ ಸುತ್ತಿ. ಕಾಲುನ ಚರ್ಮ ಸಮೂದ್ ಹೋತ್ ಬುಟ್ಟರೆ ಬೇರೆ ಏನು ಪ್ರಯೋಜನ ಆತ್‌ಲೆ!. ಅಷ್ಟೊತ್ತಿಗೆ ಎಲೆಕ್ಷನ್ ಡಿಕೇಲ್ಲೆರ್ ಆತ್. ಇನ್ನು ನನ್ನ ಕೆಲ್ಸ ಆಕಿಲೇ ತೇಳ್ದ್ ಅಂವ್ವಗೆ ಗೊತ್ತಾತ್. ಅಕನ ಅವ್ವಂನ ವರ್ಷ 70 ದಾಟಿತು. ಆಕನ ಅಂವ್ವಂಗೆನೆ ಕಾಯಿಲೆಗ ಒಂದೊಂದೇ ಮುತ್ತಿಕೆ ಸುರು ಆತ್. ನಡೆಯೊದು ಅಂತು ಕಷ್ಟ ಆಕೆ ಸುರು ಆತು. "ದೊಣ್ಣೆ ಹಿಡಿಯಕಿಲೆ" ತೇಳುವ ಅಂವ್ವನ ತೀರ್ಮಾನ ಅಂತು ಮಾತು ಕೇಳಿಕಾಕಾನ ಗೋತ್ತಾತ್ತಿತ್. ಅದೇ ತಡ ಒಂದು ದಿನ ಬೋಳ್ಪುಗೆ ಎದ್ರಿಕಾನ ಮುಗ್ಗೊರುಸ್ಸಿ ಬಿತು. ಅಂದುಂದ ಮೇಲೆ ಹಾಸಿಗೆ ಮೇಲೆ ಮಲಗ್ಗಿತ್ತು. ಆಮೇಲೆ ಯಾವ ರಾಜಕಾರಣಿನೂ ಅವ್ವಂನ ಹಕ್ಕಲೇ ಬಾತ್ತಿತ್ತುಲೆ ಇದೆ, ಚಾನಸ್ಸ್ ತೇಳಿ ರಾಜಕಾರಣಿಗ ಖಾಲಿ ಕಾಗದದ ಮೇಲೆ ಸಹಿ ಹಾಕ್‌ಸ್ಸಿ... ಬೇಕಾದ ಹಾಂಗ್ಗೆ ಉಪಯೋಗ ಪಡುಕೊಂಡೊ ಅವರ ಮನೆಗಳ ಅರಮನೆ ಮಾಡುದ್ದೊ. ಹೀಗೆ ಇರಿಕಾನ ಸೋಂಮ್ಪಂಗೇ ಗಂಜಿ ಬೇಸಿಕೊಡಿಕೆ ಯಾರು ಇಲ್ಲೆ ಎಂತ ಮಾಡುದ್ದು ತೇಳಿ ಸೋಂಪ್ಪಂಗೆ ಚಿಂತೆ ಸುರು ಆತ್. ನನ್ನ ನೋಡೋವು ಯಾರು?........

ನಾ ಒಬ್ಬನೇ ಎಂತಾ ಮಾಡುದ್ದು......!

ನಡೆಕೇ ಬೊತ್ತದ ಜೀವ!

ಇದ್ದು ಪ್ರಯೋಜನ ಏನು ಇಲ್ಲೆ?

ತೇಳಿ ಮನಸ್ಸುಲಿ ಗ್ರೆಸಿಕೊಂಡೊತ್ತ್. ಹಿಂಗೆನೇ ಅವ್ವಂಗೆ ಗಂಜಿ ಇಲ್ಲದೆ 4 ದಿನ ಕಳುದಿತ್ತ್....... ಹಿಂಗೆ ಒಂದು ದಿನ ಸೋಂಪ್ಪ ಕಣ್ಣು ಬುಟ್ಟುಕೊಂಡೆ ಇತ್ತ್. ಈ ವಿಷಯ ಗೋತ್ತಾಕನ..........

ಅವು ಎಲ್ಲೊವು ಮೋರೆನ......... ಈ ಕಡೆಗೆ ಹಾಕದೇ......ಅತ್ತ ತಿರುಗ್ಗಿ ನಿಂತೋ, ಮಾತ್ರನಾ ಸೋಂಮ್ಪನ ಮನೆ ಹಕ್ಕಲೆ ಯಾರು ಬಾತುಲೆ!. ನೀವು ಒಟ್ಟಿಗೆ ಒಳರಿ ಅಲ, ಅತ್ ನಾ ಇನ್ನು ಬರಕ.

* * * * *

ಅತ್ತೆಗೊಂದು ಕಾಲ... ಸೊಸೆಗೊಂದು ಕಾಲ – ಗಾದೆ

ಆನೆ ಕದ್ದರು ಕಳ್ಳ ಅಡಿಕೆ ಕದ್ದರು ಕಳ್ಳ – ಗಾದೆ

ಮಂಜನ ತರ್‌ಲೆ

ಬಾಯಿಗೆ ಬಂದಾಂಗೆ ಮಾತಾಡಿರೆ ಏನೊ ಒಂದಾದೆ? ಒಂಟಿಕಾಲುಲಿ ಕಂಬಕ್ಕೊರಗಿ ನಿಂತ ರಾಂಪಂಗೆ ದರ್ಶನ ಬಂದವರಾಂಗೆ ನಡುಗುತ್ತಿತ್. ಮುಸುಂಡು ನೋಡಿ ಭೇಷ್....! ಹೇಳಕಾಯಿತ್. ಸೋಂಪಂಗೆ ಅಂತೂ ಪರವಾಗಿಲ್ಲೆ ಮಂಜ ದಾರಿಗೆ ಬಾತ್. ಹುಟ್ಟುಸಿದವ್ಡಂಗೆ ಎದುರು ಮಾತಾನಾಡುವ ಧೈರ್ಯ ಬಾತ್ ಅಲಾ?... ಮೇಲೆಗೆ ಬಾಚಿದ ಕೂದಲು ಪೇಟೆ ಹೈದಂಗೆ ಕುತ್ತಿಗೆಗೆ ಕಟ್ಟಿದ ಚೈನ್ ನಾಯಿಸಂಕೊಲೆನಾಂಗೆ ಇರುವ ಚೈನ್, ಜೋಬುಲಿ ಹೊಸ ಮೊಬೈಲ್,ಚೈನಿ ಕೈನಿ ಪ್ಯಾಕು ಇರೋಕು ಏನೊ ?. ಸೋಂಪ ಡೋಂಗಿ ಮಾಡಿಕೊಂಡ್ ಅಡಿಕೆ ಕತ್ತರಿಸಿತು. ಗಂಡನು, ಮಂಜನು ಎದುರು ನಿಂತೊದರ ಅಡಿಗೆ ಕೋಣೆದಂಲೆ ಸೀತು ?????? ನೋಡಿ ಒಳಗೆ ಕಾಯಿ ಹೆರೆಕೆ ಹೋತು, ಅಂಗಳಲಿ ಹಪ್ಪಳನ ಒಣಗ್ಗಿಕ್ಕೆ ಹಾಕಿ ಮೊಕಸಾಲೆಗೆ ಬಂದ್ ಲಚ್ಚುಮಿ ನಿಂತೊತ್.

ಅಪ್ಪನ ಕಣ್ಣಿಗೆ ಕಾಣದಾಂಗೆ ಇಣುಕಿ ನೋಡ್‌ತಾ, ನಿಂತ್ ಅಣ್ಣನ ಒಂಟಿಕಾಲ್ ಭಂಗಿನ ನೋಡಿ, ನಾಚಿಕೆಲಿ ಅಡಿಗೆ ಮನೆಗೆ ಹೋಗಿ ಅಮ್ಮನೊಟ್ಟಿಗೆ ವಿಷಯ ಹೇಳತ್ತ್,

ಸೀತು ನೀ.... ಸುಮ್ಮನೆ ಇರು....

ಸೀರೆನ ನೇರಿ ಎತ್ತಿ ಓಡಿ ಬಾತು ಶಾಂತಿ.

ಇದೇನು?..??...??...?


ಅಪ್ಪನು, ಅಣ್ಣನ ಎದುರು ನಿಂತ ಗಮ್ಮತ್ತು?.

ಸೋಂಪನ ಹೆಗಲ್‌ನ ಮೇಲೆ ಗಡ್ಡನ ಉರ್‌ತ್ತು. ಕೆಬಿನ ಹಕ್ಕಲೆ ತುಟೀನ ತಂದು

ಎಲೆಅಡಿಕೆ ತಿನ್ನಕ್ತಾ ಅಪ್ಪ ಎಂದ್ ಹೇಳಿ ಅಣ್ಣನ ಓರೆ ಕಣ್ಣುಲಿ ನೋಡುತ್. ಗತ್ತುಲಿ ಜೋಬುಲಿ ಕಾಗದ ಪೆನ್ನು ವಾರಕ್ಕೊಂದು ಬೇಟ್‌ರೀ ಲೈಟ್ ಹಿಡ್ಕೊಂಡ್ ಒಟ್ಟಿಗೆ ಪೇಟೆಗೆ ಪಿಚ್ಚರ್ ನೋಡಿಕ್ಕೆ ಹೋದ್ ಬೇರೆ, ಅಪ್ಪ ಕಣ್ಣು ಹೊರ್ಡ್‌ಸೀರೆ ತಲೆ ಕೆಳಗೆ ಹಾಕಿದೆ.

ಅವನ ನೋಡಿ ನೇಗಾಡೋಕುತೇಳಿ ಸೀತಾ ಸೀದಾ, ಅವ್ವಗ್ಹೆ, ಅಪ್ಪಂಗೆ ಕಾಣದಂಗೆ ಇರೊಕು ತೇಳಿ ಸುಮ್ಮನೆ ಅದೆ ಮೊಕಸಾಲೆಗೆ ಕೇಳುವಂಗೆ ಅಡಿಗೆ ಮನೆಯಲಿ ಅಮ್ಮ ಮಂಜ ಮಾತಿಗೆ ಶಾಂತ ಸೋಂಪ್ಪನ ಜುಟ್ಟು ಬಿಚ್ಚಿ ಹೇಳ್‌ತ್........

"ಅತ್ತೆ ಮೇಲೆ ಕೋಪ ಕೊತ್ತಿ ಮೇಲೆ ತೀರ್‌ಸುದ್‌ತೇಳಿ" ನೆಗಾಡುತ್....: ಅಪ್ಪನ ಮೋರೆ ನೋಡಿ ಹೆದರಿಕೆ ಆತ್, ಮೀಸೆನ ಪೂಜಿತು ಶಾಂತಿನ ಕೈನ ದೂಡಿ ಸೋಂಪ್ಪ ಎದ್ದ್ ನಿಂತೊತ್ ಸುರ್‌ಗೆ ಹೆದುರ್‌ತ್ ಶಾಂತಿ. ಏನು ಮಾಡೊಕ್‌ತೇಳಿ ಗೋತ್ತಾಗದೆ ಬೆರ್‌ಳ್ ಬಾಯಿಗೆ ಹಾಕಿ ಅಪ್ಪನ ನೋಡುತ್.....



ಆ ಹಾಳು ನೆಲಲಿ ಅಡಿಕೆ ಬೆಳೆಯದುಲೆ ಅಂತಾ ಪಟೇಲ್‌ರ್ರು ನಾಯಿಗೆ ಹೇಳುವಂಗೆ ಅಪ್ಪಂಗೆ ಬುದ್ಧಿ ಹೇಳ್‌ತ್ಲೇನಾ......... ಅಮ್ಮ.........., ನಿನ್ನ ಬೇರ್‌ಸ್ಸಿದ ಕಥೆ: ಈ ಊರುಲಿ ನಂಗೂ ಹೇಳಿ ಕೇಳಿ ಸಾಕತ್ತು. ಇಂದು "ಹುಲಿನ ದನ ಹೋತ್ತೋತ್, ನಾಳೆ ಕೋಳಿನ ಕೋತ್ತಿ ಹೋತ್ತುತ್ತು", ಕಾಡನೆ ಬಂದು ಕೊಮ್ಮುನ, ಚಾಳೆ ತೋಟನ ಹಾಳ್ ಮಾಡುತ್ ಅಷ್ಟು ಸಾಕಾಗದೆ ಕೊಳೆ ರೋಗ, ನುಸಿರೋಗ, ಅರೋಗ– ಈರೋಗ ಮತ್ತೆ ಸಾವಿರ ಸಾವಿರ ಕೈಗೆ ಬಾರದೆ ಇರುಕನ ಯಾಕೇ ಇಲ್ಲೆ ಸಾಯೋಕು, ಅಲ್ಲ ಅಮ್ಮ ನಾ ಹೇಳ್‌ದ್ದ್

ಕೋತ್ತಿ ಹೋತ್ತುತ್ತು", ಕಾಡನೆ ಬಂದು ಕೊಮ್ಮನ, ಚಾಳೆ ತೋಟನ ಹಾಳ್ ಮಾಡುತ್ತ್ ಅಷ್ಟು ಸಾಕಾಗದೆ ಕೊಳೆ ರೋಗ, ನುಸಿರೋಗ, ಅರೋಗ– ಈರೋಗ ಮತ್ತೆ ಸಾವಿರ ಸಾವಿರ ಕೈಗೆ ಬಾರದೆ ಇರುಕನ ಯಾಕೇ ಇಲ್ಲೆ ಸಾಯೋಕು, ಅಲ್ಲ ಅಮ್ಮ ನಾ ಹೇಳ್ದ್ದ್ ಅದೇ ಪಟೇಲ್‌ರುಂದ್ದಾಗಿ ಯಾಕೆ ಬುದ್ಧಿ ಕಲುತ್ತೊತ್ತ್‌ಲೆ?. ಅವರ ಮಂಜ.... ಶಿವ, ನನ್ನ ಒಟ್ಟಿಗೆ ಹೋಟ್ಲ್ ಇಸಿಕೆ ಒಪ್ಪಿಗೆ ಕೊಡಿಕೆ ಏನು......?.

ಕಾಸಿಲ್ಲದೇ ಇನ್ನೆಂತ ಹೇಳೊಕ್ ನಾ ಪಾಪ ಮಾಡಿ ಇವರ ಕೈ ಹಿಡ್ದುದು ನೀಯಾಕೇ ನನ್ನ ಹೋಟ್ಟೆಲಿ ಹುಟ್ಟಿದ........; ನಂಗೆ ಗೊತ್ತುಲೆ ರಾಮ್ಪು!. ನನ್ನ ಅಪ್ಪ ಕೊಟ್ಟ ನಾಲ್ಕು ಎಳೆ ಚೈನು, ಸೊಂಟ ಪಟ್ಟಿ ಅದ್ ಎಲ್ಲಾ..... ರಬ್ಬರ್ ತೋಟದ ಹುಚ್ಚುದಾಂಗಿ ಬ್ಯಾಂಕ್ ಸೇರತ್ತ್. ಚಿನ್ನ ಇದ್ದಿದರೆ ನೀ.... ಎನಾರ್ ಮಾಡಿ ಸುಖಲಿ ಇರ್‌ತಾ ಹೇಳಿ ಕೊಟ್ಟಿದ್ದೆ... ಅಷ್ಟೆಲ್ಲ ಸುಲಭ ಅಲ್ಲ. ಅಮ್ಮ ಇದು, ಪೀತ್ರಾರ್ಜಿತ ಆಸ್ತಿಲಿ ನಂಗೂ ಹಕ್ಕು ಊಟ್ಟು, ಅಪ್ಪ ಇದರ ಬಗ್ಗೆ ತಿಳಿಕೊಂಡ್ ಮಾತಾಡಲಿ, ಅಣ್ಣ ಹೇಳುವ ಮಾತಿಗೆ ಕೆಬಿಚೆಂಡೆಗೆ ಎರಡು ಕೊಟ್ಟು ಅಪ್ಪಂಗೆ ಯಾಕೆ? ಅವನ ಸುಮ್ಮನೆ ನಿಲ್ಲ್‌ಸ್ಸಿಕೆ ಅದುಲೆತೇಳಿ? ಆಶ್ಚರ್ಯ ಶಾಂತಿಗೆ. ಸೋಂಪ್ಪನ ನೋಡಿಕೊಂಡ್ ನಿಂತೊತ್ತ್.

ರಾಂಪ್ಪನ ಮಾತು ನಿಂತೊತ್ತ್, ಸೋಂಪ್ಪನು ಬಂದು ನಿಂತತು ಪುರುಸೊತ್ತುಗೆ ಬಾಗಿಲ್‌ಂದ ಒಂದೊಂದೇ ಹೆಜ್ಜೆ ಹಿಂದೇ ಜಾರುತ್ತು...! ಅಣ್ಣನ ಪೇಚಾಟ ನೋಡಿ ನೆಗಾಡತ್ತ್ ಸೀತು. ಗಂಡ ನಿತ್ತ ಸ್ಟೈಲ್ ನೋಡಿ....! ತಲೆ ತಗ್ಗಿಸಿ ಕಾಯಿ ಹೆರ್‌ದ್ದು ಆಗಿತ್ತು, ಮತ್ತೆ ಬರಿ ಚಿಪ್ಪಿನ ಹೆರಿಯಕೆ ಸುರ್ ಮಾಡುತ್ತ್, ಕರ್ಕಶ ಶಬ್ದದ ಮೈಗೆ ಪರ್‌ಕ್ಕಿದಂಗೆ ಆತ್. ಹೆಣ್ಣ್‌ನ ತಲೆಬುರ್‌ಡೆಗೆ ಕೊಡೋಕ್‌ತೇಳಿ ಸೀಟ್ಟುಬಾತ್ ಕಂಬಕ್ಕೆ ಕೈ ಕೊಟ್ಟು ನಿಂತಿದ್ದ ಸೋಂಪ್ಪ ನೀರ್ ಕೇಳಿ ಕೂಡುತ್ತ್, ರಾಂಪ್ಪ ನಿಲ್ಲುತೇಳಿರು ನಿಂತ್ತೊತ್ತ್‌ಲೆ ನಂಗೆ ಹೋಟ್ಲ್ ಇಸಿಕೆ ದುಡ್ಡು ಕೊಡದೆ ಏನು ಮಾಡೋಕ್‌ತೇಳಿ ಗೊತ್ತುಟ್ಟು ಒಳಗೆ ಹೋಗಿ ಕೋಲುನ ನೆಲಕ್ಕೆ ಒಮ್ಮೆ ಕುಟ್ಟಿದು ಕೇಸ್ ಹಾಕಿ ಪಾಲು ಕೇಳನೆತೇಳಿ ದೊಡ್ಡ ಸ್ವರಲಿ ಹೇಳಿ ರಾಂಪ್ಪ ತಲೆ ತಗ್ಗಿಸಿತು.

ಇವು ಜೋರು ಮಾತಾಡಿರೇ ಹಂಚಿ ಹಾರಿ ಹೋದು ಏನೋ? ಎಂದು ಯೋಚಿಸಿದ ಹೆಣ್ಣ್ ಅದರ ಕಡೆ ತಿರ್‌ಗ್ಗಿ ಸಣ್ಣಸ್ವರಲಿ ಹೇಳ್‌ತ್ತ್. ಲಚ್ಚುಮೀ ನನ್ನ ಹಾಂಗೆ ನೀ ಅಪ್ಪನ ಹಕ್ಕಲೇ ಇದ್ದರೆ ಯಾವ ಭಾಗ್ಯನು ಬಾಕಿಲೆ ಬರಿ ಚಿಪ್ಪಿನ ಹೆರಿಯುತ್ತಿದ್ದ ಸೀತುನ ಉರಿಮುಸುಡ್ಡ್ ನೋಡಿ ಗಂಡಂಗೆ ಹೇಸಿಗೆ ಆತು! ಇದು ಬೇವರ್ಸಿ!.... ಇದು ನನ್ನ ಕೈ ಹಿಡ್‌ದ್ದ ಹೆಣ್ಣ್ ಅಲ್ಲನಾ? ಎಷ್ಟಾದರೂ ಬೇರೆ ಗೂಡೆಗಳ ಮೋಹಿಸಿತ್ತ್‌ಲೆ ಅಂದರೂ ಇದೇ ಈಗ ಮಂಜನ ಜೊತೆ ಸೇರಿ ತಿರುಗಿ ನಿಂತೊತುಅಲ್ಲ ಮೊಕಸಾಲೆಗೆ ಬಂದು ಕೇಸರಿ ಕಂಬ್ಬಯಿನ ಸೇರಿ ಕಟ್ಟಿ ಮೆತ್ತಂಗೆ ಸ್ವರಲಿ ಲಚ್ಚುಮಿ ಮತ್ತು ಶಾಂತಿನ ಕರ್‌ದ್ದೊ.

ನಡುರೂಮ್‌ಲಿ ಹೋಕನ ಕೇಳುವಾಂಗೆ ಹೇಳ್‌ದೋ ಸದ್ಯ ಇಲ್ಲೇ ಲಾಗ ಹಾಕಲಿ ಬೇಕರೆ ವರ್ಷಲಿ ಬಾವ ಹೊಸ್ತು, ದೀಪಾವಳಿ. ಎಲ್ಲಾ ಹಬ್ಬಗಳ ಮನೆಲಿ ಯಜಮಾನನಾಗಿ ನಡ್‌ಸ್ನೋವು ಅವು, ಈಗ ಸಣ್ಣ ಹೈದ, ಆಸೆ ಬುರುಕನ ಹೆಣ್ಣ್‌ನ ಮಾತು ಕಟ್ಟಿಕೂಂಡು ವಂಶಪಾರಂಪರ್ಯವಾಗಿ ಗುಡ್ಡೆಗಳ ಒಟ್ಟಿಗೆ ಹೋರಾಡಿ ಬೆಳೆಸಿದ ತೋಟ, ಗದ್ದೆ, ಅದೂ ಸುಳ್ಯದ ಜಾಗೆ ಅನ್ನದಾನಕ್ಕಾಗಿ? ದಾನಮಾಡಿನೆ ಆದ್ಹಂಗೆ ಆಗಲಿ ನೋಡಿ ಬುಟ್ಟನೆ?.

ಸೊಂಟಕ್ಕೆ ಕತ್ತಿ ಸೆಕ್ಕಿಸಿ ಹೊರೆಗೆ ಹೊಕನ ಕಾನಕಜೆ ಹೂವುಗೆ ಕೈ ಹಾಕಿ ನಿಂತ ಶಾಂತಿ ಅಪ್ಪ ನಾ ನಿನ್ನ ಒಟ್ಟಿಗೆ ಬರಕ?. ಆಸೆ ಮೊರೆನ ನೋಡಿ ಜೀವಕ್ಕಿಷ್ಟು ನೆಮ್ಮದಿ ಸಿಕ್ಕಿತ್. ನನ್ನ ಗಂಡ ಎನಿಸಿದವು ಒಬ್ಬನೂ ಇಲ್ಲದೆ ಇರಿಕನ ಕಾಲ ಕಳ್ದವೆ. ಅದು ಅಗ್ನಿ ಪರೀಕ್ಷೆ ಮಾಡಿ ನೋಡಲಿ ಬೇಕರೆ ಇಂವ್ಹ ಬೀಡಿ ಎಳ್ಕೊಂಡು ಪೇಟೆ ತಿರ್ಗುವ ಪೋಲಿ. ನಾ ಮೂರು ಗಾಡಿಗೆ ಸೌದೆ ಕಡ್ದು ಒಟ್ಟುವ ತಾಕತ್ತ್ ಇರುವ್ಹನಾ. ಇಂವ್ಹ ನಂಗೆ ಹೆಸರು ತಾವ ಮಂಜ, ಈ ಪೋಲಿ. ಹಲ್ಲು ಕಚ್ಚಿ ಮಾತಾಡಿರೆ ಇನ್ನೊಮ್ಮೆ ಕುತ್ತಿಗೆಗೆ ಕೈ ಹಾಕಿ ದೂಡುದೆ ಸರಿ. ಬಾಯಿ ಮುಚ್ಚಿ ಸಹಿಸ್ಸಿಕೊಂಡೆತೇಳಿ ತಿಳ್ದ್‌ಟ್ ಅಂವ್ಹಂಗೆ ಕೇಳುವಾಂಗೆ, ಜೋರಾಗಿ ಹೇಳಿಕೊಂಡು ಮನೇನ ಹಿಂದೆ ಇರುವ ಗುಡ್ಡೆ ಹತ್ತಿದೊ.

ಸರಳ್ಳಿ ಸೊಪ್ಪು ಹೆರ್ದಕೊಂಡ್ ನಿಂತ ಲಚ್ಚುಮಿನ ನೋಡಿ ಏನೋ ಹೇಳೊಕು ಅನ್ನಿತ್ತು?. ನೀ ಮದುವೆಯಾಗಿ ನಮ್ಮ ಮನೆ ಸೆರಾಕಾತ್, ನನ್ನ ಪಾಪ ಲಚ್ಚುಮಿ ತೇಳದೆ ನಿನ್ನ ಗಂಡ ಬುಟ್ಟರೆ ಏನು ನಿಂಗೆ ಯಾದಕ್ಕೂ ಕಡಿಮೆ ಎನ್ಸ್‌ದ್ಹಾಂಗೆ ನಿನ್ನ ನೋಡಿಕೊಂಬೆ. ನಿನ್ನ ಅಂತ ಅಪ್ಪ ಅಲ್ಲನಾ? ಎಂತೊದೊ ಹೇಳದೆ, ಮಗಳ ಮೋರೆನ ನೋಡಿ, ಬಿಸಿಲುಲೀ ಒಬ್ಬನೇ ಹೊರಟ ಅಪ್ಪ. ನಿನ್ನೆ ಶಾಂತಿ ಸೇರಿ ಒತ್ತಾಯ ಮಾಡಿ ಮೈಗೆ ಎಣ್ಣೆ ತಿಕ್ಕಿತ್ತ್. ನೆಲದ ಮೇಲೆ ಕುದ್ದ್‌ರ್ಸಿ ನೀರ್ ಹಾಕಿದ, ಚೆಂಡಿ ತೆಗೆದ ಮೇಲೆ, ಹಾಸಿಗೆಲಿ ಮಲ್ಗ್‌ಸಿ ಕಂಬಳಿ, ಹೊದ್‌ಸ್ಸಿ ಲಾಯ್‌ಕ್ಕು ಬೆಗ್‌ರಲಿ ಅಪ್ಪಂಗೆ ಹೇಳಿಕೊಂಡ್ ಹಕ್ಕಲೆ ಕುದ್ದ ಲಚ್ಚುಮಿ ಏನೋ ಹೇಳೊಕುತೇಳಿ ಅನ್ನಿತ್. ಹೆಣ್ಣ್‌ಗೆ, ಮಂಜಂಗೆ, ನೆಂಟರಿಗೆ ಯಾರಿಗೆ ಹೇಳದೆ ಇನ್ನ್ ಯಾರಿಗೂ ಹೇಂಗೆ ಹೇಳ್ದು? ಲಚ್ಚುಮಿ ಈ ಸರ್ತಿ ಅಡುಕೆ ರೇಟ್ 7–8 ಸಾವಿರಕೆ ಏರಿಕೆ ಆಗಿ, ರಬ್ಬರ್ ಪಸಲು ಕೈಗೆ ಸಿಕ್ಕಿರೆ ಸಾಲ ತೀರ್ಸಿ ಮನೆ ಕಟ್ಟೋಕು. ಅಪ್ಪಂಗೆ ಕುಸಿ ಆಕುಂ ತ್ತೇಳಿ ಹೂಂಗುಟ್ಟಿತ್ ಲಚ್ಚುಮಿ. ಅಪ್ಪ ನೀ ಅಮ್ಮ ಮತ್ತು ಅಣ್ಣನ ಹಕ್ಕಲೆ ಯಾಕೆ ಹೇಳ್ತ್‌ಲೆ?. ಛೇ, ಅದೆಲ್ಲ ಹೇಳಿಕೆ ಬೊತ್ತ್ ಮಾತಾಡಿಕೆ ಹೋದರೆ ಪ್ರತಿ ಸರ್ತಿ ನೆನ್ನಿದೊಂದು ಹೇಳ್ದೊಂದು. ಕೈಲಿದ್ದ ತುತ್ತು ಬಾಯಿಗೆ ಬಾದ್ಲೆ, ಉಂಬ ಹೊತ್ತಿಗೆ ಬನ್ನೆ. ಸರಳ್ಳಿ ಸೊಪ್ಪುನ ನೀನು ಶಾಂತಿ ನು ತಕೊಂಡು ಹೋಗಿ. ನಾ ನೀರ್ ಬುಟ್ಟ್ ಬನ್ನೆತೇಳಿ ಎಡಕ್ಕೆ ತಿರ್ಗಿತ್. ಲಚ್ಚುಮಿ ಬೇಡ ಅಪ್ಪ ಆಸ್ಟ್ ಅರ್ಜೆಂಟ್‌ಗೆ ನಿಂಗೆ ಎಂತ ಆಗುಟು ಹೇಳ್? ಉತ್ತರಕ್ಕೆ ನಿಲ್ಲದೆ ಹೋಗಿ ಬುಟ್ಟೆ.

ಬೊಳ್ಪು

10 ವರ್ಷದ ಹಿಂದೆ ಕೃಷಿ ಇಲಾಖೆವು ಆವ್ಹಂಗೆ ಹಳ್ಳಿನ ಒಬ್ಬ ರೈತ ತೇಳಿ ಚಿನ್ನದ ಪದಕನ ಕೊಟ್ಟೊ. ಆ ಪದಕನ ಪೆಟ್ಟಿಗೆಂದ ತೆಗ್‌ದ್ದದು ಲಚ್ಚುಮಿನ ಕೈಗೆ ಕೊಟ್ಟು ಇದರ ನೀ ಜಾಗ್ರತೆಲೀ ಇಸಿಕ. ಅದರ ನೋಡಿ ಗೂಡೆಗೆ ಖುಷಿಯೋ........ ಖುಷಿ. ಶಾಂತಿನು ಒಟ್ಟಿಗೆ ಇದ್ದಿದ್ದರೆ ಲಾಯ್‌ಕ್ಕ್ ಇತ್ತು. ಬುಡು ಬುಡು ಸದ್ದು ಮಾಡಿಕೊಂಡು ಓಡುತ್ತಿತ್ತು. ಹಣ್ಣು, ಹೂಗಳ ಕೊಯ್ಯಿಕೊಂಡ್ ಬಾತು ಲಚ್ಚುಮಿ. ಇನ್ನು ಗೂಡೆಗೆ ದುಡ್ಡುನ ಬೆಲೆ ಎಷ್ಟುತೇಳಿ ಗೊತ್ತ್‌ಲೆ?. ಕುಣಿಯೋಕೆ ಶುರು ಮಾಡಿ ಯಾವ ಯೋಚನೆ ಮಾಡುತ್ತ್‌ಲೆ. ಈ ಬೆಪ್ಪಂಗ ಹೋಟ್ಲು ಇಸಿದಂಗೆ ತೀಳ್‌ಕಣ್ಣಲ್ಲಿ. ಧಿಮ್ಮಿಲ್ಲದ ಈ ಬೇವರ್ಸಿಗ ಅಡಿಕೆ ಮಾರಿ ಬಂದ ದುಡ್ಡುಲಿ ಉಳ್‌ದ್ದವರ ರಬ್ಬರ್ ತೋಟಕ್ಕೆ ಹಾಕಿನೆ. ಯಾಕೆ ಈ ನೆಲಲಿ ಲಾಯಕ್ ಬೆಳೆ ಬಾದುಲೆನಾತೇಳಿ ನೋಡೋಮೊ. ಅದೇನು ಕೇರಳದವುಕೆ ಮಾತ್ರ ಯಾಕೆ?. 5–6ವರ್ಷ ಅಷ್ಟೇ ಕಷ್ಟ. ಆ ಮೇಲೆ ಸಾಲ ತೀರಿಸಿ ಲಾಭ ಬಂದ ದುಡ್ಡುಲಿ ಮನೆನ ಹಿಂದೆ ಕೆರೆ ತೇಗ್‌ಸ್ಸಿ ಚೋಮಣ್ಣ ಪಂಪು ಹಾಕ್‌ಸ್ಸಿದಂಗೆ ಮನೆ ಎದುರ್ ಇರುವ ಹೊಟ್ಟು ಭೂಮಿಲಿ ಏನೆಲ್ಲಾ ಬೆಳೆಸ್ಸಿಕೆ ಆದೇ, ಅದೆಲ್ಲಾ ಬೆಳ್‌ಸೊಕ್. ಕೆರೆ ಹಕ್ಕಲೆ ನಿಂತುಕೊಂಡು ಲಚ್ಚುಮಿ ನಾ ಗಟ್ಟಿಯಾಗಿ ಇರುವಲ್ಲಿ ಮುಟ್ಟ, ಗಂಡ ಸತ್ತರೇನು ನೀ ಯಾಕೆ ಮರಡೋಕ್ಕು. ಶಾಂತಿ ಕಾನಕಜೆ ಹೂವುನ ತಂದು ಕೊಟ್ಟತು ಅದರ ಲಚ್ಚುಮಿ ಸರಿ ಇಸುತ್ತಿತ್ತ್. ಯಾರಿಗೂ ಕಾಣದ್ಹಂಗೆ ಸೇರುಗುಲಿ ಕಣ್ಣೊರಸಿತ್ತ್. ನೆಂಪು ಆಕನ ಮರ್‌ಡ್ಡಿಕೆ ಬಾತ್ತಿತ್ತ್. ರಬ್ಬರ್ ತೋಟಕ್ಕೆ ಹೋಗಿ ನೋಡಿ ಬುಡೊಮೊ. ಹೊಟ್ಲು ಇಸಿ ಎಷ್ಟು ದುಡ್ಡು ಮಾಡಕು ತೇಳಿರೆ ಅದೆಲ್ಲಾ ಸುಲಭಲಿ ಆದುಲ್ಲೆ.

ಮನೆ ಒಳಗೆ ಹುಕ್ಕೊವು. ನಾ ಇನ್ನು ಲಚ್ಚುಮಿ ಮಾಡಿದ ಅಡುಗೆನ ತಿಂದುಕೊಂಡು ಇರೇಕು. ಹೆಣ್ಣ್‌ನು ಮಂಜನು ಹಾಳಾಗಿ ಹೋಗಲಿ. ಈ ಜೀವ ಇನ್ನೂ ಗಟ್ಟಿ ಉಟ್ಟು. ಈ ಸೊರ್‌ತ್ತಿ ಅಡಿಕೆ ರೇಟು ಜಾಸ್ತಿ ಆದರೆ ಎಲ್ಲಾ ಸೆರಿಯಾದೆ. ಎಲ್ಲಿಯಾರು ಮಾವನ ಮಾತುಕೇಳಿ ಪಾಲು ಕೇಳಿಕೆ ಕೋರ್ಟಿಗೆ ಹೋದರೆ. ನಮ್ಮ ಕುಟುಂಬಲಿ ಇದುವರೆಗೆ ಯಾರೂ ಕೋರ್ಟಿಗೆ ಹತ್ತಿತ್ತುಲೆ. ಈ ಗುಂನ್ಕ ನನ್ನ ಹೆಸರುನ ಹಾಳು ಮಾಡ್‌ದ್ದೆ.

ರಾತ್ರಿ ಹುಟ್ಟಿದ ಈ ಮಂಜ ನನ್ನ ಕೈ ಹಿಡಿದ್ದ ಹೆಣ್ಣ್‌ನೆ ನಂಗೆ ಎದುರು ನಿಂತತ್ತ್. ಆದ್ಹಂಗೆ ಆಗಲಿ ಇವರ ಹಟನ ನೋಡಿ ಬುಡುವೆ. ಬೇಕರೆ ಲಚ್ಚುಮಿನೊಟ್ಟಿಗೆ ಒಂದು ಮಾತು ಕೇಳೊವೆ,. ಇದು ಸರಿನ? ಅದರ ಬೆಂಬಲ ಇಲ್ಲೆ. ಇವರ ನಾಲಿಗೇನಾ ಸಿಗ್‌ದ್ದ್ ಹಾಕುವೆ.

ಕಾಡುನ ನಡುಲಿ ಇರುವ ದೊಡ್ಡ ಹೊಂಡ ನೋಡೊಕ್, ಸಣ್ಣವು ಇರುಕಾನ ಇವರ ಕರುಕೊಡ್ಡ್ ಬಂದು ಭೂಕಂಪ ಅದ್ಹಂಗೆ ನಡುಗುವ ತೇಳಿ ನೆನ್‌ಸ್ಸಿದೊ. ಶಾಂತಿ ಒಟ್ಟಿಗೆ ಇದ್ದಿದ್ದರೆ ಲಾಯಕ್ ಇರುತ್ತಿತ್ತು. ಆಶ್ಚರ್ಯದಿಂದ ಕಣ್ಣಅಗಲ್ಸಿ ನೋಡುತ್ತಿತ್ತ್.

ನೆಲಲಿ ಕುದ್ದುಕೊಂಡು ಇದ್ದ ಸೋಂಪನ ಕಣ್ಣುಗಳೆ ಸಣ್ಣದಾತು. ಮತ್ತೆ ಕಣ್ಣು

ಬುಟ್ಟು ಧೈರ್ಯದಿಂದ ನೋಡುತ್ತಿತ್ತು. ಮನೆಲಿ ಇದ್ದರೆ..... ಹುಲಿನಾಂಗೆ ಇರೋಕು ತೇಳುವ ಯೋಚನೆ.

ಮೈಯೆಲ್ಲ ಬೆಗುರಿ! ಅದು ತೋಟ. ಇದು ರಬ್ಬರ್ ತೋಟಲಿ ಕಾಲಿಗೆ ತಾಗಿದ ಮುಳ್ಳು, ಎದುರು ನಿಂತ ಪಟೇಲ ಏನು ಸೋಮ್ಪ?

ತೋಟಕ್ಕೆ ಹೊರಟುದ್ದ್?.

ಸೋಂಮ್ಪ ತಲೆ ಆಡಿಸ್ಸಿದು ಮಾತ್ರ.

ಪಟೇಲನ ನೋಡಿ ಕುಂಪಿನ ತೇಗ್‌ದ್ದು ಏನು ಮಾತಾಡದೆ ಸುಮ್ಮನೆ ನಿಂತೊದ್?

ಮಕ್ಕಳ ಆಸೆಗೆ ನಾವು ಯಾಕೆ ಅಡ್ಡಿ ಮಾಡೋಕು? ನೋಡಿ ಸೋಮ್ಪಣ್ಣ. ನಾ ಯಾಕೆ ಹೇಳ್ದೆ ತೇಳಿರೆ ನಮ್ಮ ಕೈಲಿ ಏನುಟ್ಟು? ಉದಾಹರಣೆಗೆ ಲಚ್ಚುಮಿಗೆ ಹೆರಿಗೆ ಆದು ತೇಳಿಕಾನ ಖರ್ಚುನ ನೆನ್‌ಸ್ಸಿದರಿನ. ನನ್ನ ಮಗಳಿಗೆ ಎಂತಾದರೂ ಇವ್ಹಂಗೆ ಯಾಕೆ?. ವಿಧಿ ಬರಹ ತಪ್ಪಿಸಿಕೇ ಆದುಲೇ ಹೋರಾಡಿಕ್ಕೂ ಆದುಲೇ.

ಈಗ ನಿಮ್ಮ ರಬ್ಬರ್ ತೋಟದ ವಿಷಯಾನೇ ತಕೊಣಿ. ನೋಡಿ ನಿಮ್ಮ ಮಂಜ, ನಮ್ಮ ಮಂಜ ಇಬ್ಬರು ಸೇರಿ ಹೋಟ್ಲು ಇಸುವೆ. ಈ ಅಡಿಕೇಲಿ ಏನು ಲಾಭ ಇಲ್ಲೆ. ಕಲ್ಲುಗೆ ಸುಮ್ಮನೆ ತಲೆ ಗುದ್ದಿಕಣೋಕು. ಹೋಟ್ಲುಲೀ ಲಾಭ ಹೆಚ್ಚು. ನೀವು ನಿಮ್ಮ ಕೆಲಸ ನೋಡಿ ಯಾಕೆ ಸುಮ್ಮನೆ ತಲೆ ತಿಂದಿಯರಿ.?

ಪಟೇಲನ ನೆಗೆ ಕೇಳಿ ಸೋಮ್ಪಣ್ಣನ ಕಣ್ಣು ಸಣ್ಣದಾತು. ಓ ಹೊತ್ತು ಸುಮಾರು ದೂರ ಹೋಗಿ ಆಗಿತ್ತು. ಮಧ್ಯಲಿ ಬಾಯಿ ಹಾಕುವರ ಬುಟ್ಟು ಹೂ ತಕ್ಕೊಂಡು ಹೋಗಿ ದೇವುರಿಗೇ ಇಸೋಕುತೇಳಿ ಅನ್ನಿತು. ಬಂದು ಅಂಗಳಲಿ ಮಂಡಲ ಬರೆಸ್ಸಿ ಮಾತೆನ ಪ್ರತಿಷ್ಟಾಪನೆ ಮಾಡಿ, ರುದ್ರಾಕ್ಷಿ ಮಾಲೆ ಹಾಕಿ ಮಂತ್ರ ಹೇಳಿಕೊಂಡು ಪೂಜೆ ಮಾಡಿಕೆ ಸುರು ಮಾಡುತ್. ಹೊಸ ಲಂಗ ರವುಕೆ ಹಾಕಿ ಶಾಂತಿ ದೇವುರಿಗೆ ದೀಪ ಹೊತ್ತಿಸಿತ್ ಗಂಧ ಅರ್ದು ಆಗಿ ಲಚ್ಚುಮಿನ ಹಕ್ಕಲೆ ಕುದ್ದು ಪೂಜೆ ಮಾಡಿಕೇ ಸುರು ಮಾಡತ್. ಲಚ್ಚುಮಿನ ಹಣೆಲಿ ಕೆಂಪು ಕುಂಕುಮದ ಹಾಗೆ ಮಿರುಗುವ ಕೆಂಪು ರಕ್ತನಾಂಗೆ ಇರುವ ಕುಂಕುಮ. ತೋಟಕ್ಕೆ ತೋಟಾನೇ ಕೆಂಪಾಗಿ ಹಣ್ಣು ತುಂಬಿಕೊಂಡು ಇತ್.

ಬೇವರ್ಸಿ ಎಲ್ಲಿಯಾದರೂ ಪೂಜೆಗೆ ಅಡ್ಡ ಬಂದರೆ ಕಟ್ಟಿದ ತಾಳಿನ ತೆಗೆದು ಮಂಜನ ಒಟ್ಟಿಗೆ ದಬ್ಬಿನೆತೇಳಿ ನೆನ್‌ಸ್ಸಿ.... ತೋಟಕ್ಕೆ ಇಳಿಯಾಕನ ಕಣ್ಣು ಕತ್ತಲೆ ಬಂದಂಗೆ ಆತ್, ಕೂದಲು ತೆಗ್ದದ್ದ್ ಮುಂಡೆನಂಗ್ಹೆ ಇದ್ದ ತೋಟ!.

ಅಷ್ಟೆತ್ತರ ಇದ್ದ ಅಡಿಕೆ ಕೊಮ್ಮುಗ ಆಚೆ–ಈಚೆ ಅಡ್ಡಾದಿಡ್ಡಿಯಾಗಿ ಬುಡಂದ್ದ ಪೊರುದ್ದು ಬಿದ್ದುಟು.

ಬಾಳೆಗ ಎಲ್ಲಾ ಒಂದೊದ್ದು ಆಗಿ ಪೊರ್ದದರ ನೋಡಿ ಕಂಗಲೂ ಆಗಿತ್ತು.

ಬಿಂಗಾರ ಹೂ, ಎಲೆ ಬಳ್ಳಿಗಳ ಮೆಟ್ಟಿ ನಜ್ಜು ಬಜ್ಜಿಯಾಗಿತ್ತು.

ಬೊಳ್ಪು

ಅಮ್ಮ ತಾಯೀ ನೀನೇ ಕಾಪಾಡು ತೇಳಿ ಜೋರಾಗಿ ಹೇಳೊದ್ದೊ.

ಏ ಲಿಂಗ ಎಲ್ಲಿ ಸತ್ತಳ?.

ತೇಳಿ ಕರುದ್ದೊ.

ಓ ಓ ಓ

ಆನೆ ಬಂದು ಕೆಲ್ಸ ಕೆಟ್ಟ್‌ಟ್ಟು. ಕೊಮ್ಮೆಗಳ ಎಲ್ಲಾ ಪೊರುಸ್ಸಿಕೊಂಡು ಇತ್ತು. ಗುಡಿ ಹೊದ್ದ್‌ಕೊಂಡು, ಅಂಗಳಲಿ ಲಿಂಗ ಕುಡ್ಡು ಬಿದ್ದುಕೊಂಡು ಇತ್ತು. ಅವನ ದೆಸೆಲಿ ಕೋಳಿ ಮೊಟ್ಟೆ, ಕಲ್ಲುಕಾವುಲಿ, ಒಂದು ಕಡೆ, ಅಲ್ಲಿ ರೊಟ್ಟಿ ಚೂರು ಬಿದ್ದಿತು. ಅಂಗಳಲಿ ಕೊಯ್ದು ಇಸಿದ ಹಲಸ್ಸುನ ಸೆಂಡೆಗ ಎಚ್ಚರ ತಪ್ಪಿದ ಮೇಲೆ ಬಿಸಾಡ್‌ದ ಕತ್ತಿ, ಇನ್ನೊಂದು ಮೂಲೆಲಿ ಇತ್ತು. ಗೂರು ಹೊಡುಕೊಂಡು ಜೊಲ್ಲು ಅರ್‌ಸ್ಸುತಿತ್ತ್.

ಹಲಸ್ಸುನ ಕಾಯಿ ಪರಿಮಳಕ್ಕೆ ಕಾಡಲಿದ್ದ ಕೋಣ ಬಾತು ಅದರ ಮೈಯಿಂದ ಕೆಸರ್ ಅವ್ವನ ಬಟ್ಟೆಗೆ ರಟ್ಟಿದ ಮೇಲೆ ಸೋಮಪ್ಪಗೆ ಎಚ್ಚರ ಅತು ಸೊಂಟಲಿ ಇದ್ದ ಕತ್ತಿನ ಕಡೆ ನೋಡಿ ಮತ್ತೊಮ್ಮೆ ತಲೆ ತಿರುಗ್ಗಿದ್ದಂಗೆ ಆಗಿ ಕಣ್ಣು ಕತ್ತಲೆ ಬಾತು. ಹಂಞ್ಞ ಹೊತ್ತು ಬುಟ್ಟು ಹೆಂಡದ ವಾಸನೆಗೆ ಕಾರಿಕೆ ಬಂದಂಗೆ ಅತ್.

ಮದ್ಯಾಹ್ನ ಉರಿ ಬಿಸುಲಿಗೆ ಮಾಯಿನಮರ, ಹಲಸ್ಸುನ ಮರಕೆ ಬಿದ್ದಿರುವ ಕುಟ್ಟೆ ದೊಡ್ಡದಾಗಿ ಬೆಳ್ದಿತ್ತು. ಮರಕೊಡ್ಪ ಮರಕೊರ್‌ಸ್ಸಿ ಅದರಲ್ಲಿ ನೀರು ಹುಡುಕುತಿತ್ತು. ಕೆಸರು ಹೊಂಡಲಿ ಇದ್ದ ಕೋಣಗ ಸುರುಪ್ಪುತಿದ್ದೊ.

ಹಕ್ಕಲೆ ಬರುಲೀ ಬಾಯಿಬುಟ್ಟರೆ ಎರಡು ಕೈಲಿ ಮಂಜನ, ಹೆಣ್ಣ್‌ನ ಗಂಟಲು ಪಿಳ್‌ಚ್ಚಿ ಹಾಕಿನೆ. ಕೆಲಸ ಕೆಟ್ಟಿತ್ತು ನರ ಹುಳನು ಕಾಣದ ಕಾಡುಲಿ ನಿಂತು ಜೋರಾಗಿ ಹೇಳ್ತು, ಆನೆ ಹುಕ್ಕು ಕೆಲ್ಸ ಕೆಟ್ಟೊತು ಲಚ್ಚುಮಿ. ದಾರಿಲಿ ಹೋಕನ ಬೀಜದ ಹಣ್ಣುನ ನೆನಪು ಮಾಡಿ ಲಚ್ಚುಮಿಗೆ ಕೊಯ್ದು ಕೊಟ್ಟೆ, ಪೇರಲೆ ಹಣ್ಣುನ ಶಾಂತಿಗೆ ಕೊಯ್ದು ಕೊಟ್ಟೆ, ಆ ಪಟೇಲ ಆಗಲಿ ಅವನ ಮಂಜ ಆಗಲಿ, ಕುರೆ ಮುಸುಂಡು ಹೆಣ್ಣು ಆಗಲಿ, ಬೇವರ್ಸಿ ಮಂಜನು ಆಗಲಿ. ತೋಟಕ್ಕೆ ಆನೆ ಹುಕ್ಕ ಮೇಲು ಬುದ್ದಿ ಬಾತ? ನಾ ಇನ್ನು ಸಾಲ ತೀರಿಸ್ಸುದ್ದ ಹೆಂಗೆ? ರಬ್ಬರ್ ತೋಟ ಆದೊ? ಪಟೇಲ ಎಲ್ಲಿಂದ್ದಾರು ಉಪದೇಶ ಮಾಡಿಕೆ ಬಂದರೆ ಅವನ ಹಲ್ಲು ಮುರ್ದು ಬುಟ್ಟನೆ. ಹುಚ್ಚರಂಗೆ ನಡೆಯದಿಕೆ ಕಾಲು ಶಕ್ತಿನ ಕಳ್ಕಂಡಿತ್ತ್, ಕಣ್ಣು ಮಂದಾತ್. ಮದ್ಯಾಹ್ನ ಬಿಸಿಲಿಗೆ ತಲೆಗೆ ಮುಂಡಾಸುಕಟ್ಟಿದ್ದೆ. ಸಾಲ ದುಡ್ಡುನ ಕೇಳ್ಳಿಕೆ ಸುರು ಮಾಡಿರೇ ಕರಿಯಪ್ಪನ ಮುಸುಂಡುಗೆ ಉಗುದ್ದು ಕಳ್ಸಿನೇ. ಸೊಂಟಲೀ ನೇತಾಡುತ್ತಿದ್ದ ಕತ್ತಿನ ಹಿಡಿನ ಗಟ್ಟಿಯಾಗಿ ಹಿಡ್ದುಕೊಂಡಿತ್ತು.

ಒಣಗಿದ ಬಾಯಿನ ಮಡೆಲಿ ಸರಿ ಮಾಡುತ್ತು. ಹೆಣ್ಣುನ ಕರ್ದು ನೀ ಮುಟ್ಟಿದ ನೀರ್‍ನ ನಾ ಮುಟ್ಟಿಕೀಲೇ ನೀ ಮನೆ ಬುಟ್ಟು ನಡಿ. ಲಚ್ಚುಮಿ ಮತ್ತು ಶಾಂತಿ ಇಬ್ಬೊರು ಒಳ್ಳೆ ಗಂಜಿ ಬೇಸಿ ಹಾಕುವೇ. ಎಷ್ಟು ದಿನ ಹಿಂಗೆ ಇದ್ದವೆ, ನೊಡೋಮೊ?.

ನಾ ದಾರಿ ತಪ್ಪಿದೆ ಎಂದು ಜೋರಾಗಿ ಹೇಳೋಕು ತೇಳಿ ಅನಿಸ್ಸಿತ್ತ್. ಒಣಗಿದ ಬಾಯಿಲಿ ಸ್ವರನೇ ಬಾತುಲೇ ಬೆದುರ್ ಹಿಂಡೆಲ್‌ನ ಆಚೆಗೆ ಕಣ್ಣು ಹಾಕಿ ಅದು ಬಿಸ್ಲಿಗೆ ಕೊಡೆ ಹಿಡ್‌ತ್ತ್. ಒಣಗಿದ ಬಾಯಿನ ಮಡೆಂದ ಬಾಯಿನ ಚಂಡಿ ಮಾಡುತ್ತಾ. ಎರಡು ಹೆಜ್ಜೆ ಇಸಿತ್ತು. ಮೆಟ್ಟಲು ತಪ್ಪಿ ಮುಗ್ಗೊರಿಸಿದ್ದಂಗೆ ಆತು ತಲೆಗೆ ಕಟ್ಟಿದ ಮುಂಡಾಸು ಮೇಲೆಂದ ಮುಚ್ಚಿತು. ಲಚ್ಚುಮಿ ಪಟೇಲನ ಮಂಜನ ತಬ್ಬಿಕಂಡು ಖುಷಿಲಿ ನರಳಿ ಮಲ್ಗಿಸಿತ್ತು. ದೀಪದ ಬತ್ತಿ ನಿಧಾನಲಿ ದೊಡ್ಡದಾಗುತ್ತಾ ದೀಪಲಿ ಕೆಂಪು ದೊಡ್ಡದಾತು. ಮಾತು ಮನಸ್ಸುನ ಕತ್ತಲೆಗೆ ತಕೊಂಡ್ ಹೊತ್. ಓರೆ ಕೋರೆ ಹೆಜ್ಜೆ ಹಾಕಿ ಮರದ ಮೇಲೆನ ಕುರ್ಥೆನ ಹಾಂಗೆ ಹಲ್ಲು ತೊರ್‌ಸ್ಸಿ ಹೇಳ್‌ತ್ತ್.

ಕೇಳ್‌ದ್ದ ಸೋಂಪ್ಪ............ ಆ ಮರದ ಕೆಳಗೆ ಚಿಂತೆ ಇಲ್ಲದೆ ಮಲ್‌ಗ್ಗಿದ್ದ ಹುಲಿಗೆ ಏನು ಲೋಕದ ಚಿಂತೆ ಉಟ್ಟು? ಮರದ ಅಡ್ಡ ನಿಂತು ಗುಂಡು ಹೊಡ್ದ್ ಕೊಂದನೆತೇಳಿ ಯಾಕೆ ಹೇಳಿಕೆ ಬಂದೆ?.

ದಿನ ಬೊಳುಪ್ಪಿಗೆ ಗದ್ದೆ ಪುಣಿಲಿ ಕಾಲು ಎಳುಕೊಂಡು ಹೋದ ಸೋಮ್ಪನ ನೋಡಿ ಹಕ್ಕಲೆ ಮನೆವು ಬಂದು ಲೋಕದ ವಿಚಾರ ಮಾತಾಡಿಕ್ಕೆ ಸುರು ಮಾಡ್‌ದೊ. ನೀವು ಒಬ್ಬನೇ ಗದ್ದೆ ಬೇಸಾಯ ಮಾಡಿಕೊಂಡು ಒಳೋರಿ ತೋಟ, ಮನೆ ಎಲ್ಲಾ ಕರಿಯಪ್ಪಗೆ ಮಾರಿ ಮನೆಯವರೆಲ್ಲಾ ಕಳುಸಿದ್ದೊ ಹೌದ? ಬೀಡಿ ಎಳಕೊಂಡ್ಡ್ ಸೋಮಪ್ಪ ಎಂತೊಂದು ಮಾತಾಡದೇ ತಲೆ ಆಡುಸ್ಸಿತು ಅಷ್ಟೇ. ಈ ಸೇರ್‌ತ್ತಿಯಾರ್ ಲಾಯ್‌ಕ್ಕು ಪಸಲ್ ಬಂದರೇ, ಕರಿಯಪ್ಪಗೇ 25,000 ಕೊಟ್ಟರು. ನಂಗೆ 30,000 ಉಳ್‌ತ್ತ್. ಹಿಂಗೆ ಮನ್‌ಸ್ಸುಲಿ ಲೆಕ್ಕ ಹಾಕೀತು ಪಾಪ ನೀವು ಒಬ್ಬನೇ ಇರ್ದು ಬೇಜಾರು ಅಲ. ಬ್ಯಾರಿ ತಿರುಗ್ಗಿ ನಿಂತು ತುಂಡು ಬೀಡಿನ ಹೊತ್ತಿಸಿತ್ತ್. ಬೇಜಾರೇಕೆ ಸೋಂಪ್ಪ ಮನೆಗೆ ಬಾಕನ ಕತ್ತಲೆ ಆತಿತ್ತ್.

ಹೊಟ್ಟೆ ಇಸ್‌ದ್‌ಲೆ . ಬೂದಿ ತುಂಬಿದ ಒಲೆಲಿ, ಇನ್ನೂ ಕಿಚ್ಚಿ ಮೊಟ್ಟು ಗಂಜಿ ಬೇಸುದು ಯಾಕೆ?

ಗಾಳಿಗೆ ದೀಪ ಕೆಟ್ಟು ಹೋಗಿ ಅಂಗಳಕ್ಕೆ ಬಂದೊ.

ಆಕಾಶಲಿ ಒಂದು ಚೂರು ಬೊಳ್ಪು ಇತ್‌ಲೆ ರಾತ್ರೆ 1 ಗಂಟೆಗೆ ಕೈಕಟ್ಟಿಕೊಂಡು ಅಂಗಳಲಿ ತಿರ್‌ಗ್ಗುತ್ತಿದೊ,

ಸೋಂಟಕ್ಕೆ ಕಟ್ಟಿದ ಬೈರಾಸ್‌ನ ತಲೆ ಸುತ್ತಿಕೊಂಡ್ ಮಾಯಿನ ಮರದ ಬುಡಲಿ ಕಲ್ಲು ಮೇಲೆ ಕಾಲು ಇಸೀ,

ಬಾಮಿ ಕಟ್ಟೆಗೆ ಕೈಯೂರಿ ನಿಂತ.

ಶಾಂತಿ ನಾ........... ನಿನ್ನ ಒಟ್ಟಿಗೆ ಇದ್ದನೆ,

ಪೊಪ್ಪ ಕಣ್ಣು ಅಗಲಿಸ್ಸಿ ನಿಂತ.

ಶಾಂತಿನ ಹಿಂಗೆ ಬ್ಯೊಯಕ್ಕೆ ಬೊತ್ತಿತ್.

ನಿಂತುಕೊಂಡು ಇದ್ದ ಸೊಮಪ್ಪಂಗೆ ಕಾಲು ಬೊಚ್ಚಿದಂಗೆ ಆತ್.

ನಿಟ್ಟುಸೀರು ಬಿಟ್ಟತು ತಳಕ್ಕೆ ಆಯ್ಯಮ್ಮತೇಳಿ ಮರಕ್ಕೆ ಒರುಗಿತ್.

ಬೆಗ್‌ರ್‌ಲಿ ಚೆಂಡಿ ಆದ ಬೈರಾಸ್‌ಲಿ ಮೊರೆ ಉಜ್ಜಿಕೊಂಡು ಯಾರ ಮನೆದೊ ಅಜ್ಜ ದನ ಬಂದು, ಅವನ ಮುಸುಂಡ್ ಮೂಸಿತ್!...

ಅದರ ಅವ..... ಮ್ಯೆಯುಜ್ಜಿತ್. ನಿದಾನಲಿ ನಿದ್ದೆ ತೂಗಿಕೆ ಸುರಾತ್ತ್ ಅಲ್ಲಿಂದಲೆ ಹಿಂದೆ ಇಚಿದ ಮರಕ್ಕೆ ಒರುಗ್ಗಿ ನಿದ್ರೆಗೆ ಜಾರುತ್ತ್. ನಿದ್ದೆಗೆ ಯಾವುದೇ ಭಂಗ ಬರದಹಾಂಗೆ, ತಂಪುನ ಗಾಳಿ ಬೀಸಿಕೆ ಸುರು ಆತ್ ಇಡೀ ಲೋಕನ ಮರ್‌ತ್ತ್ ಪರಲೋಕನ ನೆನ್‌ಸ್ಸಿದ ಕನಸು ಕಾಂಬಾಕೆ ಸುರು ಆತ್ ಅಷ್ಟೊತ್ತಿಗೆ ನಿದ್ರೆಂದ್ದ ಯಾರೊ ಬೊಡ್‌ದ್ದು ಎದ್ರ್‌ಸಿದಂಗ್ಗೆ ಆತ್. ಕಣ್ಣುಬುಟ್ಟು ನೋಡಕರೆ ಬೊಳಪ್ಪುನ ಕೋಳಿ ಕೂಗಿದ್ ಗಂಟೆ 9 ಕಳತ್ತ್.ಅಲ್ಲಿಂದ ಎದ್ದುದ್ ಎನು ಗೋತ್ತಿಲ್ಲಾದ್ದಾವರಾಂಗೆ, ತಲೆ ತಗ್ಗುಸಿ ಮನೆಗೆ ಹೊರಟ್ಟತ್ತ್. ಮನೆಲಿ ಬಂದು ನೋಡಿರೆ ಮಗಳ್ ಇತ್ತುಲೆ ಗಂಡ ಬಂದು ಮಗಳ, ತವರು ಮನೆಂದ ಕರುಕೊಡು ಹೋಗಿಯಾಗಿತ್ತ್.

* * * * *

ಗಿಡಲಿ ಬೊಗ್ಗದ್ ಮರಲಿ ಬೊಗ್ಗುದಾ? – ಗಾದೆ

ಪ್ರಾಮಾಣಿಕತೆ

ದಿವಾಕರ ಮುಖ್ಯ ಇಂಜಿನಿಯರ್ ಆಗಿ ಕೆಲ್ಸ ಸುರ್ ಮಾಡಿ ಕೆಲವು ತಿಂಗಳು ಆತ್ತ್ ಅಷ್ಟೇ. ಜಿಲ್ಲೆನ ಉದ್ದಗಲಕ್ಕೂ ಪ್ರಯಾಣಿಸಿಕೆ ಇತ್ತ್. ಈ ಕೆಲ್ಸಕ್ಕಾಗಿಯೇ ಸರಕಾರ ಅಂಬಾಸಿಡರ್ ಕಾರನ್ನ ಕೊಟ್ಟಿದ್ದರಿಂದ ಆಚೆ –ಈಚೆ ಹೋಕೆ ಏನೂ ತೊಂದರೆ ಇತ್ತ್‌ಲೆ.

ಹಿಂಗೆ ಜಿಲ್ಲೆನ ಮೂಲೆ ಮೂಲೆಗೂ ಪ್ರಯಾಣಿಸುತ್ತಿದ್ದೊ. ದಿವಾಕರ ಒಂದೇ ಒಂದು ದಿನನು ಪ್ರವಾಸಿ ತಾಣನ ನೋಡಿಕೆ ಹೋತಿತ್ತ್‌ಲೆ. ಸರಕಾರದ ನಿಯಮ ಮಾತ್ರ ಸರಿಯಾಗಿ ಪಾಲಿಸುತಿತ್ತ್. ಇವ್ವ ಸರಕಾರಿ ವಾಹನ ದುರ್ಬಳಕೆಯನ್ನೆಂದೂ ಸಹಿಸುತಿತ್ತ್‌ಲೆ. ಯಾವುದೇ ಐತಿಹಾಸಿಕ ಜಾಗೆನ್ನಾಗಲೀ ಪ್ರಕೃತಿ ಸೌಂದರ್ಯನ್ನಾಗಲಿ ನೋಡಿ ಸವಿತ್ತಿತ್ತ್‌ಲೆ. ಅದರ ಬಗ್ಗೆ ಆಸಕ್ತಿ ಕೂಡ ಇತ್ತ್‌ಲೆ. ನಾನಾತು ತನ್ನ ಕೆಲ್ಸ ಆತು. ನನ್ನ ಕೆಲ್ಸ ಮಾತ್ರ ಒಂದು ಚೂರು ಹೆಚ್ಚು ಕಮ್ಮಿ ಆಕೆ ಬೊತ್ತು. ಪ್ರಾಮಾಣಿಕತೆತೇಳ್ದು, ಹೆಣ್ಣಿಗೆ ಮಕ್ಕಳಿಗೆ ಬೇಜಾರು ಆವೊಷ್ಟ್ ಪ್ರಾಮಾಣಿಕತೆ.

ಅವನ ಹೆಣ್ಣ್ ದೇವಿನ ಸ್ವಭಾವ ಮಾತ್ರ ವಿರುದ್ದ. ಎಲ್ಲವೂ ಪ್ರಾಮಾಣಿಕರು ಆಗಿದ್ದರೆ ನೀವು ಪ್ರಾಮಾಣಿಕತೆಂದ ಕೆಲ್ಸ ಮಾಡುವೊರೀ. ಯಾರಿಗೂ ಬೇಡದ್ದ್ ನೀವುಗ್ಗೆ ಯಾಕೆ ಬೇಕು? ನಿಮ್ಮ ಮಕ್ಕಳು ವಿದ್ಯಾವಂತರಾದು ಬೇಡನಾ........?

ಒಮ್ಮೆ ನಾವು ದೇವರಕೋಲ್ಲಿ ಜಲಪಾತ ನೋಡಿ ಬರೋಮ.

ಅದು ತುಂಬ ದೂರ ಇಲ್ಲೆ?.

ನೀರು ದುಮ್ಮಿಕ್ಕಿ ಹರಿಯದರ ನೋಡುವುದರ್‌ಲ್ಲಿ ಏನು ಖುಷಿ ಕಂಡದೇ......?


ನಂಗೆ ಗೊತ್ತ್‌ಲೆ!.

ಸುಮ್ಮನೆ ದಿನಾನು ಹಾಳು ದುಡ್ಡುನೂ ಹಾಳು.

ದಿವಾಕರ ಹೆಣ್ಣ್‌ನ ಉತ್ಸಾಹಕ್ಕೆ ನೀರು ಹಾಕಿತ್ತ್. ಈ ದರಿದ್ರನ ಕೈ ಹಿಡ್‌ದೊಂದ್ದ್, ನನ್ನ ಹಣೆಬರಹತೇಳಿ.......... ಬೇಜಾರುಲಿ ಹೇಳ್ತು. ಅವ್ವ ಜೋಸ್ತಿಗಳೊಟ್ಟಿಗೆ ಕೋಳಿ ಕಟ್ಟಕ್ಕೆ ಹೊರಟು ಹೊತಿತ್ತ್. ಅದು ನಿರಾಶೆಂದ ಅಡುಗೆ ರೂಮ್‌ಗೆ ಹೋಗಿ ಮಂಕಾಗಿ ಕುದುರುತಿತ್ತ್.

ರಾತ್ರಿ ತುಂಬ ತಡ ಆಗಿ ಮನೆಗೆ ಬಂದ ಗಂಡ ಹೆಣ್ಣ್‌ನ ಸಮಾಧಾನ ಪಡುಸುತ್ತಿತ್ತ್. ಎರಡು ಮಕ್ಕಬಸ್ಸುಲಿ ಹೋಗಿ ಬಾದಕ್ಕೆ ತೊಂದರೆ ಇಲ್ಲೆ? ಜೀನ್ಸ್ ಪ್ಯಾಂಟ್ ಹಾಕಿ ಬಸ್ಸುಲಿ ಪ್ರಯಾಣ ಮಾಡಿಕಾನ ನಮ್ಮ ಪರಿಚಯದವು ನೋಡಿರೇ ನಂಗೆ ಅವಮಾನ. ನಮ್ಮ ಹೆಣ್ಣ್ ಮಕ್ಕಳಿಗೆ ಹಿಂಗೆಲ್ಲಾ ಆಸಕ್ತಿ ಇರಿಕಾದು.?!

ಆಗ ದೇವಿ ಉತ್ತರಿಸುವ ಗೋಜಿಗೆ ಹೋಗದೆ. ಗುಡಿ ಹೊದ್ದು ಮಲಗ್ಗಿತ್ತಿತ್ತ್.



ಸಂಚರಿಸಿಕೆ ಕೆಲ್ಸ ಸಿಕ್ಕಿತ್ತ್. ಒಬ್ಬ ಮಂಜ ಅಜ್ಜಿನ ಮನೆಲಿ ಇತ್ತ್. ಮತ್ತೊಬ್ಬ ಪರವೂರಲಿ ಓದುತ್ತ ಇತ್ತ್. ದೇವಿ ತಿರ್ಮಾನ ಮಾಡಿಕೊಂಡು ತಲಕಾವೇರಿಗೆ ಹೋಗಿ ಅಲ್ಲಿ ಇರುವ ತೀರ್ಥ ಕುಂಡಿಕೆನ ನೋಡೊಕ್‌ತೇಳಿ ಹೇಳುತ್ತ್.

ರಾತ್ರಿ ಯಾಗೋಳು ನಂಗೆ ದಿವಾಕರ ನನ್ನ ಸೂಟ್‌ಕೇಸ್ ರೆಡಿ ಮಾಡುತೇಳಿ ಹೇಳುತ್ತ್ ಬೊಳುಪ್ಪಿಗೆ ನಂಗೆ ಮಡಿಕೇರಿಗೆ ಹೋಕುಟ್ಟು. ಅವನ ಹೆಣ್ಣ್ ಯೋಚಿಸಿತು. ಈ ಸೆರುತ್ತೀ ನಿಮ್ಮೊಟ್ಟಿಗೆ ನಾನು ಬಂಥನೆ. ಮಡಿಕೇರಿಂದ ಭಾಗಮಂಡಲ ದಾರಿಲಿ ಸಿಕ್ಕಿದೆ ತಲಕಾವೇರಿ ಅದರ ನೋಡಿ ಹೋಕು. ಅದರ ನಿರ್ಧಾರನ ತಿಳಿಸಿತ್ತ್.

ನಾ ಕೆಲ್ಸದ ಮೇಲೆ ಹೋದು. ಇನ್ನು ನಿನ್ನ ಕರ್‍ಕೊಂಡು ಹೋದರೆ ನಾಳೆ ಸಚಿವರಿಗೆ ದೂರು ಹೋದು ಯಾಗೋಳು ನಂಗೆ ಕುಂಟು ನೆಪ ಹೇಳ್‌ತ್ತ್. ನೀರು ಇರುವ ಆ ಸಣ್ಣ ಹೊಂಡನ ಇದುವರೆಗೆ ನೋಡುತ್ತ್‌ಲೆನಾ? ಏಕೆ ನನ್ನ ಜೀವ ತಿಂದಿಯಾ?.

ನೀವು ಎಂತ ಹೇಳಿರೂ ನಾ ಈ ಸೇರ್‌ತ್ತಿ ನಿಮ್ಮೊಟ್ಟಿಗೆ ಬನ್ನೆ.

ಗಂಡನ ಯಾವ ಮಾತಿಗೂ ಜಗ್ಗದೆ ಹೇಳುತ್ತ್. ಅದು ಸೂಟ್‌ಕೇಸ್ ರೆಡಿ ಮಾಡಿ ಬಟ್ಟೆಗಳ ತೇಗ್‌ದ್ದ್ ಇಸಿತ್ತ್. ಬೊಳ್ಪುಗೆ 7 ಗಂಟೆಗೆ ಹೊರ್‌ಡುದು, 4 ಗಂಟೆಗೆ ಎದ್ದು ರೆಡಿಯಾಕುತೇಳಿ ಅಲರಾಂ ತಿರ್‌ಗ್ಗಿಸಿ ಇಸಿತ್ತ್. ಮನೆನ ರಾತ್ರೀನೆ ಗುಡ್‌ಸ್ಸಿತ್ತ್. ಬೊಳ್ಪುನ ಕೆಲ್ಸನ ಕೂಡ ಮಾಡುತ್ತ್. ಅದುನಾ ಕಂಡ ತುಂಬ ದಿನದ ಕನ್‌ಸ್ಸು..! ನನಸ್ಸ್ ಆತ್!!!?. ಹೋಗಿ ತೀರ್ಥ ಕುಂಡಿಕೇನ ನೋಡಿಕೊಂಡು ಬಾಕನ ಓಂಕಾರೇಶ್ವರ ದೇವಸ್ಥಾನಕ್ಕೆ ಹೋಗಿ ಬರೊಕು. ಇನ್ನೊಮ್ಮೆ ಹೋಕೆ ಆಗದಿದ್ದರೆ ಬೊಳ್ಪಿಗೆ ಹೊರಡಿಕನ ಇವು ಇನ್ನೊಂದ್ ಏನಾದರ್ ನೆಪ ಹೇಳಿ ನನ್ನ ಬುಟ್ಟು ಹೋಗದ್ದಿದ್ದರೆ ಸಾಕ್.

ಬೊಳ್ಪುಗೆ ಅಲಾರಾಂ ಹೊಡಿಯಕೆ ಮುಂದೆನೇ ಬೇಗ ಎದ್ದೊತ್. ಒಂದೊಂದೇ ಕೆಲ್ಸ ಮುಗಿಸಿ ಮೀಂದ್ ಆಗಿ ದಿವಾಕರನ ಒಮ್ಮೆ ಕರುತ್ತ್.

ನೀ ಇಂದು ಬರ್‌ಬಡ, ರಜೆ ಸಿಕ್ಕಕನೊಮ್ಮೆ ನಾವೆಲ್ಲವೂ ಪೋಯಿ. ನಾನು ಸಂಕಟ ಅನುಭವಿಸಿ ಸಾಕತ್ತ್ ಇನ್ನೂ ಟೂರುಗೆ ಹೆಣ್ಣ್‌ನ, ಮಕ್ಕಳನ್ನೂ ಕಟ್ಟಿಕೊಂಡು ಹೋಕುತೇಳಿ ಬೇಡಿಕೆ ಇಸಿದೆ?. ಅಧಿಕಾರಿಗ ಟೂರುಗೆ ಹೋಕನ ನಮ್ಮ ನಮ್ಮ ಹೆಣ್ಣ್ ಮಕ್ಕಳ ಕರ್‌ಕೊಂಡು ಹೋಕು ತೇಳುವ ನಿಯಮ ಉಟ್ಟು ಮಕ್ಕಳಂತೂ ಈಗ ನಮ್ಮೊಟ್ಟಿಗೆ ಇಲ್ಲೆ ನಾನೇನು ವಿರುದ್ಧ ಹೋದೇನಾ ಇಲ್ಲೆಲ್ಲಾ ಹೇಳ್‌ತ್ತ್ ದೇವಿ. ಬರಕಾಯಿತ್ತ್, ಬೇಗನೆ ಹೋಕಾಗಿತ್ತುತೇಳಿ ಅವನ ಉತ್ತರ ರೆಡಿ.

ನಾ ಯಾಗೋಳುನಾ ಹೋತ್ತುಗೆ ಬಂದಳೆ ಹೆಚ್ಚು ಹೊತ್ತು ಕೆಲ್ಸ ಮಾಡಿದರೆ ಹೆಚ್ಚು ಸಂಬಳ ಕೊಟ್ಟಳರ್ಥಿನಾ? 'ನಾಯಿಬಾಲ ಅಲ್ಲಾಡಿಕ್ಕಿಲ್ಲೆ ಬಾಲ ಆಡುಸಿಕ್ಕೆ ಹೊದರೆ ನಾಯಿಯೇ ಅಲ್ಲಾಡುದಂಗೆ' ತೇಳಿ ದೇವಿ ಹೇಳುತ್ತು. ಜಾಸ್ತಿ ಮಾತಡ್‌ಬಡ, ಮಾತಾಡಿರೆ ಅವನ ಜೋಸ್ತಿಗ ನಾಳೆ ನಮ್ಮ ಮನೆ ಎದುರು ಪ್ರತಿಭಟನೆ ಮಾಡುವ ಮದ್ಯಾಹ್ನ 12

ಬೊಳ್ಪು

ನಾ ಯಾಗೋಳುನಾ ಹೋತ್ತುಗೆ ಬಂದಳೆ ಹೆಚ್ಚು ಹೊತ್ತು ಕೆಲ್ಸ ಮಾಡಿದರೆ ಹೆಚ್ಚು ಸಂಬಳ ಕೊಟ್ಟಳರ್ಥಿನಾ? 'ನಾಯಿಬಾಲ ಅಲ್ಲಾಡಿಕ್ಕಿಲ್ಲೆ ಬಾಲ ಆಡುಸಿಕ್ಕೆ ಹೊದರೆ ನಾಯಿಯೇ ಅಲ್ಲಾಡುದಂಗೆ' ತೇಳಿ ದೇವಿ ಹೇಳುತ್ತು. ಜಾಸ್ತಿ ಮಾತಡ್‌ಬಡ, ಮಾತಾಡಿರೆ ಅವನ ಜೋಸ್ತಿಗ ನಾಳೆ ನಮ್ಮ ಮನೆ ಎದುರು ಪ್ರತಿಭಟನೆ ಮಾಡುವ ಮದ್ಯಾಹ್ನ 12 ಗಂಟೆಗೆ ಮುಂದೆನೆ ನಾವಲ್ಲಿಗೆ ಎತ್ತೊಕು ಅಂದುಕೊಂಡ್ಡಂಗೆ ನಾವುಗೆ ಇಲ್ಲಿಗೆ ಎತ್ತಿಕೆ ಆಗದಿದ್ದರೆ ತೇಳಿಕನ ಮನೆಗೆ ಹೊಸ ನೆಂಟ್ರು ಬಂದೊ!. ಗುಂಡಣ್ಣ ಬನ್ನಿ ಒಳಗೆ, ಕುದ್ರಿತೇಳಿ ದಿವಾಕರ ಅವನ ಕುದ್ರಿಸಿ, ಒಳಗೆ ಹೋಗಿ ಹೆಣ್ಣ್‌ನೊಟ್ಟಿಗೆ ದೇವಿ. ನನ್ನ ಸಹಾಯಕ ಇಂಜಿನಿಯರ್, ಬಂದೊಳೊ ಬೇಗ ಚಹಾ ಮಾಡುತೇಳಿ ಅವಸರ ಮಾಡ್‌ದ್ದೊ. ದೇವಿ ಹಿಂದೆ ಮುಂದೆ ನೋಡಿ ಮೆಲ್ಲಗೆ ಗಂಡನೊಟ್ಟಿಗೆ ಅವು ನಮ್ಮ ಮನೇಲಿ ಚಹಾ ಕಡ್‌ವೆನಾತೇಳಿ ಕೇಳಿ. ವಿದ್ಯಾವಂತರು ಏನು ಹಾಂಗೆಲ್ಲ ಮಾಡುದ್ದುಲ್ಲೆ ಅವು ಚಹಾ ಕುಡ್ದಾವೆನಾ? ನೀ ಬೇಗ ಚಹಾ ಮಾಡು.

ದೇವಿ ಹೊರಟು ನಿಂತುಟು ಪುನಃ ಅಡಿಗೆ ಮನೆಗೆ ಹೋಗಿ ಚಹಾ ಮಾಡಿ ಅಂಗ್‌ಡಿಂದ ತಂದ ತಿಂಡಿಗಳ ಬಟ್ಟುಲ್ಲುಲಿ ಹಾಕಿ ಟ್ರೆಲಿ ಜೋಡಿಸಿ ಅತಿಥಿಗಳ ಮುಂದೆ ಟಿಪಾಯಿ ಮೇಲೆ ಇಸಿತ್, ಗುಂಡಣ್ಣ ಇದು ನನ್ನ ಹೆಣ್ಣ್. ದೇವಿತೇಳಿ ದಿವಾಕರ ಪರಿಚಯಿಸಿದೋ, ದೇವಿ ಕೈ ಮುಗ್ಗ್‌ದು ನಮಸ್ಕಾರ ತೇಳುತ್. ಅವನು ಎದ್ದು ನಿಂತು ನಮಸ್ಕಾರ ತೇಳುತ್.

ನೀವುಗೆ ಯಾಕೇ ಸುಮ್ಮನೆ ತೊಂದರೆ? ನಾ ಇಂದು ವ್ರತ ಅಚರಿಸುತಾ ಒಳೇ ಈಗ ನಾ ಎಂತೊದು ತಕಂಬೊದುಲೇ ತೇಳಿ ಹೇಳುತ್ತು ಒಳೆಗೆ ಹೋಗಿ ದೇವಿ ಗಂಡನ ಸಿಟ್ಟುಲಿ ನೋಡುತ್. ಎಂತೊದು ಹೇಳದೆ ಚಹಾ ತಿಂಡಿನ ಒಳಗೆ ತಕೊಂಡು ಹೋಗಿ ಕುಪ್ಪಿಗೆ ತಿಂಡಿನ ತುಂಬಿಸಿತು ಚಹಾನ ತೂಸಿ ಗ್ಲಾಸ್‌ನ ತೋಳ್‌ದ್ದು ಇಸಿತ್.

ಕಾರು ಹೊರಟಿತ್, ದೇವಿಗೆ ಮತ್ತೆ ಜೀವ ಬಂದ್ದಾಂಗೆ ಆತ್ ದಿವಾಕರ ನನ್ನ ಬುಟ್ಟು ಹೋದೆತೇಳ್‌ವ ಆತಂಕ ಇತ್ತು. ಕಾರು ಹೋರಟ ಮೇಲೆ ದೇವಿ ಪರಿಸರನ ಸವಿಯಕೆ ಸುರುಮಾಡುತ್.

ನಾವು ಹೆಂಗೂ ಬಂದೊಳೊ? ತಿರುಗ್ಗಿ ಹೋಕಾನ ನಾಗರ ಹೊಳೆಗೆ ಹೋಗಿ ಅಲ್ಲಿರುವ ಪ್ರಾಣಿಗಳ ಒಮ್ಮೆ ನೋಡಿ ಕೊಂಡು ಪೋಯಿತೇಳಿ ಹೆಣ್ಣ್ ಹೇಳುತ್. ಏನು? ಇನ್ನೂ ಪ್ರಾಣಿಗಳ ನೋಡ್‌ತ್ತ್‌ಲ್ಲೆನಾ?. ಕಾಡುಲಿ ಸ್ವತಂತ್ರವಾಗಿ ತಿರುಗುವ ಪ್ರಾಣಿಗಳ ನೋಡಿಕೆ ಏನು ಉಟ್ಟು? ನಂಗೆ ಒಂದೂನೂ ಅರ್ಥ ಆದುಲೇ. ಅಷ್ಟು ಸುಲಭಲಿ ಒಪ್ಪುವ ಸೋಮ್ಪನ ಹೆಣ್ಣು ಅದಲ್ಲ. ದೇವಿ ಅಲ್ಲಿ ಇರುವ ಪ್ರಾಣಿಗಳ ನೋಡಿಕೇ ಎಲ್ಲಿಂದಳೋ ಜನ ಬಂದವೇ ನಾವುಗೇ ಅಷ್ಟು ಹಕ್ಕಲೆ ಆಗಿ ಹೋಕಾನ ನಾವು ನೋಡಿಕೆ ಬೊತ್?. ನನ್ನ ಇನ್ನೊಮ್ಮೆ ಕರ್‌ಕೊಂಡ್ ಹೋವು ಅಲ್ಲ? ಹೆಂಗೂ ಬಂದೊಳೊ? ಕುಂಡಿಕೆ ಮತ್ತೆ

ಮೃಗಾಲಯ ತೊರ್‌ಸಿ ಬುಡಿತೇಳಿ ಮರ್‌ಡಿಕೆ ಸುರುಮಾಡುತ್ತ್.

ಹ್ಞಾಂ ಆಗಲಿ ಅರ್ದಮನ್‌ಸ್ಸುಲಿ ಒಪ್ಪಿಸಿತು ದಿವಾಕರ್ ಮತ್ತೆ ಗುಂಡಣ್ಣ ನಾವು ತಲಕಾವೇರಿ ನೋಡಿದ ಮೇಲೆ ನಾಗರಹೊಳೆಗೆ ಪೋಯಿ ತೇಳಿ ಎದುರುನ ಸೀಟಿಗೆ ಬೊಗ್ಗಿ ಹೇಳ್ದೆ.

ಸಾರ್..... ಈಗಲೆ ತುಂಬ ಹೊತ್ತು ಅಗುಟು, ಕಾರು ಮುಂದೆ ಮುಂದೆ ಹೊದಾಂಗೆ ದಿವಾಕರ ನಿದ್ರೆ ತೋಗಿಕೆ ಸುರು ಮಾಡ್ತು. ಅವ ಹೇಳದ್ಹಂಗೆ ಈಗ ತುಂಬ ಹೊತ್ತು ಆಗುಟು ಇನ್ನೂ ತಲಕಾವೇರಿ ನೋಡುದ್ದ ಮೇಲೆ ಅಂತು ಇನ್ನೂ ಅರ್ದಗಂಟೆ ತಡ ಆದೆ ದಿವಾಕರ ವಾಚು ನೋಡಿಕಾನ ಗಂಟೆ ಹನ್ನೊಂದು ಆಗಿತ್ತ್. ಒಂದು ಗಂಟೆಲಿ ನಾ ನೆಂಟ್ರ ಮನೆಲಿ ಇದ್ದಿದ್ದೆ ಎಲ್ಲಾ ಅಧಿಕಾರಿ ನಂಗೆ ಕಾಯಿತಾ ಒಳೋ ಇನ್ನೂ ಒಂದು ಗಂಟೆಯಾರು ಬೇಕು.

ಭಾಗಮಂಡಲ ಹಕ್ಕಲೆ ಹೋಕಾನ ದಿವಾಕರ ದೇವಿ ಈಗ ತುಂಬಾ ಹೊತ್ತಾತ್ ನಾವು ಬಾಕಾನ ತಲಕಾವೇರಿ ನೊಡೋಮೊ.

ಇನ್ನು ಸೀದಾ ಮಡಿಕೇರಿಗೆ ಪೋಯಿತೇಳಿ ಡ್ರೈವರ್ ಹೇಳುತ್ತ್.

ದೇವಿನ ಮೋರೆ ಬಾಡಿ ಹೊತ್ ಮತ್ತೆ ಮೃಗಾಲಯ ತೇಳಿ ಕೇಳುತ್ತ್.

ಎಲ್ಲಾ ನೊಡೊಕ್‌ತೇಳಿ ಹಂಗೆ ಯಾದಾರು ಒಂದರ ಆಯ್ಕೆ ಮಾಡಿಕ್ಕ ಇನ್ನೊಂದರ ಮತ್ತೆ ಯಾಗಾರು ನೊಡೋಮೊ. ಮೆಲ್ಲಂಗೆ ಬೈಯಿದೊ.

ಅರ್ದ ಗಂಟೆ ತಡ ಆದರೆ ಎಂತ ಆದೆ, ತಲಾಕಾವೇರಿಗೆ ಪೋಯಿ ತೇಳಿ ಕೊಪಂದ್ದ ಹೇಳುತ್ತ್. ದಿವಾಕರ ಸುಮ್ಮನೆ ಕುದ್ದುಟು.

ಕಾರು ತಲಕಾವೇರಿಗೆ ಹೋಗದೆ ಸೀದಾ ಮುಂದೆ ಹೊತ್ ಡ್ರೈವರ್ ನೊಟ್ಟಿಗೆ ಎಂತ ಹೇಳುವ ಹಾಂಗೆ ಇಲ್ಲೆ ಕಾರುಲಿ ಸುಮ್ಮನೆ ಕುದ್ದೊತ್. ಅರ್ದಹೊತ್ತಾಗಿ ಕಾರು ಮಡಿಕೇರಿಗೆ ಎತ್ತಿತ್ತ್ ಅಧಿಕಾರಿಗ ಸ್ವಾಗತಿಸಿದ. ದೇವಿ ಅವುಕ್ಕೆ ಆಗಿ ಇದ್ದ ರೂಮ್‌ಲೀ ಮೊರೆತೊಳ್ದ್ ಹಾಸಿಗೆ ಮೇಲೆ ಬಿದ್ದುಕೊಂಡೊತ್ತ್. ಊಟ ಆದ ಮೇಲೆ ಅದು ತಂದ ಪುಸ್ತಕನ ಓದಿಕೆ ಸುರು ಮಾಡುತ್ತ್. ದಿವಾಕರ ಇನ್ನೂ ಬಾದು ರಾತ್ರಿನೆ ತೇಳಿ ಅದುಕ್ಕೆ ಗೊತ್ತಿತ್ತು. ಗಂಡ ಹಿಂದ್ಹೆದ್ದ ಹೊದು ಅದುಕ್ಕೆ ಇಷ್ಟ ಇತ್ತುಲೇ ರಾತ್ರೆ ಊಟ ಆದ ಮೇಲೆ ದಿವಾಕರ ಅಪೀಸ್ ಪೈಲುಲ್ಲಿ ಮುಳುಗಿತ್ತು. ಕಾರುಲಿ ಬಂದು ಸುಸ್ತು ಆದರಂದ ದೇವಿ ನಿದ್ದೆ ಮಾಡಿತ್ತು ಎಷ್ಟೊ ಹೊತ್ತು ಆದ ಮೇಲೆ ಅವ್ವ ಕೋಣೆಗೆ ಬಾತು.

ಮಾರಣೆ ದಿನ ಬೊಳುಪ್ಪುಗೆ ದಿವಾಕರ ದೇವಿ ನಾವು ಹಿಂಬೊತ್ತು 3 ಗಂಟೆಗೆ ಇಲ್ಲಿಂದ ಹೊರ್‌ಡೊಮ್ಮೊ ತಲಕಾವೇರಿ ನೊಡಿದ್ದ ಮೇಲೆ ಮನೆಗೆ ಎಂಟು ಗಂಟೆಗೆ ಎತ್ತೊಕ್ಕು. ನಾ ಅದೊಷ್ಟು ಬೇಗ ಅಪೀಸು ಕೆಲ್ಸ ಮುಗ್‌ಸ್ಸಿ ಬನ್ನೆತೇಳಿ ಹೊರಟ್ಟಿತ್ತ್.

ಹಿಂಬೊತ್ತು 3 ಗಂಟೆ ಆದರೂ ಹೊರ್‌ಡಿಕ್ಕೆ ಆತುಲೆ ದಿವಾಕರ 4 ಗಂಟೆಗೆ

ಮುಂದೆ ಹೊರಿಡಿಕ್ಕೆ ಆದುಲೆ. ಕಟ್ಟಡ ಒಡ್‌ದ್ದು ಬಾಗಿಲು ಸೆರಿ ಮಾಡದೆ ಇದ್ದರೆ ಅವ ಬಿಲ್ ಪಾಸ್ ಮಾಡುದ್ದುಲೇ ತೇಳಿ ಮೇಲಾಧಿಕಾರಿಗ ಹೇಳ್ದೋ ಅವನೊಟ್ಟಿಗೆ ನಂಗೆ ಮಾತಾಡೀಕೆ ಆಕಿಲೆ. ನಾ ಸುಮ್ಮನೆ ಕುದ್ದೆ. ಇಲ್ಲಿಂದ ಒಮ್ಮೆ ತಪ್ಪಿಸಿಕೊಂಡು ಮನೆ ಸೇರಿರೆ ಸಾಕು ಹಂಗೆ ಹೇಳಿಕೊಂಡು ರೂಮ್‌ಗೆ ಬಾತು. ದೇವಿ ಗಂಡನ ಸಿಟ್ಟುನ ಚೆಣ್‌ಸ್ಸಿಕ್ಕೆ ನೋಡುತ್ತ್.

ಎರಡು ದಿನ ಸಪ್ಪೆ ಆಗಿ ಇದ್ದ ದೇವಿ ಹೋವ ಹೊತ್ತ್ ನೆಗಾಡುಸ್ಸೋಕ್‌ತೇಳಿ ದಿವಾಕರ ಪ್ಲೇನ್ ಹಾಕಿತು.

ಈಗ ಹೇಳು ತೀರ್ಥ ಕುಡಿಕೆನ ನೋಡ್ದೊ?

ಅಲ್ಲಿ ಮೃಗಾಲಯನ ನೋಡ್ದೊ?

ನೀ ಹೇಳು?

ದೇವಿನ ಮನಸ್ಸಿಲೀ ಇದ್ದ ಬೇಜಾರಾನ ತೆಗ್ದ್ ಹಾಕೊಕುತೇಳಿ ಪ್ರಯತ್ನಪಟ್ಟಿತ್ತ್. ದೇವಿ ಎಂತೋದು ಹೇಳದೆ ಬೇರೆ ಎಲ್ಲೊ ನೋಡಿಕೊಂಡು ಕುದ್ದೊತ್.

ನಿಮ್ಮ ಗಾಳಕ್ಕೆ ಸಿಕ್ಕಿ ಒದ್ದಾಡಿಕೊಂಡು ಇರುವ ಬದಲು ಖುಷಿಲಿ ನೀವು ತೊರ್‌ಸಿಯೆರಿ, ನೀವೆ ಹೇಳಿತೇಳಿ ಗಂಡನ ಕೇಳುತ್ತ್. ಸ್ವತಂತ್ರ ಆಗಿ ಹರಿವ ನೀರಿಗೆ ಹಾಳು ನೀರು ಸೇರಿ ಅದರನ್ನು ಹಾಳು ಮಾಡ್‌ವ್ಹಂಗೆತೇಳಿ ದಿವಾಕರನ ಖುಷಿಲಿ ದೇವೀನು ಪಾಲ್ಗೊಳ್ಳುವ ಯೋಚನೆ. ಆದಿನ ಅವನ ಮನಸ್ಸಿಗೆ ಖುಷಿ ಕೊಟ್ಟಿತ್ತ್.

ಕಾರು ಹೊರಡ್ಡಿಕಾನ ದೇವಿನ ಸಂತೋಷ ಉಕ್ಕುತಿತ್ತು. ನಮ್ಮೊಟ್ಟಿಗೆ ಕಾರೂಲಿ ಗುಂಡಣ್ಣ ಮತ್ತು ರಾಮ್ ಕೂಡ ಹೊರಟಿದ್ದೊ. ಇವರ ನೋಡಿ ದೇವಿ ಇವರೊಟ್ಟಿಗೆ ಮಾತಾಡಿಕೇನು ಇಷ್ಟ ಇಲ್ಲದವರಂಗೆ ನಟನೆ ಮಾಡುತ್ತ್. ನಾ ದಿವಾಕರ ಒಟ್ಟಿಗೆ ಬಂದೋವು. ಅವಂಗೆ ಕೋಪ ಬರದ್ಹಂಗೆ ವರ್ತಿಸ್‌ತ್ತಿದ್ದೊ. ದೇವಿ ಗಂಡನ ಮತ್ತೆ ಇಬ್ಬರ ಮೇಲೆ ಓರೇ ಕಣ್ಣಲಿ ನೋಡಿ ಎಲ್ಲಾನಾ ಅರ್ಥ ಮಾಡುತ್ತಿತ್ತ್. ಗಂಡ ಹಿಂದೆ ಹೇಳ್‌ದ್ದ ಮಾತು ಅದರ ಮನ್‌ಸ್ಸುಲಿ ಕೊರಿಯೊತ್ತಿತ್ತ್.

ನಾವು ಬಹುಸಂಖ್ಯಾತರು ನಮ್ಮ ಮೇಲೆ ಅತ್ಯಾಚಾರ ಮಾಡುತ್ತಾ ಒಳೋ. ಅದರ ಬಗ್ಗೆ ಜಾಗ್ರತೆ ವಹಿಸೋಕು.ಇಲ್ಲದಿದ್ದರೆ ಹೊಂಡಕ್ಕೆ ಬೀಳುದ್ದು ಗ್ಯಾರಂಟಿ. ಜಾತ್ಯಾತೀತ ಕಿಚ್ಚಿಲಿ ನಾವು ಬೆಯಿತೊ ಒಳೊ.

ಕಾರು ಹೊರಡಿಕಾನ ರಾಮ್ ಅವು ಡ್ರೈವರ್‌ನೊಟ್ಟಿಗೆ ಮಾತಾಡಿಕೊಂಡು ಓಂಕಾರೇಶ್ವರ ದೇವಸ್ಥಾನನ ರೋಡು ಆಗಿ ನಾವು ಪೋಯಿ.

ನಾವು ತಲಕಾವೇರಿಗೆ ಹೋದುಲ್ಲೆನಾ? ಖುಷಿಲಿ ಗಂಡನೊಟ್ಟಿಗೆ ಪಿಸು ಮಾತುಲಿ ದೇವಿ ಹೇಳುತ್ತ್. ದೇವಸ್ಥಾನ ನೊಡಿ ಆದಮೇಲೆ ನಾವು ತಲಕಾವೇರಿಗೆ ಪೋಯಿ ತೇಳಿ ದಿವಾಕರ ಹೇಳುತ್ತ್. ದೇವಸ್ಥಾನ ನೋಡ್ದು ಬೇಡ ತೇಳಿ ದಿವಾಕರ ಮತ್ತೆ ದೇವಿಗೆ

ಹೇಳಿಕ್ಕಿಲ್ಲೆ.

ಸಾರ್ ನೀವು ಆ ದೇವಸ್ಥಾನ ನೋಡೊಕು ಹಿಂದೆನಾ ಸೀಟುಗೆ ತಿರ್‌ಗ್ಗಿ ರಾಮ್ ಹೇಳುತ್ತ್. ಅವನ ಮಾತ್‌ಲಿ ಇನ್ನೊಂದು ಕಾರಣ ಕೊಟ್ಟದೆತೇಳಿ ಯೋಚಿಸಿತು ದೇವಿ. ಕಾರು ಮುಂದೆ ಹೋದ ಹಾಂಗೆ ಕಾಡು ದಾರಿಹೋಕನ ದನಗಳ ನಾಯಿಗ ಬೊಗಳಿಕೊಂಡು ಬೆರ್‌ಸ್ಸುದರ ನೋಡಿ ದೇವಿ ಗಂಡಂಗೆ ಒರ್‌ಗ್ಗಿ ಕುದ್ದೊತ್ತ್.

ಕಾರು ದೇವಸ್ಥಾನ ಎತ್ತಿತ್ತು. ಆಗ ಗಂಟೆ 5 ಆಗಿತ್ತು. ಇನ್ನೂ ಬೊಳುಪ್ಪು ಮೋರೆಗೆ ಹೊಡೆತಿತ್ತು. ಅದು ಹಾಳು ದೇವಸ್ಥಾನ. ಅಲ್ಲಿ ಎಷ್ಟೋ ಒಳ್ಳೆ ಕೆತ್ತನೆಗಳು ಇದ್ದೊ. ದೇವಿ ಇದರ ಎಲ್ಲ ದುರುಗುಟ್ಟಿ ನೋಡುತ್ತಿತ್ತು. ಅದರ ನೋಡಿಕೆ ಬೋರ್ ತೇಳಿ ಅನ್‌ಸಿತ್ತ್‌ಲೆ ಅದಿಕೆ. ಇನ್ನು ಒಂದು ಘಂಟೇಲಿ ಕತ್ತಲೆ ಆದೆ. ರಾತ್ರಿ ಅಲ್ಲಿ ನೋಡುದ್ದಲ್ಲಿ ಎಂಥ ಮಜಾನೂ ಇಲ್ಲೆ. ದಿವಾಕರ ಹೊರ್‌ಡಿಕೆ ಅರ್‌ಜೆಂಟ್ ಮಾಡುತ್ತಿತ್ತ್. ಸುಮ್ಮನೆ ಎಲ್ಲಾನ ಕೇಳಿಕೊಂಡು ನಿಂತೊತ್ ದೇವಿ.

ಈ ದೇವಸ್ಥಾನಲಿ ಇದ್ದ ಚಿನ್ನಾಭರಣ, ವಜ್ರ, ವೈಢೂರ್ಯಗಳ ಬಾಚಿಕೊಂಡು ಇಂಗ್ಲೀಷರು ಹೋಗೊಳೊ. ಕೆಲವೊಂದು ಶಿಲ್ಪಕಲೆನ ಪುಡಿ ಮಾಡಿ ಹೋಗೊಳೊ.

ಕೊನೆಗೆ ದೊಡ್ಡ ಸ್ವರಲಿ ಹೇಳುತ್ತ್. ದೇವಿ ಕುತ್ತಿಗೆ ನೇಚಿ ನೋಡುತ್ತ್. ನೀ ಅಲ್ಲದಿದ್ದರೆ ನಿನ್ನ ಅಪ್ಪ ತೇಳುತ್ತ್. ಆಗಲೇ ಕತ್ತಲೆ ಆಗಿ ಹೋಗಿತ್ತು. ದೇವಿ ಯೋಚಿಸಿಕ್ಕೆ ಸುರು ಮಾಡುತ್ತ್. ಯಾರ ತಪ್ಪಿಗೆ ಯಾರಿಗೋ ಶಿಕ್ಷೆ.

ಸೆರಿ ಇನ್ನು ಪೋಯಿ. ದಿವಾಕರ ಕಾರು ಹತ್ತಿತ್ತು. ಇನ್ನೂ ಚೂರು ಬೇಗ ಬರದಿದ್ದರೆ ಇನ್ನೊಂದು ದೇವಸ್ಥಾನ ನೋಡಕಾಯಿತ್ತು. ಇಂಗ್ಲೀಷರು ನಮ್ಮ ದೇವಸ್ಥಾನನ ಹೆಂಗೆ ಹಾಳು ಮಾಡಿಯೊಳೊ, ನಮ್ಮನ್ನು ಕೊಲ್ಲಿಕೆ ಹೊರಟೊವೊ ಇಂಗ್ಲೀಷರು ತೇಳಿ ನಾವು ಕೇಳ್ಯೋಳೊ.

ಇಷ್ಟರವರೆಗೆ ಬಾಯಿ ಮುಚ್ಚಿ ಕುದ್ದಿದ್ದ ದೇವಿ ಒಂದೊಂದೆ ಪ್ರಶ್ನೆ ಕೇಳಿಕೆ ಶುರು ಮಾಡುತ್ತು.


ತಾಜ್‌ಮಹಲ್‌ನ ಕೆತ್ತಿಕೆ ಒಂದೊಂದೆ ಬಣ್ಣ ಬಣ್ಣದ ಚಿಪ್ಪುನ ಅಂಟಿಸಿಯೊಳು ಅಲಾ? ಈ ಒಂದೊಂದು ಕಂಬಕೆ ಸಿಕ್ಕುದುಲೆ 300 ವರ್ಷ ಆಳ್‌ತ್ತಿದ್ದ ಇಂಗ್ಲೀಷರು ಅದರನ್ನೂ ಕೂಡ ಖಾಲಿ ಮಾಡಿಯೊಳು ಗಡ? ಇಂದು ಕೂಡ ನಮ್ಮ ದೇಶಲಿ ಒಂದಲ್ಲ ಒಂದು ರೀತಿ ಆಳ್‌ತ್ತಾ ಒಳೊ! ದೇವಿ ನೀ ಸುಮ್ಮನೆ ಇರ್‌ತೇಳಿ ದಿವಾಕರ ಹೇಳುತ್ತ್. ಆದರೆ ದೇವಿನ ಬಾಯಿ ಮುಚ್ಚಿಸಿಕೆ ದಿವಾಕರಂದ ಆತ್‌ಲೆ.

ಅಷ್ಟು ಮಾತ್ರ ಅಲ್ಲ. ಅಷ್ಟು ಹೊತ್ತು ಸುಮ್ಮನೆ ಕುದ್ದ ರಾಮ್ ನಾವು ಹೊಸದ್ ಕಟ್ಟದ್ದಿರೆ ಆಗಿತ್ತ್? ಅವು ಮಾತುನಾ ಬದಲಿಸಿ ದೇವಿನ ತುಟಿಗೆ ಬೀಗ ಹಾಕಿದೊ? ಅದಾ ಚೂರು ಹೊಸ್‌ತ್ತ್, ಮತ್ತೆ ಸುತ್ತ ನೋಡಿರೆ ಕತ್ತಲೆ, ಅದು ಇಸಿಕೊಂಡದ್ ಕನ್‌ಸ್ಸ್,

ಕಾಡುನ ಸಹವಾಸ

ಅವ್ವಂಗೆ ಒಂದು ಇತಿಹಾಸ ಇತ್ತ್. ಅವನ ಕುಟುಂಬ ಮಾಣಿಮರ್ದು ದೊಡ್ಡ ಕಾಡುನ ನಡುಲಿ ಒಂದು ಮುಳಿ ಹುಲ್ಲುನ ಮನೆ ಕಟ್ಟಿ ವಾಸ ಮಾಡುತ್ತಿತ್ತ್. ಕುಟುಂಬ ತೇಳಿರೆ ಅಪ್ಪ, ಅಮ್ಮ, ಅಣ್ಣ, ತಂಗೆ. ಅವ ಕಾಡುನ ನಡುಲಿ ಮನೆ ಕಟ್ಟಿದು ಯಾಕೆ ತೇಳಿ ಅವ್ವಂಗೆ, ಗೊತ್ತಿರ್‌ಕಿಲೆ. ಅವು ಕಾಡಿಗೆ ಹೋಗಿ ಮನೆ ಕಟ್ಟಿ ಎಷ್ಟು ಸಮಯ ಆತ್‌ತೇಳಿ ಅವಂಗೆ ಗೊತ್ತಿರ್‌ಕಿಲೆ. ಅವ ನಾಗರಿಕತೆಂದ ತುಂಬ ದೂರ ಇತ್ತ್‌ಲೆ. ಅವನ ಮನೆ ಇರುವಲ್ಲಿಂದ 2 ಮೈಲು ದೂರದ ಕಾಡು ದಾರಿಲಿ ನಡುದ್ದು ಹೋದರೆ ಡಾಮರ್ ರೋಡು ಸಿಗುತ್ತಿತ್ತು. ದಿನಕ್ಕೆ ಮೂರು ಸೆರ್‌ತ್ತಿ ಬಸ್ಸು ಹೊತಿತ್ತ್. ಆ ಬಸ್ಸುಲಿ ಕುದ್ದರೆ 20 ಮೈಲು ದೂರದ ಪೇಟೆಗೆ ಹೋಕೆ ಅತಿತ್ತ್. ತಿಂಗಳಿಗೊಮ್ಮೆ ಆ ಬಸ್ಸುಲಿ ಹೋಗಿ ಅಗತ್ಯ ಇರುವ ಸಾಮಾನುನ ತರ್‌ತ್ತಿದ್ದೊ ಎಲ್ಲೋವು ಬಸ್ಸುನ ಹಕ್ಕಲೆ ಮುಟ್ಟ ಹೋದು, ಒಬ್ಬ ಮಾತ್ರ ಬಸ್ಸುಲಿ ಹೋಗಿ ಸಾಮಾನು ತಾದು, ಅವನ ಒಟ್ಟಿಗೆ ಬಂದೊವು ಬಸ್ಸುನ ನೋಡಿ ತಿರುಗಿ ಬಾದು. ಕಾಡು ನಡುಲಿ ಇರುವ ಇವುಕ್ಕೇ ಬಸ್ಸುಲಿ ಹೊದ್‌ಕೆ ದುಡ್ಡು ಬೇಡನಾ ಅವು ಆ ದೊಡ್ಡ ಕಾಡು ನಡುಲಿ ಇದ್ದು ಎಂತ ಸಾಧಿಸಿ ಒಳೋ? ಅವರಲ್ಲಿ ದುಡ್ಡುನ ಪ್ರಶ್ನೆನು ಬಂದದೆ. ಬಸ್ಸುಲಿ ಹೋಕು ತೇಳಿರೆ ದುಡ್ಡು ಕೋಡೊಕ್. ನಾವುಗೆ ಬೇಕೆ–ಬೇಕು ತೇಳುವ ಸಾಮಾನು ತೇಳಿರೆ ಬೆಂಕಿ ಪೆಟ್ಟಿಗೆ, ಉಪ್ಪು ಮತ್ತೆ ಬೇರೆ ಸಾಮಾನುಗ. ಸಾಮಾನು ತರೊಕ್ ತೇಳಿರೆ ದುಡ್ಡು ಬೇಕು ತೇಳಿ ಅವುಕೇ ಗೊತ್ತಿತ್ತ್. ಕಾಡೂಲಿ ಇರುವ ಕಾಡು

ಉತ್ಪತ್ತಿನ ಮಾರಿರೆ ದುಡ್ಡು ಸಿಕ್ಕಿದೆ ತೇಳುವ ಸಂಗತಿ ಗೊತ್ತಿಲ್ಲದ್ದು ಏನೂ ಅಲ್ಲ. ನಾವು ಕಾಡುಲೀ ಏಕೇ ಒಳೋ ತೇಳುವ ಉದ್ದೇಶ ಕೂಡ ಗೊತ್ತಿತುಲೆ.



ಕಾಡೂನ ಬೇರೆ ಕಡೇಲಿ ಇರುವ ಜನ ಅವರ 'ಗಿರಿಜನ' ತೇಳಿ ಕರೆಯುತ್ತಿದ್ದೊ. ಕಾಡುಲಿ ವಾಸ ಮಾಡುದ್ದು ಅನಿವಾರ್ಯತೇಳದ್ದ್ ಅವ್ಹಂಗೆ ಗೊತ್ತಿತ್ತುಲೆ. ನಾವು ಹಿಂಗೆ ಇದ್ದರೆ ಒಳ್ಳೊದ್‌ತೇಳಿ ಅನ್ಸಿತ್ತಿತ್. ನಮ್ಮ ಪೇಟೆಂದ ಬೇರುಸ್ಸಿಯೊಳ್ಳದ್ದ್ ತೇಳಿ ಅವ್ಹಂಗೆ ಅತಿತ್. ಹಂಗೆ ನೋಡಿರೆ ಅವನ ಕುಟುಂಬದ ಜೀವನ ಕ್ರಮ ಸೆರಿ ಇಲ್ಲೇ ತೇಳಿ ಅವ್ಹಂಗೆ ಅನಿಸಿಕೆ ಶರು ಆತು. ಇಲ್ಲಿಂದ ಅವ ಬುಟ್ಟು ಹೋಕೆ ಪ್ರಯತ್ನ ಮಾಡುತ್ತಿತ್.

ಎಷ್ಟಾದರೂ ಅಂವ ಹುಟ್ಟಿದ ಊರು ಅದರ ಬುಟ್ಟು ಹೋಕೆ ಮನುಸ್ಸು ಎಲ್ಲಿ ಬಂದದೆ. ಹೆಂಗೊ ಕಷ್ಟಲಿ ಬೆಳ್‌ದ್ದ ಅಂವಂಗೆ ಕಾಡುಲಿ ಇರುವ ಜನರ ಕಷ್ಟಗಳ ಬಗ್ಗೆ ಗೊತ್ತಿತ್ತು. ಗೆಣುಸ್ಸು ತಿಂಬೊದುತೇಳಿರೆ ಭಾರಿ ಕುಸಿ. ಅದರ ಬೆಳುನ್ನು ತಿದ್ದೊ ಕೂಡ. ಗೆಣುಸ್ಸುನ ಉಪ್ಪು ಹಾಕಿ ಬೇಸಿ ತಿಂಬೋದು ತೇಳಿರೆ, ಸಂತೋಷನೆ ಸಂತೋಷ. ಯಾಕೆತೇಳಿರೆ ಗೆಣುಸ್ಸು ಬೆಳ್‌ಸ್ಸುದಿಕೆ ಸಾಲುಗಳ ಮಾಡಿ ಅದರಲಿ ಬೊಳ್ಳಿ ಗೆಣುಸ್ಸು, ನಾಟಿ ಗೆಣುಸ್ಸು. ಹಿಂಗೆನೆ ಕಾಡುಲಿ ಸಿಕ್ಕುವ ಗೆಂಡೆ,ನರೆ ಇದರ ಎಲ್ಲ ತೊಂಬೊತಿದ್ದೊ. ಅಷ್ಟು ಮಾತ್ರ ಅಲ್ಲ ಕಿಚ್ಚಿಗೆ ಹಾಕಿ ಬೆಸಿ ತಿಂಬೊತಿದ್ದೊ. ಹಿಂಗೆನೇ ಗೆಣುಸ್ಸುಂದ ಸೇಮಿಗೆ ಮಾಡಿ ಒಣ್‌ಗುಸ್ಸಿ, ಇಸ್‌ತಿದ್ದೊ, ಹಪ್ಪಳ ಕೂಡ ಮಾಡುತ್ತಿದ್ದೊ. ಅದರ ಮಳೆಗಾಲ ತಿಂಬೊದು ತೇಳಿರೆ ಭಾರಿ ಖುಷಿ.

ಗೆಣುಸ್ಸುಂದ ಮಾಡುತ್ತಿದೊ ಗೈಪು ತೇಳಿ ??ತೊದು!. ಅದರ ಬಗ್ಗೆ ಹೇಳಿಕೆ ಬೊತ್ತು. ಆ ಕಾಲಲಿ ಕಥೆನೆ ಬೇರೆ. ಹೆಗ್ಗಣ????ಂಗೆ ಗೆಣುಸ್ಸುನ ಕೈಲಿ ಪರುಡ್ಡಿ ತೆಗೆತಿತ್.

ಮಾಡಿ ಒಣ್‌ಗುಸ್ಸಿ, ಇಸ್‌ತಿದ್ದೊ, ಹಪ್ಪಳ ಕೂಡ ಮಾಡುತ್ತಿದ್ದೊ. ಅದರ ಮಳೆಗಾಲ ತಿಂಬೊದು ತೇಳಿರೆ ಭಾರಿ ಖುಷಿ.

ಗೇಣುಸ್ಸುಂದ ಮಾಡುತ್ತಿದೊ ಗ್ಯೆಪು ತೇಳಿ ??ತೊದು!. ಅದರ ಬಗ್ಗೆ ಹೇಳಿಕೆ ಬೊತ್ತು. ಆ ಕಾಲಲಿ ಕಥೆನೆ ಬೇರೆ. ಹೆಗ್ಗಣ????ಂಗೆ ಗೇಣುಸ್ಸುನ ಕೈಲಿ ಪರುಡ್ಡಿ ತೆಗೆತಿತ್ತ್. ಹಿಂಗೆನೇ ತೆಗೆಕಾನ ಮರದ ಬೇರಿಗೆ ಇವನ ಬೆರಳ್‌ನ ಉಗುರು ಸೆಕ್ಕಿಕೊಂಡ್ ಆಕಾನ ಅಂವ್ವಂಗೆ ಗೇಣುಸ್ಸು ಭಾರಿ ದೊಡ್ಡೊದ್ ಉಟ್ಟುತೇಳಿ ಎಳ್ಳಿತ್ತು. ಆಕಾನ ಉಗುರು ಚರ್ಮಂದ ಬುಟ್ಟು ಎದ್ದು ಹೋತು. ಅಷ್ಟೊತ್ತಿಗೆ ಬೆರುಳ್ಳುಂದ ರಕ್ತ ಅರಿಯಕೆ ಸುರು ಆತು. ಆ ಬೆರುಳ್‌ನ ಬಾಯಿಗೆ ಹಾಕಿ ಅರಿಯಾತ್ತಿದ್ದ ರಕ್ತನ ಕುಡಿಯಾಕೆ ಸುರು ಮಾಡುತ್ತ್. ಆಕನ ತಂಗೆ ಇಂವಂಗೆ ರಣ ಹಿಡುದ್ದಿರೋಕು, ತೇಳಿ ಬೊಬ್ಬೆ ಹೊಡೆಕೆ ಸುರು ಮಾಡುತ್ತ್. ಅದೆ ತಡ ಅಪ್ಪನ ಸಂಗೀತ ವಾದ್ಯ ಬಾರುಸ್ಸಿಕೆ ಸುರು ಆತು. ಇಂವ ಓದಿದ್ದು ಗಡ ಎಂತರ? ಇನ್ನು ಬುದ್ಧಿ ಬಾತುಲೆ ನಾವು ಎಲ್ಲೊವು ಕೊಟ್ಟುಲಿ ಎಳ್ಳುತ್ತಿದ್ದೊ, ಅಷ್ಟು ಗೊತ್ತುಲೇನಾ ಅಂವಂಗೆ ಅಲ್ಲಿ ಗೋಷ್ಟಿನೆ ನಡುತ್ತ್. ಮನೆಗೆ ಬಾತು, ಕೈನ ಲಾಯುಕ್ಕು ತೊಳ್‌ದ್ದ್ ಕಮಿನಿಸ್ಟ್ ಸೊಪ್ಪುನ, ರಸನ ಬೆರ್‌ಳ್ನ ಮೇಲೆ ಹಾಕಿತ್ತ್. ಅಂದರೂ ರಕ್ತ ಕಟ್ಟಿತುಲೆ ಮತ್ತೆ ಮತ್ತೆ ಕುಡಿಯಕೆ ಸುರು ಮಾಡುತ್ತ್. ಅಂವನ ದೆಸೆನೆಟ್ಟಂಗೆ ಇತ್ತು. ರಕ್ತ ಕಟ್ಟಿತು. ಅಷ್ಟು ಹೊತ್ತಿಗೆ...........

ಅವ್ವಂಗೆ ಮತ್ತೆ ಒಂದು ಅವಕಾಶ ಬಾತು. ಮಾಣಿಮರ್ದು ಕಾಡುನ ?????? ಇನ್ನೊಂದು ಕಾಡ್‌ಲಿ ಇರುವ ರಂಗತ್ತಮಲೆಗೆ ಬಾಕೆ ಹೇಳಿ ಮಾಹಿತಿ ಕೊಡುವ ಕಾರ್ಯಕ್ರಮನ ಸರ್ಕಾರ ಭಾರಿ ಪ್ರಚಾರಲಿ ನುಡ್‌ಸ್ಸಿಕೆ ಸುರ್ ಮಾಡುತ್ತ್. ಅವ ಬಸ್ಸುಲಿ ಹೊಕೆಕಾನ ಬಸ್ಸುನ ಜನ ಅದರನ್ನೆ ಮಾತಾಡುತ್ತಿದ್ದೊ. ನೀವು ಆ ಯೋಜನೆಗೆ ಸೇರಿಯರಿನಾ? ತೇಳಿ ಜನ ಕೇಳಿಕೆ ಸುರು ಮಾಡುದ್ದೊ. ಹೇಳ್‌ತ್ತಿದ್ದವರೊಟ್ಟಿಗೆ ಆ ಯೋಜನೆನಾ ವಿವರಾನ ಕೇಳಿ ತಿಳ್‌ಕಂಡೊತ್ತ್.

ಯೋಜನೆ ಹಿಂಗೆ ಉಟ್ಟು :

ಗಿರಿಜನ ಪುನರ್ವಸತಿಗೆ ಸರಕಾರ (ಮಂದಿರಾ ಅವಾಸ್ ಯೋಜನ) ಈ ಹೊತ್ತಿಗೆ ಮನೆನ ಕಟ್ಟಿತ್ತ್. ಒಂದು ಒಳ್ಳೆ ದಿನ ರಾಜ್ಯದ ಮುಖ್ಯಮಂತ್ರಿಗಳ ಗಿರಿಜನ ಸಂಪ್ರದಾಯ ಪ್ರಕಾರ ಊರಿಗೆ ಕರಕೊಂಡು ಹೋಕೆ ಒಳೊ. ಈ ವಿಷಯ ಕೇಳ್ದ ಈ ರಾಜ್ಯ ಜನತೆ ಕಣ್ಣು ಬಾಯಿಬುಟ್ಟು ಟಿ.ವಿ ಮೂಲಕ ನೋಡ್ದೊ.ಮಂತ್ರಿಬಾವ ಗಜಗಾಂಭಿರ್ಯನಡಿಗೆ ನೋಡಿಕೆ ಬಾರಿ ಲಾಯ್‌ಕ್ಕು ಇತ್ತ್.

ಗಿರಿಜನರ ಉರಿಗೆ ಕರುಕೊಂಡು ಹೋಗಿ ಮಾಹಿತಿ ಕೊಡುವ ಬಗ್ಗೆ ಯೋಚಿಸಲಾಯಿತು. ಊರಿಗೆ ಬಾವ ಜನಗೆಲ್ಲ ಹುಲಿಗಳ ವೇಷಭೂಷಣ ಹಾಕಿದ್ದೊ. ಅವರೆಲ್ಲ ಕರುಕೊಂಡು ಬಾವ ಆರ್ಡರ್‌ನ್ನ ಒಂದು ಸಂಸ್ಥೆ ಒಪ್ಪಿಕೊಂಡಿತ್ತು. ಮುಖ್ಯಮಂತ್ರಿ

ಪೇಟೆಂದ ಕಾಡುಗೆ ಎತ್ತುನಗಾಡಿಲಿ ನಿಂತುಕೊಂಡು ನಿಧಾನಲೀ ಬರುತ್ತಾ ಇದ್ದೊ ಬಾಕನ ದಾರಿಯುದ್ದಕ್ಕು ಜನರ ನೋಡಿಕಂಡು ಕೈ ಮೇಲೆ ಮಾಡಿ ದೊಡ್ಡ ನಮಸ್ಕಾರಹೊಡ್‌ಕಂಡ್. ಅವರ ಹಿಂದೆಂದ ಹುಲಿ ವೇಷ ಹಾಕಿದೋವು ಎಲ್ಲಾ ಪುನರ್ವಸತಿ ಮನೆಗಳಿಗೆ ಹೊಕ್ಕು. ಅವುಕ್ಕೆ ಖುಷಿ ಬಂದ ಮನೆನ ತಕೊಂಡ್ ಒಕ್ಕಲು ಆತಿದ್ದೊ. ಮನೆನ ಒಳಗೆ ಹೋಗಿ ವೇಷ ಬಿಚ್ಚಿ ಮನುಷ್ಯನ ರೂಪಲಿ ಹೊರಗೆ ಬಂದು ಪೇಟೆನ ಜನರ ಮುಂದೆ ಪುನರ್ಜನ್ಮ ಪಡ್‌ದ್ದವರಂಗೆ ಕಾಣುತ್ತಿದ್ದೊ.

ಇದು ಅದ್ಭುತ ಯೋಜನೆ :

ಈ ಯೋಜನೆಂದಾಗಿಕಾಡುಂದ ಹೊರಗೆ ಬಂದು ಪೇಟೆ ಸೇರಿಕೆ ಆತು. ಆ ದಿನ ಊರಿನ ಸುತ್ತ ಮೆರವಣಿಗೇಲಿ ಮುಖವಾಡ ಹೊತ್ತ ಜನರ ಜೀಪುಗ ಬಂದು ಊರುನೊವುಕ್ಕೆ ಎಲ್ಲಾ ವೇಷ ಹಾಕ್‌ಸ್ಸಿ ವನ್ಯ ಮೃಗ ವೇಷ ಹಾಕಿದವು. ಗಲಾಟೆ ಮಾಡಿಕೆ ಸುರು ಮಾಡ್‌ದ್ದೊ. ಅಂವ್ಹ ಆ ಗುಂಪುನೊಳಗೆ ಹೊಕ್ಕು ಒಂದು ವೇಷ ಹಾಕಿತು. ಅಂವ್ಹಂಗೆ ಸಿಕ್ಕಿದ ವೇಷ ಮೊಲದ್ದು ಆಗಿತ್ತು. ಆ ವೇಷನ, ಅವ್ಹ ಬೇಕುತೇಳಿ ಹಾಕಿದ್ದ್ ಅಲ್ಲ. ಅರ್‌ಜೆಂಟುಲಿ ಅವ್ಹಂಗೆ ಸಿಕ್ಕಿದ್ದು ಅದೆ. ಚೂರು ಹೊತ್ತುಲಿ ಹುಲಿಗಳ ಗುಂಪು ಪೆದ್ದಗಳಾಂಗೆ ಅತ್ತಿತ್ತಾ ಓಡುತ್ತಿತ್ತು. ಮಂತ್ರಿಗ ಬಾದು ತಡ ಆತ್. ವನ್ಯ ಮೃಗ ವೇಷ ಹಾಕಿದೋವುಕೇ ಕಾದು ಕಾದು ಬೊಚ್ಚಿ ಹೋತು. ವೇಷ ಹಾಕಿದೊವುಕೇ ಬೊಚ್ಚದಂಗೆ ಹೆಂಡದ ಸಪ್ಲಾಯ್ ಕೂಡ ಇತ್ತ್. ಲಾಸ್ಟ್‌ಗೆ ಮುಖ್ಯ ್ರಂತ್ರಿಗ ಬಂದೊ. ವನ್ಯ ಮೃಗಗಳ ಪೇಟೆಗೆ ಕರ್ಕೊಂಡು ಹೊರಟೊ. ಅವರ ಎತ್ತಿನ ಗಾಡಿನ ಹಿಂದೆ ಹುಲಿಗ ನಡ್ಕೊಂಡು ಹೋದೊ. ಬ್ಯಾಂಡ್, ವಾದ್ಯಕ್ಕೆ ಸರಿಯಾಗಿ ಕುಣಿಯೋಕೆ ಮೃಗಗಳ ವೇಷ ಹಾಕಿದೊವು ಇದ್ದೊ.

ರೋಡ್‌ನ ಎರಡು ಕಡೆಲಿ ಜನಂಗ, ಇವರ ಸುತ್ತುಂದ ಕ್ಯಾಮಾರ ಹಿಡ್‌ಕೊಂಡು ಪೋಟೊ ತೆಗೆವ ಪತ್ರಕರ್ತರು. ಮೊಲದ ವೇಷತೇಳಿ ಯಾರಿಗೂ ಗೊತ್ತಾಗದೆ ಎಲ್ಲವೂ ಹೆಗ್ಗಣ ತೇಳಿ ನೆಗಾಡಿಕೆ ಸುರು ಮಾಡ್‌ದ್ದೊ. ಕೊನೆಗೆ ಪುನರ್ವಸತಿ ಮನೆಯಿರುವಲ್ಲಿಗೆ ಮೆರವಣಿಗೆ ಬಾತ್. ಹೆಗ್ಗಣನ ರೂಪಲಿ ಇದ್ದ ಹುಲಿ ವೇಷದವ ಸುರುನ ಮನೆಗೆ ಸುಯ್ಯೊತೇಳಿ ಹೂಕ್ಕೊತ್. ಆನಂದದ ಎಲ್ಲವು ಹೆಗ್ಗಣ ಹೆಗ್ಗಣ ಹೊರಗೆ ಬಂದದೆ ನೋಡಿತೇಳಿ ಕಾದು ನಿಂತೊ. ಹುಲಿ ವೇಷ ಹಾಕಿದೊವು ಅವ್ಹಕ್ಕೆ ಲಾಯ್‌ಕ್ಕು ಇರುವ ಮನೆಗ ಹುಡುಕಿಕೊಂಡು ಮುಂದೆ ಹೋದೊ. ಪತ್ರಕರ್ತರು ಅವರ ಮನೆ ಒಕ್ಕಲನ ಇಡೀ ರಾಜ್ಯಕ್ಕೆ ವರ್ಣಿಸಿಕೆ ಸುರ್ ಮಾಡ್‌ದ್ದೊ.

ಕಾರ್ಯಕ್ರಮದ ಪ್ರಕಾರ ಪುನರ್ಜನ್ಮ ಪಡೆದೋವು ವೇಷ ಬಿಚ್ಚಿ ನಿಜ ರೂಪಲಿ ಅಲ್ಲಿಗೆ ಬಂದ ಜನಗಳಿಗೆ ದರ್ಶನ ಕೊಡೊಕ್. ಅದು ಅಲ್ಲದೆ ಬೇರೆಯವರ ಅಂಗಳಲಿ ನಡೆವ ಸಮಾರಂಭಕ್ಕೆ ಹೋಗಿ ಮುಖ್ಯಮಂತ್ರಿನ ಭಾಷಣ ಕೇಳೊಕು. ವೇಷ ಬಿಚ್ಚಿ

ಹೊರಗೆ ಬಾಕೆ ಮನಸ್ಸು ಇಲ್ಲದೆ ಇದ್ದರು, ಜನ್ನಂಗ ಕುತೂಹಲಲಿ ಅವರ ಬೇಗ ಹೊರಗೆ ಬನ್ನಿತೇಳಿ ಕರೆಯೋಕೆ ಸುರು ಮಾಡುದ್ದೊ. ಮುಖ್ಯಮಂತ್ರಿಗೆ ಸಿಟ್ಟು ಬಂದದೇ ತೇಳಿ ಅರ್ಜೆಂಟು ಮಾಡುದ್ದೊ ಅಂವ್ವ ವೇಷ ಬಿಚ್ಚಿ ಹೊರೆಗೆ ಹೆಜ್ಜೆ ಇಸೊಕರೆ ನೋಡಿ ಹೆಗ್ಗಣತೇಳಿ ಬೊಬ್ಬೆ ಹಾಕಿದೊ ಟಿ.ವಿ ಯವು ಕ್ಯಾಮರದವು ಅವರನ್ನೆ ಕಾಯೊತಿದ್ದೊ. ಅವನ ಇತಿಹಾಸನ ತನಿಖೆಗೆ ಸರಕಾರ ಒಬ್ಬ ಅಧಿಕಾರಿನ ನೇಮಿಸಿತ್ತು. ಗಿರಿಜನರ ಪುನರ್ವಸತಿ ಮನೆಗ ನಿಧಾನ ಆಗಿ ನಾಗರಿಕ ಸಂಸ್ಕಾರನ ಪಡೆಯಕೆ ಸುರು ಆತ್. ಗಿರಿಜನರ ಕಾಡುಂದ ಸ್ಥಳಾಂತರ ಮಾಡಿದ ಮೇಲೆ ಪೇಟೇಲಿ ಬಂದು ವಾಸ ಮಾಡಿಕೆ ಸುರು ಆದ ಮೇಲೆ ಅವರಲ್ಲಿ ಬದಲಾವಣೆ ತಾಕೆ ಚುರು ಕಷ್ಟ ಆತ್. ಎಲ್ಲವೂ ಒಟ್ಟಿಗೆ ಜೀವನ ಮಾಡುದ್ದು ಅಷ್ಟು ಸುಲಭ ಏನೂ ಅಲ್ಲ. ಮತ್ತೆ ಕೆಲವು ಕಾಡಿಗೆ ತಿರ್‌ಗ್ಗಿ ಪೊಯಿತೇಳಿ ಯೋಚಿಸಿಕೆ ಸುರು ಮಾಡ್‌ದ್ದೊ ಕೆಲವು ಜನ. ಅವು ಹಿಂದೆ ಇದ್ದ ಮಾಣಿಮರ್ದು ಅದರ ಸುತ್ತ ಇದ್ದ ಕಾಡು ಎಲ್ಲಾ ಸರಕಾರದ ಯೋಜನೆಂದ ಮಾಯ ಆತ್. ಅಲ್ಲಿ ದೊಡ್ಡ ಕೈಗಾರಿಕೆ ತಲೆಯೆತ್ತ್‌ತಿತ್. ಹಾಂಗೆ ಅವೆಲ್ಲವೂ ಹೊಸ ಬದುಕಿಗೆ ಅಟ್ಟಿಕೊಣಕಾಯಿತ್.

ಅವರ ನಡುಲಿ ಅಂವ್ವ ಒಬ್ಬನೇ ಹಠ್ಠಂದ ಹೊಸ ಬದುಕನ್ನು ಸ್ವೀಕರಿಸಿ ನಿಧಾನಲಿ ಯಶಸ್ವಿ ಆತ್. ಉಳ್‌ದ್ದ ಗಿರಿಜನಂಗ ಬೆದುರ್‌ಂದ ಬೇರೆ ಬೇರೆ ವಸ್ತುಗಳ ಮಾಡಿಕೊಂಡು ಹಿಂದೆಂದ ಜೀವನೋಪಾಯ ನಡೆಸಿಕೊಂಡು ಮುಂದುವರೆಯೊತ್ತಿದ್ದೊ. ಅವ್ವಂಗೆ ಮಾತ್ರ ಅಂದೆಂಥೊದೇನೊ ಅವ್ವಂಗೆ ತಿಳಿಯೋತಿತ್ತುಲೇ ಹಾಂಗಾಗಿ ಸುರ್‌ಗೆ ಕೂಲಿ ಮಾಡುತಿತ್. ಮುಂದುವರಿಕಾ ಕಲಿಕ ಶಿಕ್ಷಣ ಕ್ಲಾಸ್‌ಗೆ ಹೋಗಿ ವಿದ್ಯೆ ಕಲಿಯಕೆ ಪ್ರಯತ್ನ ಪಟ್ಟು ಮದುವೆನು ಅತ್, ಅವನ ಜೀವನ ನಿಧಾನಲಿ ಸಮಸ್ಯೆಯನ ಹೊತ್ತು ತಂದಿತು ಆ ಮನೆ ಉಳುದ್ದ ಗಿರಿಜನಕ್ಕೆ ಅವನ ಬಗ್ಗೆ ಸಂಶಯ ನಿಧಾನಲೀ ದೊಡ್ಡದ್ದು ಆತ್ ಪಸ್ಟ್‌ಗೆ ಅವನ ಸ್ಥಿತಿಗತೀ ನೋಡಿರೆ ಬೇಜಾರ ಅತಿತ್. ಅವುಕ್ಕೆಲ್ಲಾ ನೀರುಂದ ಮೇಲೆ ನೇಚಿದ ಮೀನ್‌ನ ಹಾಂಗೆ ಆತ್ ಅವನ ಪರಿಸ್ಥಿತಿ ಮತ್ತಷ್ಟು ಗಂಬೀರ ಆತ್. ಆಗ ಅವನ ಬಗ್ಗೆ ಯೋಚನೆ ಯಾರು ಮಾಡ್‌ತಿತ್ತ್‌ಲೆ. ಬೇರೆಯವು ಅವನ ವಿರೋಧಿಗತೇಳಿ ತಿಳ್‌ಕೊಂಡಿದ್ದ. ನಿಧಾನಲಿ ಅವ ಲೋಕನ ಅರ್ಥ ಮಾಡಿಕೇ ಸುರು ಮಾಡುತ್ತು. ನಮ್ಮ ಲೋಕಲಿ ಅವ್ವಂಗೆ ಒಬ್ಬ ವಿರೋಧಿವುಟ್ಟು ತೇಳಿ ಗೋತ್ತಾಗಿ ಕನಿಕರ ಬೆಳುತ್. ನಾವುಗೇ ಮಾತ್ರ ಸಿಕ್ಕುವ ಸೌಲಭ್ಯ ಅವ್ವಂಗೆ ಮಾತ್ರ ಅನ್ಯಾಯಲಿ ಪಾಲು ಪಡುತ್ತಿತ್ತು ತೇಳಿ, ಕೆಲವು ಸರಕಾರಕ್ಕೆ ಅವನ ಬಗ್ಗೆ ಮಾಹಿತಿ ಕೊಟ್ಟೊ ಅವ ನಮ್ಮ ಜಾತಿಯವ ಅಲ್ಲ ತೇಳಿ ಹೇಳುದ್ದೊ. ಅವನ ಸುತ್ತ ಅನುಮಾನದ ಹುತ್ತ ಬೆಳಿಯಕೆ ಸುರು ಆತು. ಪತ್ರ, ಪೈಲು ಅವನ ಸುತ್ತ ಸುತ್ತಿಕೆ ಸರು ಆದರೂ ಅದರ ಬಗ್ಗೆ ಅವ್ವಂಗೆ ಅರಿವೇ ಇಲ್ಲೆ.

ಒಂದು ದಿನ ಅವ್ವ ಮತ್ತೆ ಅವನ ಹೆಣ್ಣ್ ಮಲ್‌ಗಿದಾಂಗೆ ಮನೆ ಮೂಲೆಂದ

ಸಣ್ಣ ಸ್ವರಲಿ ಕರೆವ ಸದ್ದು ಕೇಳಿಸಿತ್ತ್. ಮಾದನ ಮೇಲೆ ಎಲಿ ಓಡುವ್ಹಂಗೆ ಓಡಾಡುವೆತೇಳಿ ಅನ್ಸಿತು ಗಂಡ-ಹೆಣ್ಣುನು ನಿದ್ದೆ ಮಾಡದೇ ಓಡಾಡುವ ಶಬ್ದನ ಕೇಳಿ ಹೆದರಿಕೊಂಡು ಏನೊ ಉಪದ್ರ ಉಟ್ಟು ತೇಳಿಕೆ ಸುರು ಮಾಡ್‌ದ್ದೊ ದಳದ ಮೂಲೆಂದ ಮಣ್ಣುನ ತೇಗಿಯಾಕೆ ಸುರು ಆದ ಶಬ್ದ ಬೊಳುಪ್ಪು ಅದರೂ ನಿಂತೊತ್‌ಲೆ ಸದ್ದು.

ಹೆಣ್ಣ್‌ನ ಒಂದರನ್ನೆ ಬುಟ್ಟು ಕೆಲ್ಸಕೆ ಹೋಕೆ ಮನಸ್ಸು ಇಲ್ಲೆ. ಅಂದರೂ ಅಂವ್ಹ ಹೋಗಿಯೆ ಹೊಕಾಯಿತ್ತ್. ಏಕೆತೇಳಿರೆ ಅಂವ್ಹ ಒಬ್ಬನೆ ಕೂಲಿ ಮಾಡುವಂವ ಅಲ್ಲ. ಅಂವ್ಹ ನಮ್ಮ ಊರಿನ ಸಿ.ಎ ಬ್ಯಾಂಕ್‌ನ ಗನ್‌ಮೆನ್ ಆಗೀ ಕೇಲ್ಸ ಮಾಡುತಿತ್ತು. ಸುಮ್ಮನೆ ಸುಮ್ಮನೆ ರಜೆ ಹಾಕುವ್ಹಂಗೆನೂ ಇಲ್ಲೆ ಅಂವ್ಹ ಹೆಣ್ಣುನೊಟ್ಟಿಗೆ ಜಾಗ್ರತೆಲಿ ಇರಿಕೆ ಹೇಳಿ ಹೊರಟು ಹೋತ್.

ಹೆಣ್ಣ್ ಹೆದುರಿಕೊಂಡು ಅಡಿಗೆ ಮಾಡಿ ಮೂಲೆಂದ ಬಾವ ಶಬ್ದನ ಕೇಳಿಕೆ ಸುರ್‌ಮಾಡ್‌ತ್ತ್. ಬಾಗುಲ್ ಹಕ್ಕಲೆ ಬಂದು ನಿಂತು ಗಂಡಗಾಗಿ ಕಾಯಕೆ ಸುರ್ ಆತ್ ಅಂವ್ಹ ಬಂದರೂ ಶಬ್ದ ನಿಂತೊತ್ತ್‌ಲೆ. ಲಾಸ್ಟ್‌ಗೆ ಹಿಂಬೊತ್ತ್ 6 ಗಂಟೆಗೆ ಮನೆ ಮೂಲೇಲಿ ಒಂದು ಮಾಟೆ ಕಂಡೊತು. ಚೂರು ಹೊತ್ತುಲಿ ಒಂದು ಒಂದು ದೊಡ್ಡ ಹೆಗ್ಗಣ ಅದರ ಒಳಗೆ ಹಾರಿ ಮಾಟೆ ಒಳಗೆ ಆಣ್‌ಗ್ಗಿತ್ತ್.

ಮಾರನೆ ದಿನ ಸರಕಾರದ ಪ್ರತಿನಿಧಿ ಅವರ ಮನೆಗೆ ಬಂದು ತನಿಖೆ ಆರಂಭಿಸಿದ. ನಾನು ಕೂಡ ಮಾಣಿಮಾರ್ದು ಕಾಡುಂದ ಬಂದವನೇ ಆದ್ದರಿಂದ ನನ್ನ ಗಿರಿಜನತೇಳಿ ಪರಿಗಣಿಸೋಕು ಅವನ ವಾದನ ಅಧಿಕಾರಿ ಒಪ್ಪಿತ್ತುಲೆ. ಅಧಿಕಾರಿ ನಾಲ್ಕು ಪ್ರಶ್ನೆಗಳ ಕೇಳಿ, ಅವ್ಹಂಗೆ ಆ ಪ್ರಶ್ನೆಗೆ ಉತ್ತರಿಸಿಕೆ ಆತ್‌ಲೆ. ಹೆಚ್ಚಿನ ಮಾಹಿತಿಗೆ ಕಾಡ್‌ಲಿ ಅವನ ಕುಟುಂಬವುಟ್ಟು. ಆ ಜಾಗೇಗೆ ಹೋಕೆ ಅಧಿಕಾರಿ ನಿರ್ಧರಿಸಿದೊ. ತನಿಖೆನ ಏನಾದೇನೊ ತೇಳಿ ಅವ್ಹಂಗೆ ಹೆದರಿಕೆನೂ ಅತ್. ಕುಟುಂಬ ಇತಿಹಾಸ ಅವ್ಹಂಗೆ ಗೊತ್ತಾದು ತೇಳಿ ಅನ್ನಿಸಿತು. ನಮ್ಮ ಮನೆಲಿ ಸುರುಗೆ ಹೆಗ್ಗಣ ಕಂಡಾಕನ ನಂಗೆ ಒಂದು ರೀತಿ ನೆಮ್ಮದಿ ಆತು. ಹೆಗ್ಗಣ ಪ್ರವೇಶ ನಮ್ಮ ಸಂಸಾರದ ಅಧಿಕೃತ ಕುಟುಂಬ ತೇಳುದ್ದು ಮಾನ್ಯ ಮಾಡಿದ್ಹಾಂಗೆನೆ ಅವ್ಹಂಗೆ ಅನ್ನಿಸಿತು. ಆ ಹೆಗ್ಗಣ ನೆಲ ಒಟ್ಟೆ ಮಾಡಿದ್ದು ಅವ್ಹಂಗೆ ಒಂದು ವಿಶೇಷ ಸಂಗತಿನ ಹಾಗೆ ಕಂಡತು. ಹಾಂಗಾಗಿ ಹೆಗ್ಗಣದ ಮೇಲೆ ಅವ್ಹಂಗೆ ಭಕ್ತಿ ಸುರು ಆತು. ಕೆಲವು ಕಾಲದ ಮತ್ತೆ ಮನೇಲಿ ಹೆಗ್ಗಣ ಸಂತತಿ ಹೆಚ್ಚಾತು. ಅದರ ಶಬ್ದ ಹಗಲು ಹೊತ್ತಿಗೆ ಸುರ್ ಆತ್. ಅದರ ಓಡಾಟ ಹಗಲು ಹೊತ್ತು ಕಾಂಬಕೆ ಸುರು ಆತ್. ಆಗ ಅವ್ಹಂಗೆ ಎಂತ ಮಾಡುದ್ದು ತೇಲಿ ದಾರಿ ತೋಚದ್ಹಂಗೆ ಆತು. ಹೆಗ್ಗಣಗಳ ಸಂತತಿ ನಿಯಂತ್ರಣಕ್ಕೆ ಬಾರದೆ ಅಂವ್ಹ ಪಸ್ಟ್ ಹೆಗ್ಗಣನ ಕೊಲ್ಲದೆ ಅದರ ಕಾಪಾಡುತ್ತು. ಅವು ಇಸಿದ ಹೆಗ್ಗಣ ಒಂದು ದಿನ ಸಿಕ್ಕಿ ಹಾಕಿತು. ಅದರ ನೋಡಿ ಹೆಗ್ಗಣನ ನೋಡಿ ಅದರ ಬುಟ್ಟೊತ್.

ಅಧಿಕಾರಿ ಬಹಳ ಕಷ್ಟಪಟ್ಟು ಅವನ ಕುಟುಂಬ ಇತಿಹಾಸನ ತಯಾರಿಸಿತ್. ಕಾಡುಲಿ ಇದ್ದ ಅಂವ್ಡ ಕುಟುಂಬದ ವಿಚಾರಣೆ ನಡೆಸಿ ಅವರ ಮೂಲನ ಹುಡುಕಿ ಒಂದು ವರದಿ ತಯಾರು ಮಾಡಿ ಸರಕಾರಕ್ಕೆ ಸಲ್ಲಿಸಿತ್. ಕೆಲವು ಸೇರ್‌ತ್ತಿ ಅವ್ಡಂಗೆ ಅಧಿಕಾರಿ ಸಿಕ್ಕಿತ್ತು. ಅವನ ಕುಟುಂಬದ ಇತಿಹಾಸ ತಿಳಿಯುವ ಕುತೂಹಲದಿಂದ ಅಧಿಕಾರಿ ಸಂಶೋಧನೆ ಪ್ರಕಾರ ಅವನ ಕುಟುಂಬ 19ನೇ ಶತಮಾನ ಕೊನೆಗೆ ಬಹಿಷ್ಕೃತರಾಗಿ ಕಾಡಿಗೆ ಓಡಿ ಹೋದ. ಕುಟುಂಬದ ಬಹಿಷ್ಕಾರ ಕಾರಣ ವಿಚಿತ್ರ ಆಗಿತ್ತು. ಸಮಾಜನ ಒಳಗಿಂದಲೇ ಕೊರೆದ್ದು, ದುರ್ಬಲಗೊಳಿಸ್‌ವ ಸಂಚು ಹೂಡಿತ್ತು. ಹೆಗ್ಗಣನ ಪೂಜಿಸುವ ವಿಚಾರ ಊರುಲ್ಲೆಲ್ಲಾ ಹರುಡೀ ಅವರದ್ದು, ಗುಪ್ತ ಪಂಥ ಆಗಿತ್ತು. ಕಡೆಗೆ ಅವರ ಹೆಗ್ಗಣ ಭಕ್ತಿ ಊರುಲಿ ಅವನ ಕುಟುಂಬಕ್ಕೆ ಬಹಿಷ್ಕಾರ ಹಾಕಿ ಊರುಂದ ಓಡ್‌ಸ್ಸಿದ್ದೊ. ಅವು ಯಾರೇ ಎಲ್ಲಿ ಹೋಗೊಳೊತೇಳುದ್ದು ಯಾರಿಗೂ ಗೊತ್ತುಲ್ಲೆ. ಅಧಿಕಾರಿನ ಶ್ರಮ ಇಲ್ಲದಿದ್ದರೆ ಕುಟುಂಬದ ಇತಿಹಾಸ ಎಲ್ಲಿ ಕರುಗ್ಗಿ ಹೋತಿತ್.

ಅಧಿಕಾರಿನ ವರದಿ ಸರಕಾರಕ್ಕೆ ಹೋದ ಮೇಲೆ ಅಂವ್ಡ ಹೆದರಿಕೊಂಡು, ಸರಕಾರದ ತಿರ್ಮಾನನ ಕಾದು ಕುದ್ದೊತು. ಕೊನೆಗೆ ಸರಕಾರದ ತೀರ್ಪು ಬಾತ್.

ಸರಕಾರದ ಆಜ್ಞೆಗೆ ಬದ್ದರಾಗಿ ಅಂವ್ಡ ಮತ್ತು ಅಂವ್ಡನ ಹೆಣ್ಣ್ ಮನೆ ಬುಟ್ಟು ಹೊರಟ್ಟೊ ವಿರೋಧಿಗಳಾದ ಅವರ ಹೊರೆಗೆ ಹಾಕುವಲ್ಲಿ ಯಶಸ್ವಿಯಾದೊ. ಪುನರ್ವಸತಿ ಮನೆವು ಸಂತೋಷಂದ್ದ ಅವು ಹೋದರ್‌ನ್ನೆ ನೋಡ್‌ದ್ದೊ.

ಅವನ ತಗಡಿನ ಪೆಟ್ಟಿಗೆನ ಒಳಗೆ, ಸುರುನ ಹೆಗ್ಗಣ ಒಳಗೆ ಇತ್. ಆದ್ದರಿಂದ ಅವನ ಒಟ್ಟಿಗೆ ಹೋತು ಉಳ್‌ದ್ದ ಹೆಗ್ಗಣಗ ಆ ಮನೆ ಬುಟ್ಟು ಬೇರೆ ಮನೆಗಳ ಹುಡುಕಿಕೊಂಡು ಹೋದ. ಅವನ ಸಂಸಾರ ಎಲ್ಲಿಗೊ ಹೋತೂ ಯಾರಿಗೂ ಗೊತ್ತಿಲ್ಲೆ!. ಅಂವ್ಡ ಕಾಡುಗೆ ಹೋಗದೆ ಬೇರೆ ಯಾವುದೊ ಜಾಗಗೆ ಹೋದರ ಹುಡುಕುದ್ದು, ಸರಕಾರಕ್ಕೆ ಕಷ್ಟ ಆತ್.

* * * * *

ಏರ್ಪ ಶ್ರೀಕಾಂತ್

ಗೇಟ್‌ನ ಹೊರಗೆ ಕಾರು ಬಂದ ಶಬ್ಧ ಕೇಳಿದ ಕೂಡಲೆ ಮನೆಯೊಳಗೆ ಬೆಡ್‌ರೂಮ್‌ಲಿ ಇದ್ದ ಸಂದ್ಯಾಳ ಕೆಲ್ಸ ಚುರುಕಾತು. ಕೂಡಲೆ ಟಿ.ವಿ ಆಪ್‌ಮಾಡಿ ಕುದ್ದಲ್ಲಿಂದ ಎದ್ದು, ಸೋಫಾಲಿ ಇದ್ದ ಧೂಳುನ ಕೈಯಿಂದ ಟಪ್_. ಟಪ್_ ಅಂತ ಹೊಡದ್ದು, ಟೀಪಾಯಿನ ಮೇಲೆ ಪೇಪರ್‌ನ ಸರಿ ಮಾಡಿ ಪುಸ್ತಕಲಿ ಹಾರುತ್ತಿದ್ದ ಸ್ಪೈಡರ್ ಮ್ಯಾನ್‌ನನ್ನೆ ದುರುಗಟ್ಟಿ ನೋಡುತ್ತಿದ್ದ, ಹತ್ತು ವರುಷ ಮಂಜ ವಿಜಯ್.

ಏಯ್............... ಏದ್ರ್ ಅಪ್ಪ ಬಂದೋ,

ನೋಡು ಎದ್ರ್ ಈಗಾದ್ರ್ ಚುರು ಓದ್‌ತೇಳಿ.

ಜೋರು ಮಾಡು ಚಾಯ ಮಾಡಿಕೆ ಅಡಿಗೆ ಕೋಣೆಗೆ ಅರ್‌ಜೆಂಟ್‌ಂದ ಓಡಿ.

ಡ್ರೈವರ್ ಗೇಟ್ ತೆಗೆದು ಕಾರುನ ಸೆಡ್ಡು ಒಳಗೆ ಇಸಿ,

ಮನೆಗೆ ಕಾರು ಸದ್ದಾಗಲೀ, ಅಮ್ಮ ಅಡುಗೆ ಕೋಣೆಯಿಂದ ಅಪ್ಪ ಈಗ ಬೈದವೆ. ಈಗಾದರೂ ಚುರು ಓದು ಮಾರಾಯಾ.......

ಬೊಳ್ಪು
ಯಾಗೊಳು ಓದುವವ ಇಂದು ಕೂಡ ಟೈಂಪಾಸ್ ಮಾಡುವ ಮಂಜ. ಇದರ ನೋಡುದ್ದ ಶ್ರೀಕಾಂತ್ ಕೆಂಡ ಕಾರ್‍ತ್. ನಿಂಗೆ ಪರೀಕ್ಷೆಗೆ ಓದಿಕ್ಕೆ ಅದುಲೆನಾ? ಯಾಗ ನೋಡಿರು, ಆ ದರಿದ್ರ ಪುಸ್ತಕ. ನಿನ್ನ ಜೀವನಾನೆ ಒಂದು ಪುಸ್ತಕ ಆಕೆ ಉಟ್ಟು. ಏಕೆ ಟೈಮ್ ವೇಸ್ಟ್ ಮಾಡಿಯಾ? ಇನ್ನು ಎಷ್ಟು ದಿನ ಉಟ್ಟು ಪರೀಕ್ಷೆಗೆ?

ಹತ್ತು ವರುಷದ ಮಂಜ ವಿಜಯ್ ಸಡನ್ನಾಗಿ ತಲೆ ಎತ್ತಿ ಅಪ್ಪನೆಡೆಗೆ ತೀಕ್ಷ್ಣವಾದ ದೃಷ್ಟೀಲಿ ನೋಡ್‍ತ್. ನಾನು ಓದದಿದ್ದರೆ ಏನಾತ್ ....

ಈಗ.......?

ಬಾತು ಖಾರದ ಉತ್ತರ.



ಅಡುಗೆ ಕೋಣೇಲಿ ಚಾಯಕ್ಕೆ ಹಾಲ್‍ನ ಮಡಿಕೆನ್ನ ಎತ್ತಿ ಪಾಟೆಗೆ ಹೊಯ್ಯತ್ತಿದ್ದ ಸಂಧ್ಯಾ ಎಲ್ಲಾ ಬುಟ್ಟು ತನ್ನ ಎರಡು ಕೈನ ತಲೆಗೆ ಹೊತ್ತು ನಿಂತೊತ್. ಎರಡು ಸೇರ್‍ತ್ತಿ ಜೋರಾಗಿ ತಲೆ ಕೊಡ್‍ಕ್ಕಿ ಒಮ್ಮೆ ನಿಟ್ಟುಸಿರು ಬುಟ್ಟು ಮುಂದೆ ನಡೆವ ಜಗಳನ ನೆಂಪುಸಿಕನ, ಎರಡು ಕೈಲಿ ತನ್ನ ಸಲ್ವಾರನ ಗಟ್ಟಿಯಾಗಿ ಮುಚ್ಚಿ ಹಿಡ್ ದ್ದುಕೊಂಡು, ಏನೂ ತೋಚದಂಗೆ ಅರೆಕ್ಷಣ ಸುಮ್ಮನೇ ನಿಂತ್‍ತ್. ಕೇಳುದ್ದನಾ ಅವನ ಸ್ವರ? ಪೆದುಂಬು ಹೇಳ್‍ದ್ದೆ, ಏನು ಮಾಡುತ್ತಾ ಇತ್ತು ಇಷ್ಟು ಹೊತ್ತು? ನೀ ಯಾಕೆ ಅವ್ವಂಗೆ ಓದಿಸಿತ್ತ್‌ಲೆ? ಕೋಪದಿಂದ ಅಡುಗೆ ಮನೆಗೆ ನುಗ್ಗಿದ ಶ್ರೀಕಾಂತ್‍ನ ಮೋರೆ ಕೋಪದಿಂದ ಕೆಂಪಾಗಿ ಮೂಗಿನ ಹೊಳ್ಳೆಗಳ ಅರಳಿ ಮೆತ್ತಗೆ ಆಗಿ ಅದ್‍ಕ್ಕೆ ಸುರು ಆಗಿ ಮುಷ್ಟಿಲಿ ಇದ್ದ ಟೈನ ಅಲ್ಲೇ ನೆಲಕ್ಕೆ ಬಿಸಾಡಿ ಸಂಧ್ಯಾ ಕಡೆ ಒಮ್ಮೆ ವಕ್ರ ದೃಷ್ಟಿಂದ ನೋಡಿ ತಲೆಕೂದಲನ್ನ ಒಮ್ಮೆ ಹಿಂದೆ ಹಾಕಿ

ಪುನಃ ಮಂಜ ಇರುವ ಕಡೆ ಬಾತ್.

ಪೆದುಂಬು ಜಾಸ್ತಿ ಆತ್‌ನಿಂದು. ಯಾಕೆ ಓದಿದಿತ್‌ಲ್ಲೆ? ನೀ ಯಾಕೆ ಕಂಪ್ಯೂಟರ್ ಕೋಡ್‌ದ್ದ್‌ಲ್ಲೆ?

ಕಂಪ್ಯೂಟರ್,......

ಕಂಪ್ಯೂಟರ್...............

ಇಡೀ ದಿನ............ ಕಂಪ್ಯೂಟರ್.!

ಈಗ ನೀನು ಏನು.......... ಸಾಫ್ಟ್ ವೇರ್ ಇಂಜಿನಿಯರ್‌ರಾ?

ಸುರುಗೆ ನೆಟ್ಟಂಗೆ ಹೈಸ್ಕೂಲು ಮುಗ್ಸು.

ಈಗ ಓದು, ಕಂಪ್ಯೂಟರ್ ತಂದರೆ ಇಡೀ ದಿನ ಕಂಪ್ಯೂಟರ್‌ಲೀ ಆಟ ಆಡಿಕೊಂಡು ಇದ್ದಿಯಾ?

ಸ್ಪೈಡರ್ ಮ್ಯಾನ್ ಈಗ ನಿನ್ನೊಟ್ಟಿಗೆ ಉಟ್ಟು, ಅದ್ರ ಮೇಲೆ ಈಗ ಕಂಪ್ಯೂಟರ್. ಓದುದು ಯಾಗ?

ಕೈಯಲಿ ಚಯಾದ ಗ್ಲಾಸ್ ಹಿಡುಕೊಂಡ್ ಸಂಧ್ಯಾ ಬೆಡ್‌ರೂಮ್‌ಗೆ ಬಾತ್. ಎರಡು ಹೋರಿಗಳಂಗೆ ಅಪ್ಪ– ಮಂಜ ಎದುರು ಬದುರು ಆಗಿ ನಿಂತಿರುವಲ್ಲಿಗೆ ಬಂದು ಶ್ರೀಕಾಂತ್ಗೆ ಚಾಯ ತಕೋಣಿತೇಳ್‌ತ್ತ ಮಂಜ ಹೆಂಗೇ ಬೇಕಾರೆ ಓದಿಕೊ, ತೇಳಿ ಹೆದರ್ಸಿತ್ತ್. ಇದು ಹೊಸ ಗೋಳು! ಅಪ್ಪ ಕಂಪ್ಯೂಟರ್ ಕೊಡ್‌ದ್ದುಲೆ ಮಂಜ ಬುಡ್‌ದುಲ್ಲೆ. ಸಂಧ್ಯಾಳ ಮನಸ್ಸಿಗೆ ನೋವು ಆತ್. ಇದೆಲ್ಲ ಪೆಟ್ಟು ಕೊಡದೆ ಬೆಳೆಸ್ಸಿದ ಫಲ. ಈಗ ನಾವು ಅನುಭವಿಸೋದು. ಹಾಂಗೆ ಹೇಳ್‌ತ್ತ್ ಶ್ರೀಕಾಂತ್.

ಬಾಗುಲ್ ಎಳುದ್ ಗಂಡ ಹೊರೆಗೆ ಹೊರಟ ಕೂಡಲೇ ಸಂಧ್ಯಾ ಚಯಾದ ಗ್ಲಾಸ್‌ನ ಅಲ್ಲೆ ಮಂಚದ ಮೇಲೆ ಇಸಿ ವಿಜಯನ ಬಳಿಗೆ ಹೋಗಿ, ಅವನ ಹೆಗುಲ್‌ನ ಮೇಲೆ ಮೆಲ್ಲಂಗೆ ಕೈ ಇಸಿತ್ತು. ಸುಮ್ಮನೆ ನಿಂತ ವಿಜಯ್‌ನ ಕಣ್ಣುಲಿ ಕಿಚ್ಚಿ ಕಾರ್‌ತ್ತಿತ್ತ್.

ನಾ ಹೇಳುತ್ತ್‌ಲ್ಲೆನಾ ವಿಜ್ಜು ಓದುತೇಳಿ. ಏನಾತು ನೋಡು. ಆಫೀಸುಂದ ಬಂದ ಕೂಡ್ಲೆ ಯಾಕೆ ಕೋಪ ಬರಿಸ್ತಿ ಅಪ್ಪಂಗೆ? ನೀ ಓದು ಕಂಪ್ಯೂಟರ್ ಕೊಟ್ಟವೇ. ಇಲ್ಲೆ ಅಪ್ಪ ಸುಳ್ಳು ಹೇಳ್‌ದ್. ಕೊಟ್ಟನೆ....ಕೊಟ್ಟನೆ ಅಂತ ಹೇಳಿ ಕಡೆಗೆ ಕೊಡಿಕ್ಕೆ ಇಲ್ಲೆ. ನಂಗೆ ಗೊತ್ತುಟು ಯಾಗೋಳು ಅಪ್ಪ ಹಾಂಗೆ. ಹಂಗೆಲ್ಲ ಅವು ಹೇಳೋದು ನಿಂಗೆ ಹೈಸ್ಕೂಲಿ ಯಾಕೆ ಕಂಪ್ಯೂಟರ್ ಅಂತ. ಈಗ ಓದಿ ಒಳ್ಳೆ ಮಾರ್ಕ್ಸ್ ತಕ್ಕಣೊಕ್ ಆಮೇಲೆ ದೊಡ್ಡ ಕ್ಲಾಸಿಗೆ ಹೋಕನ ಕಂಪ್ಯೂಟರ್ ಕೊಟ್ಟವೇ. ಈಗ ಕೊಟ್ರೆ ನಿನ್ನ ಓದು ಹಾಳಾದೆ. ಮತ್ತೆ ನಾ ಯಾಕೆ ಕಾಯೋಕು?. ನನ್ನ ಕ್ಲಾಸಲ್ಲಿ ನನ್ನ ಹಕ್ಕಲೆಮಾತ್ರ ಇಲ್ಲೆ ಗೊತ್ತುಟಾ ಕಂಪ್ಯೂಟರ್? ನಾ ಇಲ್ಲಿ ಯಾರಿಗೂ ಬೇಡ ನಾ ಹೋನೆ....... ಮಂಜನ ಮೋರೆ ಕೆಂಪಾತು. ಕಣ್ಣುಲಿ ನೀರು ಇಳಿದ್ ಕೆನ್ನೆ ಮೇಲೆ ಹರುತ್ತ್. ಸಮಧಾನ ಮಾಡ್ಕಾ ಹೇಳ್ದ್ದರ ಕೇಳು. ಮಂಜನ ಕಣ್ಣೀರುನ

ಇಲ್ಲೆ ಅಪ್ಪ ಸುಳ್ಳು ಹೇಳ್‌ದ್. ಕೊಟ್ಟನೆ....ಕೊಟ್ಟನೆ ಅಂತ ಹೇಳಿ ಕಡೆಗೆ ಕೊಡಿಕ್ಕೆ ಇಲ್ಲೆ. ನಂಗೆ ಗೊತ್ತುಟು ಯಾಗೋಳು ಅಪ್ಪ ಹಾಂಗೆ. ಹಂಗೆಲ್ಲ ಅವು ಹೇಳೋದು ನಿಂಗೆ ಹೈಸ್ಕೂಲಿ ಯಾಕೆ ಕಂಪ್ಯೂಟರ್ ಅಂತ. ಈಗ ಓದಿ ಒಳ್ಳೆ ಮಾರ್ಕ್ಸ್ ತಕ್ಕಣೊಕ್ ಆಮೇಲೆ ದೊಡ್ಡ ಕ್ಲಾಸಿಗೆ ಹೋಕನ ಕಂಪ್ಯೂಟರ್ ಕೊಟ್ಟವೇ. ಈಗ ಕೊಟ್ರೆ ನಿನ್ನ ಓದು ಹಾಳಾದೆ. ಮತ್ತೆ ನಾ ಯಾಕೆ ಕಾಯೋಕು?. ನನ್ನ ಕ್ಲಾಸಲ್ಲಿ ನನ್ನ ಹಕ್ಕಲೆಮಾತ್ರ ಇಲ್ಲೆ ಗೊತ್ತುಟಾ ಕಂಪ್ಯೂಟರ್? ನಾ ಇಲ್ಲಿ ಯಾರಿಗೂ ಬೇಡ ನಾ ಹೋನೆ....... ಮಂಜನ ಮೋರೆ ಕೆಂಪಾತು. ಕಣ್ಣುಲಿ ನೀರು ಇಳಿದ್ ಕೆನ್ನೆ ಮೇಲೆ ಹರುತ್ತ್. ಸಮಧಾನ ಮಾಡ್ಕಾ ಹೇಳ್ದ್‌ರ ಕೇಳು. ಮಂಜನ ಕಣ್ಣೀರುನ ಓರ್‌ಸ್ಸಿ ಇಲ್ಲೆ ಕೇಳುದ್ದುಲ್ಲೆ. ನೀ ಯಾಕೆ ಕೇಳುದ್ದುಲ್ಲೆ. ನಾ ಯಾಕೆ ಯಾಗೋಳು ಕೇಳೊಕು? ನಾಳೆ ನಂಗೆ ಕಂಪ್ಯೂಟರ್ ಬೇಕು. ತಬ್ಬಿಕೊಂಡು ಮಂಜನ ಸಮದಾನ ಮಾಡಿಕಾನ ಅಂವ್ವ ಅಮ್ಮನ ದೂಡಿ ಅವನ ರೂಮಿಗೆ ಹೊತ್. ಬೆಳೆವ ಮಂಜನ ಶಕ್ತಿಗೆ ಆಯತಪ್ಪಿ ಬೀಳಿಕೆ ಆತ್. ಅಂದರೂ ಅವನ ಹಿಂದೆಂದ ಹೋಗಿ ಹಿಂದೆ ಆಗಿದ್ದರೆ ನಿನ್ನ ಹಿಡ್ದು ಕೂದ್ರಸಕ್ಕಯಿತ್ತ್. ಈಗ ಎಂತ ಮಾಡುದ್ದು? ಅವನ ಹಿಡಿವ ಶಕ್ತಿ ನಂಗೆ ಇಲ್ಲೆ. ಹಿಂಗೆ ಹೇಳಿಕೊಂಡು ಮಂಜನ ಹಿಂದೆಂದ ಅವನ ಕೋಣೆಗೆ ಹೊತ್.

ಕತ್ತಲೆಗೆ ಮಂಚದ ಮೇಲೆ ಶ್ರೀಕಾಂತ ಬಿದ್ದುಕೊಂಡು ದಿನದ ಆಯಾಸನ ಉಚ್ಚಾಟನೆ ಮಾಡಿಕೆ ಹರಸಾಹಸ ಪಡುತ್ತಾ, ದ್ಯಾನಲಿ ಮನಸ್ಸಿಗೇ ಹೇಳಿಕೆ ಸುರು ಮಾಡುತ್ತು. ನನ್ನ ಕೆಲಸಲ್ಲಿ ನನ್ನ ಮನೆ ವಿಚಾರಲಿ ನಾ ಇಲ್ಲೆ. ಹೊಟ್ಟೆ ತುಂಬ ತಿಂಬಕೆ ತಂದು ಹಾಕುದು ನನ್ನ ಕೆಲ್ಸ. ನಾ ಮಾತ್ರ ಶಾಂತ ಸ್ವಭಾವದವ್ವ.

ಮನಸ್ಸಿಲಿ ಈ ವಿಚಾರಗ ಎಲ್ಲಾ. ತಲೆ ಮೇಲೆ ಜೋರಾಗಿ ತಿರುಗುವ ಫ್ಯಾನ್ ನನ್ನೇ ನೋಡಿಕೊಂಡು ನಿಧಾನಲೀ ಕಣ್ಣು ಮುಚ್ಚಿ ಜೋರಾಗಿ ಶ್ವಾಸನ ಎಳ್ದು ಬುಡುಕನ ಮನಸ್ಸು ಹಗುರಾತು.

ಅಡಿಗೆ ಕೆಲ್ಸ ಮುಗ್ಸಿ, ಹಾಲಿಗೆ ಹೆಪ್ಪು ಹಾಕಿ, ಕಿಟಕಿ ಹಾಕಿ, ಬಾಗುಲ್ ಹಾಕಿ ನಡುಕೋಣೆಗೆ ಬಂದ ಸಂಧ್ಯಾ ವಿಜಯನ ಕೋಣೆಗೆ ಓರೆ ಕಣ್ಣಿಂದ ನೋಡಿ ಬಾಗುಲ ಸಂದಿಲಿ ಬೊಳ್ಪು ಕಂಡೊತು. ಘಂಟೆ ಹತ್ತೂವರೆ ಆತು ಅಲ್ಲ, ಇನ್ನೂ ಯಾಕೆ ಲೈಟ್ ಆನ್? ಅಂತ ಮಂಜನ ಕೋಣೆಗೆ ಹೋತ್. ಹಾಸಿಗೆಲಿ ಅಡ್ಡ ಬಿದ್ದು ನಿದ್ದೆ ಮಾಡಿಕೊಂಡು ಇತ್ತು. ಕೈಲಿ ಇದ್ದ ಪುಸ್ತಕ ಜಾರಿ ನೆಲಕ್ಕೆ ಬಿದ್ದಿತ್ತು. ಒಲ್ಲಿ ಮುದ್ದೆ ಆಗಿ ಕಾಲ್‌ನ ಬಿದ್ದುಕೊಂಡ್ಡತ್ತ್. ತಿರ್‌ಗ್ಗುವ ಫ್ಯಾನ್‌ನ ಸದ್ದಿಗೆ ಹೊತ್ತುವ ಲೈಟ್ ಕಂಪೆನಿ ಕೊಡುತ್ತಿತ್ತ್. ಸಂಧ್ಯಾ ಹೋಗಿ ಮಂಜನ ನೇಚಿ ಹಾಸಿಗೆಲಿ ಸರಿಯಾಗಿ ಮಲ್‌ಗುಸಿ ಮುದ್ದೆಯಾಗಿ ಇದ್ದ ಓಲ್ಲಿನ ಸೇರಿಯಾಗಿ ಅವ್ವಂಗೆ ಹೊದ್‌ಸ್ಸಿ ಅವನ ಕೆನ್ನೆನ ಹಣೆನ ಒಮ್ಮೆ ನೋಡಿಕೊಂಡು ನಿಂತ್ತೊತ್ತ್. ಒಮ್ಮೆ ಜೋರಾಗಿ ಉಸುರು ಬುಟ್ಟು ಲೈಟು ಆಫ್ ಮಾಡಿ. ಅವು ಮಲುಗ್ಗುವ ರೂಮ್‌ನ

ಒಳಗೆ ಕಾಲು ಇಸಿತ್ ಮಂಚಲಿ ಮಲ್‌ಗಿ ಜೋರಾಗಿ ಉಸಿರು ತೆಗೆನ ಗಂಡನ ಹಕ್ಕಲೆ ಹೋಗಿ ಮೆಲ್ಲಂಗೆ ಒಲ್ಲಿ ಎಳ್‌ತ್. ಬಲ ಕೈನ ಹಿಂದೆ ಹಾಕಿ ಲೈಟು ಆಫ್ ಮಾಡ್ತ್. ಶ್ರೀಕಾಂತಗೆ ಒಲ್ಲಿನ ಲಾಯಕ್ ಹೊದ್ದುಸಿ ಅಲ್ಲಿ ಕಣ್ಣು ಮುಚ್ಚಿತು.

ರಾತ್ರಿ ನಿಶ್ಯಬ್ದ ಆಗಿತ್ತು. ಕಿಟಕಿನ ಹೊರಗೆನ ಕತ್ತಲೆ ಕೋಣೆನ ಒಳಗೆ ಕೂಡ ಬಿದ್ದಿತ್ತು. ಫ್ಯಾನ್ ತಿರುಗುವ ಸದ್ದು ಅಲ್ಲದೆ ಶ್ರೀಕಾಂತ ಉಸಿರಾಡುವ ಸದ್ದು ಬಿಟ್ಟು ಬೇರೇನು ಕೇಳುತ್ತಿತ್ತ್‌ಲೆ.

ಸಂಧ್ಯಾ..... ಕತ್ತಲೇಲಿ ಶ್ರೀಕಾಂತ ಸ್ವರ ಕೇಳುತ್ತು.

ಹ್ಞೂಂ ಗಂಡನ ಹುಡುಕುವ ಕೈನ ಸಂಧ್ಯಾ ಮೆಲ್ಲಗೆ ತಡ್‌ತ್ತು.

ಯಾಕೆ ಬೊಚ್ಚಿತ್ತಾ?

ಹ್ಞೂಂ.

ಯಾಕೆ?

ಹಿಂಗೆ ಸುಮ್ಮನೆ.

ಕೈ ಸಂಧ್ಯಾನ ಕೈನ ಮುಂದೆ ಮಾಡಿ ಮುಂದೆ ಹೋತು. ಚುರು ಹೊತ್ತು ನಿಶ್ಯಬ್ದ. ಫ್ಯಾನ್‌ನ ಸದ್ದು ಮಾತ್ರ ಕೇಳುತ್ತಿತ್ತ್.

ಅಲ್ಲಾ_..

ಇದೆಲ್ಲಾ... ಕಮಾನ್

ಏನಾತು ಈಗ?. ಶ್ರೀಕಾಂತನ ಸ್ವರ ಇರಿಯವಂಗ್ಗೆ ಇತ್ತ್.

ಏನಾಂತು?

ಏನಿಲ್ಲ.

ನಂಗೊತ್ತು. ಆ ಕಂಪ್ಯೂಟರ್. ನೀನೆ ಅವನ ಹಾಳು ಮಾಡೋದು. ಶ್ರೀಕಾಂತ ಮಲಗಿದ್ದಲ್ಲಿಂದ ರಬಕ್ಕ ಎದ್ದು ಕುದ್ದೊತ್ತ್. ಎಲ್ಲಾ ನಿನ್ನ ಸಪೋರ್ಟಿಂದ. ಆ ಕತ್ತಲೆಲೂ ಸಂಧ್ಯಾಂಗೆ ಅವನ ಹೊರುಡಿಸ್ಸಿದ ಕಣ್ಣುನ ನೋಡಿಕ್ಕಾನ ಕುತ್ತುವಂಗೆ ಕಾಣುತ್ತಿತ್ತ್.

ರೀ..... ಒಂದು ಮಾತು ಹೇಳ್ನೆ. ದಯವಿಟ್ಟು ಕೋಪ ಮಾಡ್ಬೇಡಿ. ಸಂಧ್ಯಾ ಎದ್ದು ಕುದ್ದು ಅವನ ಗಟ್ಟಿಯಾಗಿ ತಬ್ಬಿಕೊಂಡೊತ್. ಹ್ಹಾ..... ಹೇಳು. ಶ್ರೀಕಾಂತನ ಸ್ವರ ಚುರು ಮೆತ್ತಂಗೆ ಆತ್. ಬೆಳೆಯೊ ಹುಡುಗ. ಅವ್ವಂಗೆ ಇಷ್ಟು ಬೈಯೋಕ? ಅಂವ್ವ ಯೋಚನೆ ನೆಗೆಟೀವ್ ಅದೆ. ಚೂರ್ ಕೇರ್‌ಫುಲ್ಲಾಗಿ ಹ್ಯಾಂಡಲ್ ಮಾಡೊಕು ಅಲಾ.

ಹಂಗೆ ಅಂತ ಅಂವ್ವ ಹೇಳ್‌ದ್ದರ ಹಾಂಗೆನೆ ಬುಡಿಕೆ ಆದೇನಾ?. ಚೂರು ಶಿಸ್ತು ತೇಳ್‌ದ್ದು ಬೇಡನಾ? ನಾವೆಲ್ಲ ಹೆಂಗೆ ಕಲ್‌ತೊದ್? ಸಿರಿಯಸ್‌ನೆಸ್ ಇಲ್ಲೆ ಮಕ್ಕಳಿಗೆ?

ಏನೋ ಪಾಪ ಆಸೆ. ಬೇರೆ ಎಲ್ಲವೊರೊಟ್ಟಿಗೆ ಉಟ್ಟ್‌ಗಡ. ಒಂದು ತೆಗ್‌ದ್ದು ಕೊಡಿಕೆ ಬೊತ್ತಾ?... ಅಂವ್ವ ಇಡೀ ದಿನ ಆಡದ ಹಾಂಗೆ ನಾ ನೋಡಿಕಂಡನೆ. ಆಮೇಲೆ

ಅಂವ್ದ ಸರಿ ಓದಿದೆ; ಶ್ರೀಕಾಂತನ ಇನ್ನಷ್ಟು ಜೋರಾಗಿ ತಬ್ಬಿಕೊಂಡು ತನ್ನ ಹಕ್ಕಲೆ ಎಳ್ಳುಕೊಂಡು ಮಲುಗಿತ್.

ಆತ್ ನೋಡೊನೊ ಮಾರಾಯ್ತಿ, ನಾಳೆ ನೋಡೊಣ. ಶ್ರೀಕಾಂತನ ಕೈ ಮುಂದೆ ಹೋತ್.

ಒಮ್ಮೆ ತೆಗೆದ್ದು ಕೊಡಿ ದಮ್ಮಯ್ಯ..... ಸಂಧ್ಯಾ ತನ್ನ ಕೈ ಮುಂದೆ ಮಾಡುತ್.

ಓ.ಕೆ. ನೋಡೊಣ.

ಹ್ಞಂ.

ಕೈಗೆ ಕೈ ತಾಗಿ ಶ್ರೀಕಾಂತನ ಗಟ್ಟಿಯಾದ ಕೈಯಲ್ಲಿ, ಅದರ ಕೈ ಸೋತೊತ್. ಸಂಧ್ಯಾಳ ಮನಸ್ಸು ಹಗ್‌ರ ಆತ್.

ಸಂಧ್ಯಾಗೆ ಪಕ್ಕನೆ ಎಚ್ಚರ ಆಕಾನ ಏಳು ಗಂಟೆ. ಗಂಡನನ್ನು ಕೂಡಲ್ಲೆ ಎದ್ದುರ್‌ಸ್ಸಿ, ಗಡಿಬಿಡಿಲಿ ಹಲ್ಲುಜ್ಜಿಕೆ ಹೋತ್.

ಇಂದು ಶನಿವಾರ ವಿಜಯಂಗೆ ಶಾಲೆ ಇಲ್ಲೆ. ಶ್ರೀಕಾಂತ ಯಾಗೋಳುನಂಗೆ ಎಂಟು ಘಂಟೆಗೆ ಆಫೀಸಿಗೆ ಹೋಕು. ಗಡಿಬಿಡಿಂದ ಸಜ್ಜಿಗೆ ಮಾಡಿ ಶ್ರೀಕಾಂತ ಮಿಂದು ಡ್ರೆಸ್ ಮಾಡಿ ಟೈ ಹಾಕಿಕೊಂಡು ಬೇಗ ಬೇಗ ಲೇಟ್ ಆತ್ ನಂಗೆತೇಳಿ ಪಿರಿ ಪಿರಿ ಮಾಡಿಕೊಂಡು ಟೇಬಲ್ ಹಕ್ಕಲೆ ಕುದ್ದುಕೊಂಡು ತಾಳ್ಮೆ ಕಳ್‌ಕೊಂಡತ್.

ಗಡಿಬಿಡಿಂದಲೇ ಗಟಗಟನೆ ಸಜ್ಜಿಗೆ ತಿಂದು ಚಾಯಾ ಕುಡ್ದುಕೊಂಡು ಇರಿಕಾನ ಸಂಧ್ಯಾ ಹತ್ತಿರ ನಿಂತು ನೋಡ್‌ನೆ ಇಂದು.

ರಿ....... ಸಂಧ್ಯಾ ಮೆಲ್ಲಗೆ ಸ್ವರ ಎತ್ತಿತ್ತು.

ಎಂತ? ಶ್ರೀಕಾಂತ ಏರುದನಿಲಿ ಕೇಳ್ತು.

ಇಂದು..... ಅದು..... ಕಂಪ್ಯೂಟರ್ ಮೆಲ್ಲಂಗೆ ಒಂದೋದೇ ಶಬ್ದ ಹೇಳುತ್.

ನಿವುಗೇ ಇಬ್ರೊರಿಗೆ ಹುಚ್ಚು. ಹಾಳಾದು ಅಂವ್ದ ಕಂಪ್ಯೂಟರ್ ಕೊಟ್ರೆ ಶ್ರೀಕಾಂತನ ಬೊಬ್ಬೆ ಜೋರಾತು.

ಮತ್ತೆ ರಾತ್ರಿ ನೀವು ಕನ್‌ಸ್ಸುಲಿ ಹೇಳ್‌ತ್ತಿದ್ದ ಶಬ್ಧ ಹೊರೆಗೆಬರದೆ ಹೊಟ್ಟೆಲಿ ಸತ್ ಹೋತ್. ಒತ್ತಿ ಒತ್ತಿ ಬರುತ್ತಿದ್ದ ದುಃಖ ಹಲ್ಲು ಕಚ್ಚಿ ತಡ್‌ತ್. ಮೈ ನಡುಗಿ ಕಣ್ಣುಲಿ ನೀರು ತುಂಬಿತು. ಒಮ್ಮೆ ಹೆಣ್ಣ್‌ನ ಕೆಂಪು ಮಾಡುದ್ದ ಕಣ್ಣ್‌ಲಿ ನೋಡಿ, ಶ್ರೀಕಾಂತ ದಡ ದಡ ಇಳಿದು. ಮನೆಂದ ಹೊರಗೆ ಕಾಲು ಹಾಕಿ ದಬ್ ಎಂಬ ಸದ್ದು ಮಾಡಿ ಕಾರು ಹೋವ ಸದ್ದು ಕೇಳ್.

ದಬ್ ತೇಳಿ ಬಾಗುಲು ತೆಗೆದ್ದು ಕಣ್ಣು ತಿಕ್ಕಿಕೊಂಡು ವಿಜಯ ಮಲುಗುವ ರೂಮಿಂದ ನಡುಕೋಣೆಗೆ ಬಂದು ಹೋದಾನ ಪೊಪ್ಪ?

....

ಹೋದಾನಾ ಕಾರು ಸದ್ದು ಕೇಳತ್ತ್.

ಹೋದ ಮಂಜ.....

ಕಂಪ್ಯೂಟರ್ ತಂದನೆನ್ನ ಇಲ್ಲೆನಾ ಇಂದು? ವಿಜಯನ ಕೋಪ ಏರಿಕೆ ಸುರು ಆತ್.

ನೋಡೊಮಾ. ನೀ ಹಲ್ಲು ಉಜ್ಜು. ಸಜ್ಜಿಗೆ ಕೊಟ್ಟೆನೆ.

ಬೇಡ ನಿನ್ನ ಸಜ್ಜಿಗೆ. ಪೊಪ್ಪ ಇಂದು ಕಂಪ್ಯೂಟರ್ ತಾದುಲೆ ಅಲ್ಲಾ?

ತಂದವೇನಾ? ಇಲ್ಲೆನಾ?. ಹೇಳ್ ಬೇಗ.

ಸಂಧ್ಯಾಂಗೆ ಎಂತಾ ಹೇಳೋಕು ತೇಳಿ ಮನುಸ್ಸಿಗೆ ತೋಚಿತುಲೆ. ಅಷ್ಟೊತ್ತಿಂಗೆ ಅಪೀಸ್‌ಗೇ ಹೋದ ಅಪ್ಪ ಮತ್ತೆ ಮನೆಗೆ ಬಂದೋ ಮಂಜಂಗ್ ಕೇಳುವ ಧೈರ್ಯ ಅಂತೂ ಇಲ್ಲೆ. ಅರ್‌ಜೆಂಟ್‌ತೇಳಿ ಬಂದ ಅಪ್ಪ ಮತ್ತೆ ಪುನಃ ಹೋದೊ. ಒಂದ ಗ್ಲಾಸು ನೀರುನು ಸಹ ಕುಡಿಯಾದೇ ಹಾಂಗೆನೇ ಹೋದೊ. ಮತ್ತೆ ವಾಪಾಸ್ಸು ವಿಜಯನ ಜಗಳ ಸುರು. ತಂದವೆನಾ, ಇಲ್ಲೆನಾ ಹೇಳುತೇಳಿ ಸಂಧ್ಯಾನ ಸೆರ್‌ಗ್ಗುನ ಬುಟ್ಟೊತ್ತ್‌ಲೆ. ಹಿಂಗೆನೆ ಆ ದಿನ ಅಂತೂ ಮಂಜನ ಎಂತ ಮಾಡುದ್ದು ತೇಳಿ ಯೋಚನೆ ಮಾಡಿಕೆ ಸುರು ಮಾಡುತ್ತು.

ಯೋಚನೆಲೆ ....

....

ಮಂಜ

ಅವನ ಕಾಲು ಮೇಲೆ ಅಂವ ನಿಂತುಟುತೇಳಿ ಅತ ಒಮ್ಮೆ .

* * * * *

ಹೇಳ್ದ್ ಪುರಾಣ.... ಹಾಕುದ್ ಗಾಳ... – ಗಾದೆ

ಬೇಧ


ಅಮ್ಮ ನೀ ಇಂದು ನಂಗೆ ಮೋಸ ಮಾಡಿಯಾಳಾ. ಇಬ್ಬರ ಬುತ್ತಿ ಪಾತ್ರಕ್ಕೆ ಎರಡು ವಡೆ ಹಾಕಿನೆ ತೇಳಿ ರಮ್ಯಾ ಬುತ್ತಿಗೆ ಮೂರು ಹಾಕಿಯಾಳಾ. ಹೈಸ್ಕೂಲ್ ಮುಗಿಸ್ಸಿ ಬಂದ ರಾಧಿಕಾ ಅಮ್ಮನ ಕೇಳುತ್. ನಾ ಯಾಕೆ ಹಂಗೆ ಮಾಡಿನೆ? ಇಲ್ಲೆ ತೇಳಿರೆ ರಮ್ಯಾ ಕೇಳದುಲ್ಲೆ. ರಾಧಿಕಾ ಹಿಡ್‌ದ್ದ ಪಟ್ಟ್ ಸಡಿಲ ಮಾಡ್‌ತ್ತ್‌ಲೆ.

ಹೌದಮ್ಮ ನೀ ನಿನ್ನೆ ದಿನ ನನ್ನ ಬುತ್ತಿಗೆ ಎರಡು ದೋಸೆ, ಮೊನ್ನೆ ಮೂರು ಬೊಡ್ಡಿಟ್ಟು. ಹಿಂಗೆ ನನ್ನ ಬುತ್ತಿ ರಾಧಿಕಾನ ಬುತ್ತಿಂದ ದೊಡ್ಡದಿರೊಕುತೇಳುದ್ ನಿನ್ನ ಇಚ್ಚೆ ಅಲಾ? ನಿಂಗೆ ಎಲ್ಲೋ ಲೆಕ್ಕ ತಪ್ಪಿರೋಕು ಅಲ್ಲದಿದ್ದರೆ ಯಾದೊ ಮೂಡುಲಿ ಹಾಂಗೆ ಆಗಿರೊಕು. ನಾಳೆಂದ ಹಾಂಗೆ ಆಕಿಲೆ ಪೊಪ್ಪ ಬಂದ ಮೇಲೆ ಈ ವಿಷಯನ ಹೇಳ್ಡುಬೇಡ. ಆಮೇಲೆ ನಂಗೆ ಬೊಯ್ಯೊಕ್ಕೆ ಬೊತ್ತ್. ರತ್ನ ಬೇಜಾರಲಿ ಹೇಳುತ್. ಸರಿ ತೇಳಿ ರಾಧಿಕಾ ಜಾಗ ಖಾಲಿ ಮಾಡುತ್. ನೀ ಯಾಕೆ ಅದ್‌ಕ್ಕೆ ತೋರ್ಸಿದ! ರಮ್ಯಂಗೆ ರತ್ನ ಬೈತು. ಯಾಕೆ ತೋರ್ಸಿಕೆ ಆಗದ? ಇನ್ನೂ ಮುಂದೆ ಇನ್ನೂ ಯಾರಿಗೂ ಹಂಗೆ ಮಾಡದೆ ಸೇರಿಯಾಗಿ ಹಾಕಲಿ. ಇಲ್ಲೆತೇಳಿರೆ ಅದ್‌ಕ್ಕೆ ಬೇಕಾದರೆ ಜಾಸ್ತಿ ಹಾಕು ಗೋತ್ತಾ ಆತಾ.

ಹೂ ಅಪ್ಪಂಗೆ ತಕ್ಕ ಮಗಳ್‌ತೇಳಿ ಹಲ್ಲು ಕಚ್ಚಿತು ರತ್ನಮ್ಮ. ರಮ್ಯ ಮತ್ತೆ ರಾಧಿಕಾ ಇಬ್ಬೊರು ದೇಹ ಎರಡು ಹೃದಯ ಒಂದು ತೇಳುವ್ವಂಗೆ ಇದ್ದೊ. ಅವಳಿ ಮಕ್ಕಾ ಇಬ್ಬರಲ್ಲಿ ಗುಣ ನಡತೆ ಬೇರೆ ಇತ್. ದೊಡ್ಡವು ಆದ್ಹಾಂಗೆ ಅಕ್ಕ ತಂಗೆ ಆದೊ. ಶಾಲೆಗೆ ಹೋಕಾನ ಬಾಕಾನ ಮನೆಲಿ ಅಂತೂ ಒಂಬದ್ದೊಬ್ಬ ಬುಟ್ಟು ಇರಿಕಿಲೆ. ಇವರ ಇಬ್ಬರ ನೋಡಿಕಾನ ಕೆಲೊವುಕ್ಕೆ ಹೊಟ್ಟೆ ಕಿಚ್ಚಿ ಪಟ್ಟುಕಣುತ್ತಿದ್ದೊ. ಇದು ಯಾದರ ತಲೆಗೆ ಹಾಕಣದೆ ಇದ್ದೊ ಇಬ್ಬೊರು. ಉಗ್ರಾಣಿಗಂತೂ ಇವರಿಬ್ಬರ ಎಷ್ಟು ನೋಡಿರು ಸಾಕತ್ತಿತ್ತ್‌ಲೆ. ಇವ್ವುರ

ಸಹೋದರಿಯತೆನ ಕಂಡು ಬೇರಗ್ ಆತಿದ್ದೊ. ಇಬ್ಬೊರು ಹೈಸ್ಕೂಲ್ ಮುಗ್‌ಸ್ಸಿ ಕಾಲೇಜಿಗೆ ಬಂದಾಕಾನ ಅಂತೂ ಎಲ್ಲರ ಕಣ್ಣು ಇವರ ಮೇಲೆನೇ! ಒಬ್ಬರಂದ ಒಬ್ಬ ಲಾಯಕ್ಕು ಇದ್ದೊ. ಅಸಕ್ತಿ, ಅಭಿರುಚಿ ಒಂದೇ ಆಕಾನ ಕಲಾ ವಿಭಾಗ ವಿದ್ಯಾರ್ಥಿಗ ಆದೊ. ನಾವಿಬ್ಬರೂ ಅವಳಿಗ, ನಮ್ಮ ಒಂಟಿತನದ ಬೇನೆ ಯಾಗನೂ ಒಂದು ಸರ್‌ತ್ತಿನೂ ಕಂಡುತ್ತ್‌ಲೆ ಅಲಾ?

ಹೌದುಯಾ... ಈ ಹದಿನೆಂಟು ವರ್ಷಲಿ ಒಂದೇ ದಿನ ನಾವು ಒಬ್ಬರನ್ನೊಬ್ಬರ ಬಿಟ್ಟು ಇದ್ದೊನೊ? ರಾಧಿಕಾನ ಮಾತಿಗೆ ನೆಗಾಡಿ ಹೇಳುತ್ತು ರಮ್ಯ ನಿಜ. ರಮ್ಯ ಅದರ ಕನಸ್ಸುಲಿ ನೆನಸ್ಸಿತ್ತ್‌ಲೆ. ನೀ ಇಲ್ಲದ ಹೊತ್ತುಲಿ ನನ್ನ ಉಸಿರು ನಿಂತು ಹೋದೆ. ಓಹೋ ಎಲ್ಲಾ ಸುಳ್ಳು ಮೊದುವೆ ಆದ ಮೇಲೆ ಹಕ್ಕಿನಾಂಗೆ ಹಾರಿ ಹೊದಿಯಾ ರಾಧಿಕಾನ ಬೇಕುತೇಳಿಯೆ ಕೆಣ್ಣುಕಿತ್ತ್ ರಮ್ಯ ಹಾಂಗಾದ್ರೆ ಇಬ್ಬೊರು ಒಬ್ಬನನ್ನೆ ಮೊದುವೆ ಆಗೋಮೊ. ಆಗ ಇಂತಹ ಸಮಸ್ಯೆ ಇಲ್ಲೆ.



ಅದು ಒಂದರ ಬುಟ್ಟು ಬೇರೆ ಎಂತ ಬೇಕಾದರೆ ಹೇಳು. ಬೇಕಾರೇ ಇಬ್ಬೊರು ಮೊದುವೆ ಆಗದೆ ಇರೋಮೊ ಒಬ್ಬನನ್ನೆ ಮೊದುವೆ ಆದುತೇಳಿ ಹೇಳ್‌ಬಡ. ಯಾರ ಪ್ರೀತಿಲಿ ಬೇಕಾದರೆ ಪಾಲು ಕೇಳೊಕು ಆಕಾನ, ಪಾಲುಕೊಡೋಕು. ಅಂದರೆ ಗಂಡ ಹೆಂಡಿರ ಪ್ರೀತಿಲಿ ಇದು ಸಾದ್ಯ ಇಲ್ಲೆ. ರಮ್ಯ ತೀಳ್‌ದ್ದವರ್ಥಂಗೆ ಹೇಳ್‌ತ್ತ್. ಇಷ್ಟೆಲ್ಲಾಉಟ್ಟಾ? ಹಾಂಗಾದರೆ ಆ ಸಮಯ ಬಾಕನ ಚರ್ಚೆ ಮಾಡೋಮೊ ಈಗ ಯಾಕೆ ತಲೆ ಕೆಡ್‌ಸ್ಸುದು

ಅದು ಒಂದರ ಬುಟ್ಟು ಬೇರೆ ಎಂತ ಬೇಕಾದರೆ ಹೇಳು. ಬೇಕಾರೇ ಇಬ್ಬೊರು ಮೊದುವೆ ಆಗದೆ ಇರೋಮೊ ಒಬ್ಬನನ್ನ ಮೊದುವೆ ಆದುತೇಳಿ ಹೇಳ್‌ಬಡ. ಯಾರ ಪ್ರೀತಿಲಿ ಬೇಕಾದರೆ ಪಾಲು ಕೇಳೊಕು ಆಕಾನ, ಪಾಲುಕೊಡೋಕು. ಅಂದರೆ ಗಂಡ ಹೆಂಡಿರ ಪ್ರೀತಿಲಿ ಇದು ಸಾದ್ಯ ಇಲ್ಲೆ. ರಮ್ಯ ತೀಳ್‌ದ್ದವರ್ಥಂಗೆ ಹೇಳ್‌ತ್ತ್. ಇಷ್ಟೆಲ್ಲಾಉಟ್ಟಾ? ಹಾಂಗಾದರೆ ಆ ಸಮಯ ಬಾಕನ ಚರ್ಚೆ ಮಾಡೋಮೊ ಈಗ ಯಾಕೆ ತಲೆ ಕೆಡ್‌ಸ್ಸುದು ಅಲಾ? ಈಗ ಬೇರೆ ಸಮಸ್ಯೆ ಎದುರು ಆವುಟು.

ಏಂತೊದ್ ಅದು? ರಮ್ಯ ಅರ್ಥ ಆಗದೆ ಕೇಳುತ್ತ್.

ಬರುವ ವರ್ಷ ನೀ ಬಿ.ಎ.ಗೆ ಹೋದರೆ ನಾ ಷ್ಯಾಷನ್ ಡಿಸ್ಯೆನಿಂಗ್‌ಗೆ ಹೋಕಡ ರಾಧಿಕಾ ಬೇಜಾರಾಲಿ ಹೇಳುತ್ತ್.

ಎಂತ ಹೇಳ್ದು ನೀ?

ನೀ ಪ್ಯಾಷನ್ ಡಿಸ್ಯೆನಿಂಗ್‌ಗೆ.

ನಾ ಬಿ.ಎ.ಗೆ............ ನಂಗೊಂದು ಅರ್ಥನೇ ಆದುಲೆ?

ಹಾಂಗೆ ತೇಳಿ ಅಮ್ಮ ಹೇಳಿರೊಕು ಅಲಾ?

ನಾ ಮಿಯಕೇ, ಲ್ಯಾಟ್ರಿನ್‌ಗೆ ಹೋದ ಹೊತ್ತುಲಿ ಅಮ್ಮಾ ನಿನ್ನ ಕಿವಿಗೆ ಉದಿರೊಕು. ಅಮ್ಮಂದು ಜಾಸ್ತಿ ಅತ್.

ಅದು ಯಾಕೆ ಹಿಂಗೆ ಮಾಡ್‌ದ್ದೆ?.

ಅದೇ ನಂಗೂ ಅರ್ಥ ಅತ್‌ಲೆ ರಮ್ಯ. ಇರ್ಲಿ ಬುಡು ಏನೂ ಬೇಜಾರ ಮಾಡ್ಡ್‌ಬೇಡಾ. ಇದೆಲ್ಲಾ ಪೊಪ್ಪ ಒಪ್ಪಿಕ್ಕಿಲೆ ಎಂತಾರು ಹೇಳಿ ಅಮ್ಮನ ಬಾಯಿ ಮುಚ್ಚಿಸುವೆ.

ಇಲ್ಲೆ ಗಡ, ಅಪ್ಪನೆ ಹೇಳ್ದು ಗಡ. ಕಾಲೇಜು ಪೀಸು ಪೂರ್ತಿ ಜಾಸ್ತಿ ಆವುಟು ಓದ್ಲೂದು ತಂಬ ಕಷ್ಟ ಅದು ಸಾದ್ಯವೆ ಇಲ್ಲೆ. ಇದರಲ್ಲಿ, ಅಮ್ಮಂದೂ ಏನೊ ಕಿಣಿ ಇರೋಕು. ನಿಂಗೆ ಏನ್ ಆಸ್ಸಿದೆ? ರಮ್ಯನ ಮಾತಿಗೆ ಏನೊಂದು ಹೇಳದೆ ಸುಮ್ಮನೆ ನಿಂತೀತು ರಾಧಿಕಾ ನಾ ಯಾಕೆ ರಮ್ಯನ ಹಾಂಗೆ ಅಮ್ಮನ ಹಕ್ಕಲೆ ಜಗಳ ಕಾಯೊದು. ಅದೆಲ್ಲಾ ಸಾದ್ಯನೆ ಇಲ್ಲೆ. ಖಂಡಿತ ನಂಗೆ ಹೇಳಿಕೆ ಆಕಿಲೆ ಎಂತ ಯೋಚನೆ ಮಾಡಿಯಾ? ನಾ ಕೇಳ್ದೆ ನೀ ಮೌನ ಆಗಿ ಇದ್ದಿಯಾ! ಈಗ ಆ ವಿಷಯ ಕೇಳ್ಬೆಡ ರಿಸಲ್ಟ್ ಬಂದ ಮೇಲೆ ನೋಡೊಮೊ. ರಾಧಿಕಾನ ಮಾತ್‌ಗೆ ತಲೆ ಅಲ್ಲಾಡಿಸ್ಸಿತು ರಮ್ಯ. ಮೇ ತಿಂಗಳ

ಫಸ್ಟ್‌ಗೆ ರಮ್ಯ, ರಾಧಿಕಾಳ ಹುಟ್ಟಿದ ಹಬ್ಬ. ಇಬ್ಬೊರೂ ಒಂದೆ ತರದ ಲಂಗ ರವುಕೆ, ಅದಕ್ಕೆ ಮೇಚ್ ಆದ ಬಳೆ, ಸ್ಟಿಕ್ಕರ್, ಹೇರ್‌ಕ್ಲಿಪ್ ಧರಿಸಿದ್ದ. ಉಗ್ರಾಣಿಗೆ ಮಕ್ಕಳ ಎಷ್ಟು ಸಲ ನೋಡಿರೂ ಸಾಕಾತುಲೆ, ಮತ್ತೊಮ್ಮೆ, ಮಗದೊಮ್ಮೆ ಮಕ್ಕಳ ಸೌಂದರ್ಯನ ನೋಡಿದ್ದ ಅಂವ್ವ ನನ್ನ ದೃಷ್ಟಿ ಆದೆ ಏನೊ ಒಂದು ಹೇಳ್‌ತ್ತ್.

ಅಪ್ಪನ ಮಾತಿಗೆ ಇಬ್ಬೊರು ನೆಗಾಡ್‌ದ್ದೊ. ಎಲ್ಲಾ ತಯಾರಿ ಮುಗುತ್ತು ಆಕಾನ ಚಿನ್ನದ ಚೈನ್‌ನ ತಂದು ರಮ್ಯಾಳ ಗಂಟಲುಗೆ ಹಾಕಿತು ರತ್ನ. ಅಮ್ಮ ಲಾಯಕ್ ಉಟ್ಟು, ರಾಧಿಕಾಂದೂ ಕೂಡಾ ಒಂದೆ ಅಲಾ? ತೇಳ್‌ತ್ತ್ ರಮ್ಯಾ.

ಇಲ್ಲೆ ಮಗಾ ಇಬ್ಬೊರಿಗೆ ಒಟ್ಟಿಗೆ ತಾದು ಕಷ್ಟ ಅಂತ ಈ ವರ್ಷ ನಿಂಗೆ, ಬರುವ ವರ್ಷ ಅದ್‌ಕೆ ತಾದುತೇಳಿ ಹೇಳುತ್. ಅಮ್ಮ ಹಾಕಿದ ಚೈನ್‌ನ ತುಂಡು ಮಾಡಿ ಬಿಸಾಡುತ್ತ್, ರಮ್ಯ ಅಮ್ಮಂಗೆ ಬುದ್ಧಿ ಇಲ್ಲೆನಾ? ಯಾಕೆ? ಏನಾತು? ಈಗ ಮೆಲ್ಲಂಗೆ ಕೇಳ್‌ದ್ದೊ ಉಗ್ರಾಣಿಗ. ಇನ್ನೂ ಎಂತ ಆಕು ಅಮ್ಮ ನಗ್ಗೊಬ್ಬಗೆ ಚೈನ್ ತಂದುಟು. ರಾಧಿಕಂಗೆ ಬರುವ ವರ್ಷ ಗಡ ಸಾದ್ಯ ಆದರೆ ಇಬ್ಬೊರಿಗೂ ತರೋಕು ಇಲ್ಲೆತೇಳಿರೆ ಯಾರು ಕೇಳುವೆ? ಅದು ಯಾಕೋ ರಾಧಿಕಂಗೆ ಇನ್ನೂರು ರೂಪಾಯಿ ಡ್ರೆಸ್ ತಂದು ನಂಗೆ ಐನೂರು ರೂಪಾಯಿ ಡ್ರೆಸ್ ತಂದಾಕಾನ ಯಾಗೋಳು ಹಿಂಗೆ ಮಾಡ್‌ಬೊಡಿತೇಳಿ ಹೇಳಿಯಳೆ. ನಾ ಡಿಗ್ರಿಗೆ ಸೇರಿರೇ ರಾಧಿಕ ಪ್ಯಾಷನ್ ಡಿಸೈನಿಂಗ್‌ಗೆ ಹೋಕಾದ ನಮ್ಮ ಏನೂತೇಳಿ ತಿಳ್‌ಕೊಂಡೊಳೋರಿ. ತಿಳುದ್ದ್ ತಪ್ಪು ಮಾಡಿರೆ ಮುಂದೆ ಪಶ್ಚಾತಾಪ ಪಡುವ ದಿನ ಬಂದದೆ. ರಮ್ಯ ಗದರ್‍ಸಿ ಹೇಳ್‌ತ್ತ್. ಹೌದ? ನಂಗೆ ಗೊತ್ತಿತ್ತುಲೆ ಯಾಕೆ ಹಿಂಗೆ ಮಾಡ್ದೆ? ಉಗ್ರಾಣಿ ಹೆಣ್ಣ್‌ನ ಕೇಳುತ್ತು. ಯಾಕೇ ಅಂದ್ರೆ? ಏನೂ ಬೆಕರೆ ಹೇಳು, ಬಾಯಿ ಮುಚ್ಚಿ ಎದ್ದರೆ ಸೇರಿ. ಅದಕ್ಕೂ ಇಲ್ಲೇ ತೇಳಿರೇ, ನಾವುಗೇ ಬುದ್ಧಿ ಇಲ್ಲೇನಾ?. ನನ್ನೊಟ್ಟಿಗೆ ಚೂರು ದುಡ್ಡು ಇತ್ತ್ ಅದುಕ್ಕೆ ಹಾಂಗೆ ಮಾಡುದ್ದೆ, ಬುದ್ಧಿ ಇರುವವ ರೊಟ್ಟಿಗೆ ಹೇಳೊಕು. ನಿನ್ನ ಹಕ್ಕಲೆ ಇಲ್ಲೆ ತೇಳಿರೆ ನನ್ನ ಕೇಳಕ್ಕಯಿತ್ತ್ ಅವುಕ್ಕೆ ಇದೆಲ್ಲಾ ಇಷ್ಟ ಆದುಲೆತೇಳಿ ಗೊತ್ತಿದ್ದು ಯಾಕೆ ಹಿಂಗೆ ಮಾಡಿಯಾ?. ಹೆತ್ತ ಕರುಳುನ ಕಷ್ಟ ನೀವುಗೇಲ್ಲಿ ಅರ್ಥ ಅದೆ?, ಕಣ್ಣು ಉಜ್ಜಿಕೊಂಡು ಹೇಳುತ್ತ್ ರತ್ನ. 'ಸಮ್ಸನೇ ಇರು'ತೇಳಿ ಬೈದು ಉಗ್ರಾಣಿಂಗ ಹೊರಗೆ ಹೋದೊ, ರತ್ನ ಕೋಪಮಾಡಿಕೊಂಡು ರೂಮ್ ಸೇರುತ್ತ್.

ರಮ್ಯ ರಾಧಿಕಾ ಇಬ್ಬೊರು ಮುಖ-ಮುಖ ನೋಡಿಕೊಂಡ ಈಗ ಎಂತಾತುತೇಳಿ ನೋಡುದ್ದಾನ ರಮ್ಯ ಸುಮ್ಮನೆ ನೀ ಚೈನ್ ಹಾಕಿಕೊಂಡರೆ ಇಷ್ಟೆಲ್ಲಾ ಜಗಳ ಆಗಿತ್ತಾ? ಹೌದು ಹಂಗಾದಾರೆ ನೀ ಚೈನ್ ಹಾಕಿಕಾನ. ಇಲ್ಲೇ ಅದೆಲ್ಲಾ ಸರಿಯಾದುಲೆ. ನಿಂಗೆತೇಳಿ ತಂದೋದು ನೀ ಹಾಕಿ ಕೋಣೊಕು, ಅಂದರೆ ಲಾಯಕ್ಕು ನಿಂಗೆ ತಂದು ನಂಗೇ ತರದಿದ್ದರೆ ಬೇಡ? ಪಟ್ಟು ಬುಡದೆ ಕೇಳುತ್ತ್ ರಮ್ಯ. ರಾಧಿಕಾ ಮೌನ ಆತ್. ನಂಗೂ ಹಾಂಗೆ ಅದೇನೆ ಇರ್‍ಲಿ ಒಬ್ಬಂಗೆ ತಂದು ಇನ್ನೊಬ್ಬಂಗೆ ತರದಿದ್ದರೆ ತುಂಬಾ ಕೋಪ

ಬೊಳ್ಳು
ಬಂದದೆ ತರದೆ ಇದ್ದರೆ ಒಳ್ಳೊದು.

ಇಬ್ಬರ ಕಣ್ಣುಲಿ ನೀರು ತುಂಬಿತ್ತು ರಮ್ಯನ ತಬ್ಬಿಕೊಂಡೊತ್ ರಾಧಿಕ. ಅಮ್ಮ ಬೇಜಾರ ಮಾಡಿಕೊಂಡುಳು ಸಮಾದಾನ ಮಾಡಿ ಸ್ವಾರಿ ಕೇಳೊನೊತೇಳಿ ಕೈ ಹಿಡಿದ್ದು ಕರುತ್. ಇಬ್ಬೊರು ಅಮ್ಮನ ಕೈನ ಹೀಡ್‌ದ್ದು ಸ್ವಾರಿ ಕೇಳ್‌ದ್ದೊ. ರಾಧಿಕಾಂಗೆ ಇಲ್ಲದಾ ವಸ್ತು, ನಂಗೂ ಬೇಡ ಅಲ್ಲಿವರೆಗೆ ಇದು ನಿನ್ನ ಹಾಕ್ಕಲೆ ಇರ್ಲಿ ತೇಳಿ ರಮ್ಯ ಹೇಳ್ತು. ಅಷ್ಟರಲ್ಲಿ ಹೊರೆಗೆಂದ ಬಂದ ಉಗ್ರಾಣಿಗ ಅಂಥದ್ದೇನೂ ಬೇಡ ತೇಳುತ್ತಾ ಮತ್ತೊಂದು ಚೈನ್ ತಂದು ರಾಧಿಕಳ ಗಂಟ್‌ಲಿಗೆ ಹಾಕಿದೊ. ಮಕ್ಕಳ ಮನಸ್ಸುನ ತಿಳ್ದ್ ಅಂಥ ತಪ್ಪುನ ತಿದ್ದಿಕೊಂಡುತೇಳಿ, ಸಂತೋಷಲಿ ಎಲ್ಲಾರೊಟ್ಟಿಗೆ ಇತ್ತು. ಪಿ.ಯು.ಸಿಲಿ ಪಸ್ಟ್‌ಕ್ಲಾಸ್‌ಲಿ ಪಾಸಾದೊ ಡಿಗ್ರಿ ಸೇರದ್ದ ಮೇಲೇಂತೂ ಅವರ ಹೆಸರು ಮನೆ ಮಾತಾತು. ಕಾಲೇಜ್‌ಲಿ ಪ್ರಿನ್ಸ್‌ಪಾಲ್‌ಂದ ಹಿಡಿದ್ದು ಮಕ್ಕಳವರೆಗೆ ಜೋಸ್ತಿಗ ಆಗಿರೋಕು ತೇಳಿ ಅಂದುಕೊಂಡಿದ್ದ ಅವುಳಿ ಮಕ್ಕತೇಳಿಕಾನ ಎಲ್ಲೊವು ಆಶ್ವರ್ಯಂದ ನೋಡ್ದ.

ನಡೆ–ನುಡಿ ಅಚಾರ–ವಿಚಾರ ಎಲ್ಲಾದರಲ್ಲಿ ಸಾಮ್ಯತೆ ಇತ್. ಅದರೆ ಮೊರೆಲಿ ಚೂರು ಭಿನ್ನತೆ ಇತ್. ಒಬ್ಬಳು ಅಪ್ಪನಾಂಗೆರೋಕು ಮತ್ತೊಬ್ಬಳು ಅಮ್ಮನಾಂಗೆರೊಕು ತೇಳಿ ಮಾತಾಡುತ್ತಿದ್ದೊ ಯಾರ ನೋಡಿರು ಮತ್ತೊಮ್ಮೆ ನೋಡೋಕು ತೇಳುವ ಚೆಲುವು. ಬೇರೆ ಗೂಡೆಗ ಹೊಟ್ಟೆಕಿಚ್ಚು, ಮತ್ಸರ ಪಟ್ಟರೆ, ಹೈಂದಂಗ ಬುಟ್ಟಕಣ್ಣುಲಿ ದುರುಗುಟ್ಟುತ್ತಿದ್ದೊ. ಪರೀಕ್ಷೆಲಿ ಇಬ್ಬರ ಮಾರ್ಕ್ಸ ಚೂರುಹೆಚ್ಚು ಕಮ್ಮಿ ಇರಿಕಾನ ಅಶ್ಚರ್ಯ ಪಡುವ ಸರದಿ ಲೆಕ್ಚರ್‌ಸ್ ನವರದಾಗಿತ್.

ಡಿಗ್ರಿ ಮುಗೆಕಾನ ವರನ ಹುಡ್ಕಿಕೆ ಸುರು ಮಾಡ್‌ದ್ದೊ. ಇಬ್ಬರ ಜಾತಕನ ಒಂದೇ ದಿನ ಹೊರ ಹಾಕಿದೊ. ಇಬ್ಬರ ಗಂಡಂದರು ಒಂದೇ ರೀತಿನ ಕೆಲ್ಸಲಿ ಇರೊಕೂತೇಳಿ ಹಠ ಮಾಡಿ ಬೇಡಿತೇಳಿ ಜಾತಕ ಹೊರ ಹಾಕಿ, ಮುಂದೆ ಉಗ್ರಾಣಿಗೆ ಕೈ ಮುಗಿದು ಬೇಡ್‌ದ್ದೊ. ಇಬ್ಬೊರು ಈ ವಿಷಯಲಿ ಜಗಳ ತೇಗತ್ತ್‌ಲೆ. ಅಂದರೂ ಮೊದುವೆ ಆಕೂ ಅಲಾ, ಅಮೇಲೆ ಒಬ್ಬ, ಒಬ್ಬ ಬುಟ್ಟು ಇರೋಕುತೇಳುವ ಬೇನೆ ಅವರ ಕಾದಿತ್. ಹಂಗೆತ್ತಾ ಮೊದುವೇನೆ ಬೇಡ ತೇಳಿ ಅಪ್ಪ ಅಮ್ಮಂಗೆ ಬೇನೆ ಕೊಡ್‌ದ್ದು ಸರಿಯಲ್ಲತೇಳಿ ಅನ್ನಿಸ್ತ್. ಇಬ್ಬೋರು ಒಬ್ಬನ್ನೆ ಮದುವೆ ಅದರೆ ಸಿನೆಮಾ, ಕಥೆ–ಕಾದಂಬರಿಗೆ ವಸ್ತು ಅದು ತೇಳಿ ಮನಗಂಡಿದ್ದ. ಒಟ್ಟುಲಿ ಇಬ್ಬೊರಿಗೂ ಬೇನೆ ವಿಚಿತ್ರ ವೇದನೆ ಒಬ್ಬರನ್ನೊಬ್ಬರ ಬುಟ್ಟು ಬದುಕುವ ಜೀವನ ನೆನ್ಸಿಕಂಡರೆ ಇಬ್ಬರ ಎದೆಲೂ ದುಃಖ ತಾಂಡವಾವಾಡುತ್ತಿತ್.

ಊಟ ತಿಂಡಿನ ಬಗ್ಗೆ ಅದರಲ್ಲಿ ಕಣ್ಣು ಮುಚ್ಚಿ ಮಲ್‌ಗಿದ್ದ ಎಷ್ಟೊ ಹೊತ್ತ್‌ನವರೆಗೆ ನಿದ್ದೆಯಿಲ್ಲದೆ ಒದ್ದಾಡುತ್ತಿತ್ತು. ಇಪ್ಪತ್ತೆರಡೂ ವರ್ಷ ಒಂದು ಕ್ಷಣ ಬುಟ್ಟು ಇರದ ಅವಳಿಗಳಿಗೆ ಈಗ ಅಗಲುವ ಸಮಯ ಹಕ್ಕಲೆ ಬಾತುತೇಳಿಕಾನ ಸಹಿಸಿಕಾಗದಾ ನೋವು ಅನುಭವಿಸಿದ್ದವ್ಹಂಗೆ ಗೊತ್.

ಅಂದು ರಾತ್ರಿ 1 ಗಂಟೆ ಆದರೂ ರಾಧಿಕಗೆ ನಿದ್ದೆನೇ ಬಾತುಲೆ. ವಿಚಿತ್ರ ಸಂಕಟ, ತಲೆಬೇನೆ ಎದೆಬೇನೆನೂ ಎಂತ್ತೊದ್ದು ಗೊತ್ತಾದುಲೆ ಎಷ್ಟೂ ಪ್ರಯತ್ನಿಸಿದರೂ ನಿದ್ದೆ ಬಾದುಲೆ ರಮ್ಯ ತೇಳಿ ಮೆಲ್ಲನೆ ಕರ್‌ತ್ತು ಅವಳು 'ಹೂಂ' ಹೇಳಿಕಾನ ನಿದ್ದೆ ಬಂದರೋಕು ತೇಳಿ ನೀರು ಕುಡ್‌ದ್ದು ಬಾಕಾನ ಅವ್ವ ಅಮ್ಮನ ಮಾತು ಕೇಳ್‌ತ್ತು. ಇಷ್ಟೊತ್ತಿಗೆ, ಎಂತ ಮಾತು ತೇಳಿ ಅಲಿಸಿತ್.

'ಸಮಾಧಾನ ಮಾಡಿಕ' ಅಪ್ಪನ ಸಾಂತ್ವನದ ಮಾತು ಕೇಳಿ ಬಾತಿತ್. ಮಗಕ್ಕ ಮೊದುವೆಯಾಗಿ ಹೋದವೆತೇಳಿ ಅವ್ವ ಸಂಕಟ ಪಟ್ಟದೆ ಆಗಿರೋಕು. ಪಾಪ ತೇಳಿಕೊಂಡು ಬಾಕಾನ ರಮ್ಯ ಅಡ್ಡ ಬಾತ್. ಎದ್ದು ಬಂದೋದು ಯಾಕೆತೇಳಿ ರಾಧಿಕಳ ನೋಡುತ್.

ನೀರು ಕುಡಿಯಕ್ಕೆತೇಳಿ ಕೈಸನ್ನೆ ಮಾಡಿ ತೋರ್ಸಿಕಾನ ರಮ್ಯ ರೂಮ್ ಕಡೆಗೆ ಕೈತೋರ್ಸಿ ಸುಮ್ಸನೆ ಇರುತೇಳಿ ರಮ್ಯಳ ಬಾಯಿನ ಮುಚ್ಚಿಸಿತ್.

'ನಿಮ್ಮದು ಯಾಕೋ ಜಾಸ್ತಿ ಅತ್'. ನಾ ಸುಮ್ಸನೆ ಇದ್ದೊಷ್ಟು ನನ್ನ ಪರೀಕ್ಷಿಸುತ್ತಾಒಳ್ಳೋರಿ ಪರಿಣಾಮ ನೀವೇ ಎದುರಿಸಿಕೆ ಅದ್! ಅಮ್ಮನ ದೊಡ್ಡ ಸ್ವರ.

ನೀ ಯಾಕೇ ಇಂಥ ಸಣ್ಣ ಬುದ್ಧಿ ತೋರ್‌ಸ್ತಿಯಾ? ಇಬ್ಬರನ್ನು ಒಂದೇ ಲೆಕ್ಕಲಿ ಪ್ರೀತಿಸಿಕೆ ಅಮ್ಮಂಗೇನು ಕಷ್ಟ. ಅದು ನಂಗೆ ಗೊತ್. ಅಮ್ಮಂಗೆ ಎಷ್ಟೇ ಮಕ್ಕ ಇದ್ದರು ಒಂದೇ ಲೆಕ್ಕಲಿ ಕಂಡದ್ದೆ?

'ಇಷ್ಟೆಲ್ಲಾ ತಿಳಿದ್ದು' ಏನೊ ಹೇಳಿಕೆ ಹೋರಟ ಉಗ್ರಾಣಿಗ ಅರ್ಥಕ್ಕೆ ತಂದ್ ತಾರತಮ್ಯ ತೇಳ್‌ಬೊಡಿ ತಿಳಿದು ತಿಳಿದು ಪ್ರಶ್ನೆ ಕೇಳಿರೇ ಕರ್‌ದ್ದು ಹೇಳ್ಳೆ.

ನಿಜಕ್ಕೂ ನಾ ಹೇಳ್ದು ಕೇಳು. ನೀ ತೀಳಿಕ್ಕೊಂಡಿರೂದ್ದು ಸತ್ಯ ಅಲ್ಲ. ಅದು ಚೂರು ಅದಲು ಬದಲು ಆವುಟು.

ಅಂದರೆ ರಮ್ಯ? ರತ್ನ ಮಾತು ಕೇಳುತ್ತಿದ್ದೊ ರಮ್ಯ ರಾಧಿಕ ಇಬ್ಬೊರಿಗೂ ಅದು ಒಗ್ಗಟ್ಟುನಾಂಗೆ ಕೇಳುತ್. ಉತ್ತರನೆ ಗೊತ್ತುಲೆ ಇನ್ನೊಬ್ಬರ ಮಾತು ಕದ್ದು ಕೆಳ್ದು ತಪ್ಪಾದರು. ಮೈ-ಕಿವಿ ಎಲ್ಲಾ ಕೇಳ್‌ತ್ತಾ ನಿಂತೊತ್.

ನಿನ್ನ ಹೆರಿಗೆಗೆ ನರ್ಸಿಂಗ್ ಹೋಮ್‌ಗೆ ಕರುಕೊಂಡು ಹೋಕಾನ ಎದುರಿಗೆ ನನ್ನ ಚೆಡ್ಡಿ ದೊಸ್ತಿ ಬಾಲ ಸಿಕ್ಕಿತ್ತು. ಅಂವ್ವನ ಹೆಣ್ಣ್ ಪವಿತ್ರನಾ ಡೆಲಿವರಿಗೆತೇಳಿ ಕರ್‌ದುಕೊಂಡು ಬಂದಿತ್ತು. ಆಕೆ ಕೂಸುನ ಹೆತ್ತು ಚೂರು ಹೊತ್ತುಲಿ ತೀರಿಕೊಂಡೊತ್. ಹಿಂದೊಮ್ಮೆ ಎಂಟು ತಿಂಗಳ್‌ಲಿ ಗರ್ಭಪಾತ ಆಕಾನ ಪುನಃ ಗರ್ಭಿಣಿ ಅದರೆ ಜೀವಕ್ಕೆ ಅಪಾಯ ಉಂಟು ತೇಳಿ ಡಾಕ್ಟರೂ ಹೇಳಿದ್ದೊ. ಅದರ ನೀ ಕೇಳುತ್ತಲೇ ಮಕ್ಕ ಬೇಕು ತೇಳಿ ಹಠ ಹಿಡ್ದು ಪರಿಣಾಮ ಹಿಂಗಾತ್ತು. ನನ್ನ ಕೈ ಹಿಡಿದ್ದು ಮರ್‌ಟ್ಟೊ ಡಾಕ್ಟರೂ. ಅವು ಮರುಡ್ದೂದರ ನೋಡಿ ನಂಗು ಮರುಡ್ಡಿಕೆ ಬಾತು ನನ್ನ ಜೀವ ಇಂದೊ ನಾಳೆ ತೇಳ್‌ವಂಗೆ, ಅವುಟುನಂಗೆ, ಹಾರ್ಟ್ ಪ್ರೊಬ್ಲೆಮ್. ಹೆಚ್ಚು ತೇಳಿತೆ 5-6 ತಿಂಗ ಬದುಕುದು ಅಷ್ಟೇ ನೀರುಲ್ಲಿ

ಮುಳುಗುವಂಗೆ ಆಸೆರೆಯಾದ ಹುಲ್ಲುಕಡ್ಡಿನ ಹಿಡಿಕಂಡದ್ದೆ ಅದರೆ ನಂಗೆ ದೊಣ್ಣೆನೆ ಸಿಕ್ಕಿದೆ ಅಂದುಕೊಂಡೆ. ನನ್ನ ಕೂಸು ನಿನ್ನ ಜೊತೆಲಿ ಸಾಂಕಿಯಾ? ಅಕಿಲೆತೇಳುಬಡಾ. ನನ್ನ ಬಾಯಿಲಿ ಮಾತೇ ಹೊರಟುತ್ತುಲೆ ದೇವರ ಮೇಲೆ ಭಾರ ಹಾಕಿ ತಂದು ಹಾಕಿದೆ. ನೀ ಆಗ ಅಷ್ಟೆ ಕೂಸುನ ಹೇತ್ತ್, ಬೇನೆಂದ ತೀರಿಹೋದ್. ಆಗ ಅಷ್ಟೆ ಹುಟ್ಟಿ ಕೂಸನ ಅವಳಿ ಮಕ್ಕತೇಳಿ, ಹೇಳಿಕೆ ಡಾಕ್ಟರ್‌ಗೆ ಹೇಳಿ ಒಪ್ಪಿಸಿದೆ. ಅಷ್ಟಿದರೂ ನೀ ನಂಬಿತ್ತುಲೆ, ಅದ್ಹೇಂಗೆ ಹಾಂಗಾದೆ? ನನ್ನ ಹೊಟ್ಟೆಲಿ ಒಂದೇ ಕೂಸು. ಡಾಕ್ಟರ್‌ನ ಸ್ಕ್ಯಾನಿಂಗ್ ರಿಪೋರ್ಟ್ ಸುಳ್ಳಾ? ಇದರಲ್ಲಿ ಏನೊ ಕುತಂತ್ರ ನಡ್‌ಸಿಯೋಳರಿ? ಏನುತೇಳಿ ನಿಜ ಹೇಳೋಕು ಇಲ್ಲೆ ತೇಳಿರೆ ಮಕ್ಕಳಿಗೆ ಹಾಲು ಕೊಡ್‌ದ್ದುಲೆತೇಳುದ್ದೆ. ನರ್ಸಿಂಗ್ ಹೋಮ್‌ನಿಂದ ಮನೆಗೆ ಹೋದ ಮೇಲೆ ಹೇಳನ್ನೆತೇಳಿ ಬಾಯಿ ಮುಚ್ಚಿ ಕರ್‌ದ್ದುಕೊಂಡು ಬಂದೊ. ನೀ ಬಂದ ಮೇಲೆ ಅಂದರೂ ಪಟ್ಟು ಬುಡದೆ ಇರಿಕಾನ ನಿಜ ಸಂಗತಿನ ಮಗಳು ರಾಧಿಕ ತೀಳ್‌ತ್ತ್. ನಮ್ಮಿಬ್ಬರ ಮಗಳು ಮಾತ್ರ ಅಲ್ಲ ಇಬ್ಬೊರು ನಮ್ಮ ಮಕ್ಕ.

ಆತು ನಾವೀಬ್ಬರು ನಮಗಿಬ್ಬರೂ ಈನ್ನೂ ಮೇಲೆ ರಮ್ಯ ರಾಧಿಕ ಬೇರೆ ಅಲ್ಲ ಇಬ್ಬರೂ ಒಂದೆ. ಈ ಎಲ್ಲಾ ಮಾತುನ ಕೇಳುಸ್ಸಿಕೊಂಡ ರಮ್ಯ-ರಾಧಿಕ ಇಬ್ಬೊರೂ ಸದ್ದು ಇಲ್ಲದೆ ರೂಮ್ ಸೇರ್‌ದ್ದೊ, ಮತ್ತೆ ಸರಿಯಾಗಿ ನಿದ್ದೆನಾ ಮಾಡದ್ದೊ. ನೀವುನೂ ನಿದ್ದೆ ಮಾಡಿ ಆತಾ....

* * * * *

ಉಂಡ್ ಹೋದ ಮತ್ತೆ ತಕೊಂಡ್ ಹೊತ್ - ಗಾದೆ

ಗುಬ್ಬಿನ ಸಾಹಸ

ಅದೊಂದು ಅಮವಾಸ್ಯೆ ರಾತ್ರಿ ಹನ್ನೆರಡು ಗಂಟೆ ಹೊತ್ತು. ಅಮ್ಮ ಮನೇಲಿ ಮಂಜನ ದಾರಿ ನೋಡುತ್ತಿತ್. ಆಗ ನಾಯಿ ಬೊಗಳಿಕೆ ಸುರು ಮಾಡ್ತು. ಅಮ್ಮ ಹೊರಗೆ ಬಂದು ನೋಡಿಕಾನ ಮಂಜ ಬಂದು ಮೆಟ್ಟಿಲ ಹಕ್ಕಲೆ ನಿಂತುಟು. ಆಗ ಅಮ್ಮಂಗೆ ಹೊತ್ತಾಗಿ ಬಂದ ಮಂಜನ ನೋಡಿಕಾನ ಒಂದು ಕಡೆಂದ ಸಿಟ್ಟು ಮತ್ತೊಂದು ಕಡೆಂದ ಬೇಜಾರ ಆಗಿ ಸುಮ್ಮನೆ ನಿಂತೊತ್. ಇದರ ನೋಡಿ ಮಂಜ ಕೇಳ್ತ್ ಯಾಕೆ ಅಮ್ಮ ನೀ ಇನ್ನೂ ನಿದ್ದೆ ಮಾಡ್ತ್‌ಲೆ ಅಲಾ ನಿಂದೆ ನಿದ್ದೆ ಬಾದುಲೆನಾ. ಆಗ ಅಮ್ಮ ಸಿಟ್ಟು ತಡೆಯಕೆ ಆಗದೆ ಬೈಯಕೆ ಸುರು ಮಾಡುತ್ತು. ಆಗ ಮಂಜ ಹೇಳುತ್ತು ನೀ ಬೇಜಾರ ಮಾಡುಬಡ ನಂಗೆ ಮಾಸ್ತ್ರ ಕೆಲ್ಸ ಸಿಕ್ಕಿಟು. ಹಂಗೆ ನಾ ಬಾಕನ ಚುರು ತಡ ಆತು. ಇಂದು

ಹೊರ್‌ಟ್ಟ್. ಅಮ್ಮ ಖಾಯಿಲೆ ಹಿಡ್ಸಿಕೊಂಡು ಕಷ್ಟಲಿ ನಮ್ಮ ಶಾಲೆಗೆ ಕಳ್‌ಸ್ಸಿತ್ತ್. ಒಂದು ದಿನ ನಾವು ಶಾಲೆಗೆ ಹೋಗಿ ಮಧ್ಯಾಹ್ನ ಆಕಾನ ನಮ್ಮ ಶಾಲೆನ ಆಫೀಸ್ ರೂಮ್‌ಗೆ ನಮ್ಮ ಕರ್‌ದ್ದೊ ಆಗ ಮೇಡಂ ನೀವು ಮನೆಗೆ ಹೋಗಿ ಅಮ್ಮಂಗೆ ಸೀರಿಯಸ್ಸು ಗಡ. ನಾವು ಮನೆಗೆ ಬಂದು ನೋಡಿಕಾನ ಅಮ್ಮ ಹೋರಟ್ಟು ಹೋಗಿತ್ತ್. ಅಂದುದ್ದಲೆ ಅಮ್ಮನ ಪ್ರೀತಿ ನಾವುಗೆ ಇಲ್ಲಂದ್ಹಾಂಗೆ ಅತ್.



ಹಂಗೆ ಒಂದು ವರ್ಷ ಕಳುತ್ತ್ ಅಪ್ಪಂಗೆ ನಮ್ಮ ಅಮ್ಮನಷ್ಟು ಲಾಯ್‌ಕ್ಕು ನೋಡಿಕೊಂಬಕ್ಕೆ ಅತಿತ್ತ್‌ಲೆ. ಹಂಗೆ ನಮ್ಮ ಲಾಯ್‌ಕ್ಕುಲಿ ನೋಡಿಕೊಂಬೊತೇಳಿ ಅಪ್ಪ ಬೇರೆ ಮೊದುವೆ ಆದ. ಚಿಕ್ಕಮ್ಮ ಮನೆಗೆ ಬಂದ ಮೇಲೆ ನಾವುಗೆ ತುಂಬ ಖುಷಿ ಆತ್. ನಮ್ಮ ಲಾಯ್‌ಕ್ಕುಲಿ ನೋಡಿಕೊಂಬೊತ್ತಿದ್ದೊ. ಹಿಂಗೆ ವರ್ಷ ಕಳಿಯಾಕಾನ ಕೂಸು ಆತ್. ಆಮೇಲೆ ಚಿಕ್ಕಮ್ಮ ಬೇದ ಶುರು ಮಾಡ್‌ದು, ಇನ್ನೂ ಹೆಚ್ಚಾತು. ಅಪ್ಪ ತುಂಬಾ ದೂರ ಕೆಲ್ಸಕ್ಕೆ ಹೊತಿದ್ದೊ. ದುಡ್‌ದ್ದು ಸಿಕ್ಕಿದ ಸಂಬಳನ ತಂದು ಚಿಕ್ಕಮ್ಮನ ಕೈಲಿ ಕೊಡುತ್ತಿದ್ದೊ. ನಾವುಗೆ ಚಿಕ್ಕಮ್ಮ ಎಂತದೂ ಕೊಡುತ್ತಿತ್ತ್‌ಲೆ. ಕ್ರಮೇಣ ನಮ್ಮ ಶಾಲೆಗೆ ಹೋಕೆ ಬುಡುತ್ತಿತ್ತ್‌ಲೆ. ಎಲ್ಲಾ ಕೆಲ್ಸ ನಮ್ಮ ಕೈಲಿ ಮಾಡುಸ್ಸಿತ್ತಿತ್ತ್. ನಾವು ಶಾಲೆಗೆ ಹೋದವೇತೇಳಿ ಹತ ಹಿಡ್‌ದ್ದರೆ ನಮ್ಮ ಬೆನ್ನು ಪೊಡಿಯಾತಿತ್ತು. ಚಿಕ್ಕಮ್ಮನ ಇಂತಹ ಸ್ವಭಾವನ ಸಹಿಸ್ಸಿಕೆ ಆಗದೆ ಅಕ್ಕ ಶಾಲೆಗೆ ತೇಳಿ ಹೋದು ಮತ್ತೆ ಮನೆಗೆ ಬಾತುಲೇ. ನಾ ಅಕ್ಕಂಗೆ ಆಗಿ ಎಷ್ಟೋ ದಿನ ದಾರಿ ಕಾದೆ. ನಂಗೆ ಬೇಜಾರ ಮತ್ತು ಜಾಸ್ತಿ ಆತ್. ಅಪ್ಪ ತಿಂಗಳಿಗೊಮ್ಮೆ ಮನೆಗೆ ಬಾತಿದ್ದೊ. ಅಪ್ಪ

ಮನೆಗೆ ಬಾಕನ ಅಕ್ಕ ಮನೇಲಿ ಇತ್ತ್‌ಲೆ. ವಿಷಯ ತೀಳ್ದು ಅಪ್ಪ ಸಿಟ್ಟುಲಿ ಚಿಕ್ಕಮ್ಮಂಗೆ ಹೊಡಿಯೆಕೆ ಸುರು ಮಾಡ್‌ದ್ನೊ. ಅಕ್ಕ ಎಷ್ಟೋ ಹುಡಿಕ್ಕಿರೂ ಕಾಂಬಕ್ಕೆ ಸಿಕ್ಕಿತ್ತುಲೆ. ಅಪ್ಪ ಮತ್ತೆ ಕೆಲ್ಸಕ್ಕೆ ಹೊರಟ್ಟು ಹೋದ. ಚಿಕ್ಕಮ್ಮಂಗೆ ನನ್ನ ಮೇಲೆ ಮತ್ತಷ್ಟು ಕೋಪ ಜಾಸ್ತಿ ಆತ್. ಅಪ್ಪ ಒಬ್ಬನೇ ಕೆಲ್ಸ ಮಾಡಿ ತಂದು ಹಾಕುತ್ತಿದ್ನೊ. ಅಂದರೂ ನಮ್ಮ ಹಸಿವೆ ಕಮ್ಮಿ ಆತುಲೇ. ನಿನ್ನ ಶಾಲೆ ಖರ್ಚ ನೋಡುದ್ದು ಯಾರು? ಅಷ್ಟು ದುಡ್ಡು ನಮ್ಮೊಟ್ಟಿಗೆ ಇಲ್ಲೆ. ನೀ ಬೇರೆ ಯಾರರ ಮನೇಗೆ ಮನೆ ಕೆಲ್ಸಕ್ಕೆ ಹೋಗು. ಅಂದರೂ ಆ ಗೂಡೆ ಹೊರಟುತ್ತುಲೆ. ಅಪ್ಪ ಬರುವಲ್ಲಿವರೆಗೆ ಮನೆಲಿ ನಿಲ್ಲುವ ಅವಕಾಶ ಕೊಡಿತೇಳಿ ಕೇಳಿಕೊಂಡಿತು. ಆ ಗೂಡೇನ ಮನೇಲಿ ನಿಲ್ಲುವ ಅವಕಾಶನೆ ಕೊಡದೆ ಮನೆಂದ ಕಳ್‌ಸ್ಸಿ ಬುಟ್ಟೊತ್.

ದಿನ ಇಡಿ ನಡಕೊಂಡು ಹೋಕಾನ ದಾರಿಲಿ ಮನೆಗ ಕಾಂಬಕಾನ ಆ ಮನೆಗಳಿಗೆ ಹೋವ ಧೈರ್ಯ ಇಲ್ಲದೆ ಮನುಸ್ಸುಲಿ ನಾ ಬೇಗ ಅಮ್ಮನ ಹಕ್ಕಲೆ ಸೇರಿಕಂಡರೆ ಆದು ತೇಳಿ ಒಲ್ಲದ ಮನುಸ್ಸುಲಿ ಯೋಚನೆ ಮಾಡುತ್ತು. ಕತ್ತಲೆ ಆಕಾನ ಹೆದರಿಕೊಂಡು ಒಂದು ಮನೆಗೆ ಹೊತ್.

ಆ ಮನೆವು ಈ ಗೂಡೇನಾ ನೋಡಿ ನೀ ಯಾರು?

ಮನೆ ಎಲ್ಲಿ?

ಯಾಕೆ ಬಂದೇ ತೇಳಿ ಕೇಳ್ದೊ?.

ನಾ ಕೆಲ್ಸ ಕೇಳಿಕಾನ. ಕಳ್ಳಿ....... ನೀ.

ಕೆಲ್ಸ ಕೇಳಿಕೊಂಡು ಕಳ್ಳತನ ಮಾಡಿಕೇ ಹೊರಟ್ಟುಳ ತೇಳಿ ಹೆದರ್ಸಿದೊ.

ಆಗ

ನಾ

ಮರಡ್ಡಿಕೆ ಸುರು ಮಾಡ್‌ದ್ದೆ. ಆಗ ಅವು ನೀ ನಿಜ ಹೇಳುದ್ದು ತೇಳಿ ಕೇಳಿಕಾನ ಗಂಟಲುಲಿ ಮಾತು ಕಟ್ಟಿದ್ದಾಂಗೆ ಅತ್.

ಆಗ ಮನೆಯರ ಮನುಸ್ಸು ಕರ್‌ಗ್ಗಿ ನಿಂಗೆ ನಾವು ಕೆಲ್ಸ ಕೊಟ್ಟವೇ.

ನೀ ಇಲ್ಲಿಯೇ ಇರು!.

ನೀ ನಮ್ಮ ಮಕ್ಕಳಂಗೆ. ಅಮ್ಮನ ನೆನಪು ಆಕಾನ ಅಮ್ಮನೊಟ್ಟಿಗೆ ಪ್ರೀತಿಲಿ ಇರಕಾಯಿತ್ತು.

ಅಂದುದ್ದ ಆ ಮನೆ ನಮ್ಮ ಮನೇ ತೇಳಿ ತಿಳಿಕೊಂಡು ಎಲ್ಲಾ ರೀತಿಯ ಕೆಲ್ಸ ಮಾಡಿಕೊಂಡು ಇದ್ದೆ. ಅವು ನನ್ನ ಅವರ ಮಕ್ಕಳಂಗೆ ನೋಡುತ್ತಿದ್ದೊ. ಹಿಂಗೆ ವರ್ಷಗ ಕಳ್ದಂಗೆ ಆ ಮನೆವು ನಂಗೆ ಮದುವೆ ಮಾಡಿಕೆ ಮುಂದಾದೊ. ಆ ಮನೇಲಿ ಅಯ್ಯೋನು ಮಂಜನು ಇಬ್ಬರೇ ಅವು ತುಂಬಾ ಬಡೊವು ಆಗಿದ್ದೊ. ಅವು ದುಡುದ್ದೆ ಜೀವನ ಸಾಗಿಸುತ್ತಿದ್ದೊ.

ಅವು ಶಶಿ ಮತ್ತು ರಾಜೀವ ಎಂಬವರ ಮನೆ ಕೆಲ್ಸಕ್ಕೆ ಹೋತಿದ್ದೊ. ಆ ಮನೆಯವರ

ಮರಡ್ಡಿಕೆ ಸುರು ಮಾಡ್‌ದ್ದೆ. ಆಗ ಅವು ನೀ ನಿಜ ಹೇಳುದ್ದು ತೇಳಿ ಕೇಳಿಕಾನ ಗಂಟಲುಲಿ ಮಾತು ಕಟ್ಟಿದ್ದಾಂಗೆ ಅತ್.

ಆಗ ಮನೆಯರ ಮನುಸ್ಸು ಕರ್‌ಗ್ಗಿ ನಿಂಗೆ ನಾವು ಕೆಲ್ಸ ಕೊಟ್ಟವೇ.

ನೀ ಇಲ್ಲಿಯೇ ಇರು!.

ನೀ ನಮ್ಮ ಮಕ್ಕಳಂಗೆ. ಅಮ್ಮನ ನೆನಪು ಆಕಾನ ಅಮ್ಮನೊಟ್ಟಿಗೆ ಪ್ರೀತಿಲಿ ಇರಕಾಯಿತ್ತು.

ಅಂದುದ್ದ ಆ ಮನೆ ನಮ್ಮ ಮನೇ ತೇಳಿ ತಿಳಿಕೊಂಡು ಎಲ್ಲಾ ರೀತಿಯ ಕೆಲ್ಸ ಮಾಡಿಕೊಂಡು ಇದ್ದೆ. ಅವು ನನ್ನ ಅವರ ಮಕ್ಕಳಂಗೆ ನೋಡುತ್ತಿದ್ದೊ. ಹಿಂಗೆ ವರ್ಷಗ ಕಳ್ದಂಗೆ ಆ ಮನೆವು ನಂಗೆ ಮದುವೆ ಮಾಡಿಕೆ ಮುಂದಾದೊ. ಆ ಮನೇಲಿ ಅಯ್ಯೋನು ಮಂಜನು ಇಬ್ಬರೇ ಅವು ತುಂಬಾ ಬಡೊವು ಆಗಿದ್ದೊ. ಅವು ದುಡುದ್ದೆ ಜೀವನ ಸಾಗಿಸುತ್ತಿದ್ದೊ.

ಅವು ಶಶಿ ಮತ್ತು ರಾಜೀವ ಎಂಬವರ ಮನೆ ಕೆಲ್ಸಕ್ಕೆ ಹೋತಿದ್ದೊ. ಆ ಮನೆಯವರ ಆಸೆ ಈಡೇರ್‌ತ್ತ್. ಮೊದುವೆ ಅತ್. ಯಾಗೋಳು ನಾವು ಆ ಮನೆಗೆ ಕೆಲ್ಸಕ್ಕೆ ಹೊತಿದ್ದೊ. ಅಪ್ಪ ಮತ್ತೆ ಕೆಲ್ಸಕ್ಕೆ ಹೋತಿದ್ದೊ. ಅವು ಮರ ಹತ್ತಿ ಕಡಿಯಾಕಾನ ಮರದ ಗೆಲ್ಲು ಅವರ ಮೇಲೆ ಬಿದ್ದು ಅವರ ಸೊಂಟ ತುಂಡಾಗಿತ್ತು. ಆಗ ಕೂಸಿಗೆ ಐದು ವರ್ಷ ಆಗಿತ್ತು. ನಿನ್ನ ಶಾಲೆಗೆ ಸೇರ್‌ಸಿ ಅಪ್ಪನ ಮನೇಲಿ ಬುಟ್ಟು ಕೆಲ್ಸಕ್ಕೆ ಹೋತಿದ್ದೆ. ಎಷ್ಟೂ ಕಷ್ಟ ಇದ್ದರೂ ನಿನ್ನ ಓದುಸ್ನೊಕು ತೇಳಿ ಅಪ್ಪ ಹೇಳುತ್ತಿದ್ದೊ. ಅಂವ್ವ ಓದಿ ಕೆಲ್ಸ ಸಿಕ್ಕಿದ ಮೇಲೆ ನಂಗೆ ಆ ದೇವರೇ ದಾರಿ ತೋರ್‌ಸಲಿತೇಳಿ ದೇವರೊಟ್ಟಿಗೆ ಬೇಡುತ್ತಿದ್ದೊ. ಆ ಸಂತೋಷದ ದಿನ ಅವುಕ್ಕೆ ಇಲ್ಲದ್ದಾಂಗೆ ಆತು. ಗುಬ್ಬಿನ ಜೀವನ ಚರಿತ್ರೆನ ಕೇಳ್ದ ಹರಿ ಅವ್ವನ ದೇವರಾಂಗೆ ಪೂಜಿಸಿತು. ಗುಬ್ಬಿ ಮತ್ತೆ ದುಃಖ ಜೀವ ಕಳ್‌ದ್ದು ಸಿಕ್ಕಿದ್ದಂಗೆ ಆತ್. ಇಂದು ಕಷ್ಟಪಟ್ಟರೇ ನಾಳೇ ಸುಖ ಜೀವನ ತೇಳುವ ಮಾತು ಹರಿನ ಕೆಬಿಲಿ ಗುಣು ಗುಟ್ಟುತಿತ್ತು. ನೀವು ಕೂಡ ಕಷ್ಟಪಟ್ಟು ಓದಿರೇ ಮುಂದೆ ಬಾವರೀ ತೇಳುವ ಭರವಸೆ ನಂಗೆಟ್ಟು.

* * * * *

ಮುಳ್ಳುನ ಮುಳ್ಳುಂದಲೆ ತೆಗೇಕು – ಗಾದೆ

ಬೊಳ್ಪು



ಲೋಕೇಶ್ ಕುಂಚಡ್ಕ

ಸುಳ್ಯ ತಾಲೂಕ್‌ನ ಆಲೆಟ್ಟಿ ಗ್ರಾಮದ ಕುಂಚಡ್ಕ ಮನೆತನಲಿ ಹುಟ್ಟಿದ ಲೋಕೇಶ್, ಪ್ರಾಥಮಿಕ ಶಿಕ್ಷಣನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಾರ್ಕೋಡು (ಆಲೆಟ್ಟಿ) ಶಾಲೆಯಲ್ಲಿ ಮುಗಿಸಿ ಬಳಿಕ, ಪ್ರೌಡ ಶಿಕ್ಷಣನ ಆಲೆಟ್ಟಿ ಶಾಲೆ, ಪಿಯುಸಿ ಮತ್ತೆ ಪದವಿನ ಎನ್ನೆಂಸಿಯಲ್ಲಿ ಮುಗಿಸಿ, ಬಳಿಕ ಶಿಕ್ಷಕ ತರಬೇತಿನ ಮಂಗಳೂರು ಶ್ರೀನಿವಾಸ ಶಿಕ್ಷಕ ಮಹಾವಿದ್ಯಾಲಯದಲ್ಲಿ ಮುಗ್ಸಿ. ಅಲ್ಪಕಾಲ ಕೋಲ್ಚಾರು ಶಾಲೆಲಿ ಶಿಕ್ಷಕರಾಗಿ ದುಡಿದ ಇವರು ಪ್ರಸ್ತುತ ಕನ್ನಡ ಸ್ನಾತಕೋತ್ತರ ಪದವಿ ವ್ಯಾಸಂಗವನ್ನು ಮಾಡುತ್ತಿದ್ದಾರೆ. ಇವರದ್ ಬಹುಮುಖ ಪ್ರತಿಭೆ. ಯಕ್ಷಗಾನ, ನಾಟಕ, ಆಟೋಟ, ಹೀಗೆ ಬರವಣಿಗೆಲಿ ಕೂಡ ತೊಡಗಿಸಿಕಂಡುಟು. ಹಲವಾರ್ ಕವಿಗೋಷ್ಠಿಲಿ ಭಾಗವಹಿಸಿದ ಇವು ರಾಜ್ಯ, ರಾಷ್ಟ್ರಮಟ್ಟದ ವಿಚಾರಗೋಷ್ಠಿ ಪ್ರಬಂಧ ಮಂಡಿಸಿದ ಅನುಭವ ಇವರದ್.

– ಸಲಹಾ ಸಮಿತಿ